

# ಶಂಕರತತ್ತ್ವ

(ಪ್ರಸ್ಥಾನತ್ರಯಶಾಂಕರಭಾಷ್ಯ ವಾಕ್ಯಗಳನ್ನು ಹೆಣೆದು
ಸಿದ್ಧಗೊಳಿಸಿರುವ ಸಿದ್ಧಾಂತಬೋಧಕ ಗ್ರಂಥ)





ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥

'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

ಅಧ್ಯಾತ್ಮಗ್ರಂಥಾವಳಿ

# ಶಂಕರತತ್ತ್ವ

(ಪ್ರಸ್ಥಾನತ್ರಯಶಾಂಕರಭಾಷ್ಯವಾಕ್ಯಗಳನ್ನು ಹೆಣೆದು
ಸಿದ್ಧಗೊಳಿಸಿರುವ ಸಿದ್ಧಾಂತಬೋಧಕ ಗ್ರಂಥ)

ಬರೆದವರು :

ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

**ಕ್ರಮಾಂಕ: 198**
**Price List Catalog Sl.No. 39**

**ಅಧ್ಯಾತ್ಮಪ್ರಕಾಶಕಾರ್ಯಾಲಯ**

**ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ**
**ದೂರವಾಣಿ: 08175-273820**
website: www.adhyatmaprakasha.org
E-mail: secretary@adhyatmaprakasha.org
coordinator_apk@yahoo.com

**ಬೆಂಗಳೂರು ಶಾಖೆ :**

**ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,**
**ತ್ಯಾಗರಾಜನಗರ, ಬೆಂಗಳೂರು - 560 028 ದೂ : 080-2676 5548**
E-mai: shankara.bhaskara@gmail.com
apkbooksinfo@gmail.com

**2017**

**Shankaratattva** ಶಂಕರತತ್ತ್ವ
Written by Sri Sri Satchidanandendra Saraswati Swamiji,
Published by Adhyatma Prakasha Karyalaya, Holenarasipura-573211,
Hassan District, Karnataka State, INDIA. **Phone: 08175-273820**

website : www.adhyatmaprakasha.org
E-mail : secretary@adhyatmaprakasha.org
coordinator_apk@yahoo.com

ಮೊದಲನೆಯ ಮುದ್ರಣ 1991 - (1000 ಪ್ರತಿಗಳು)
ಎರಡನೆಯ ಮುದ್ರಣ 2017 - (500 ಪ್ರತಿಗಳು)

ಮುದ್ರಣ ಕಾಗದ : **70 GSM NS Maplitho**

ಪುಟಗಳು : vi+87=93

**ಬೆಲೆ : ರೂ. 40/-**

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ :*

**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ - 573 211, ದೂರವಾಣಿ: 08175-273820

**Bengaluru Branch :**
**Adhyatma Prakasha Karyalaya**
No. 68, A.P.K. Road, 6th Main, 2nd Block
Thyagarajanagar, Bengaluru-560 028. Phone : 080-26765548
E-mail: shankara.bhaskara@gmail.com
apkbooksinfo@gmail.com

ಮುದ್ರಣ ಸ್ಥಾನ:
ಶ್ರೀರಾಮ ಪ್ರಿಂಟರ್ಸ್
ನಂ.25, 15ನೇ ಕ್ರಾಸ್, ಶ್ರೀನಿಧಿಲೇಔಟ್,
ಬೆಂಗಳೂರು - 560 062. ಮೊಬೈಲ್: 98453 46197

# ಮುನ್ನುಡಿ

ಶಂಕರವೇದಾಂತಸಿದ್ಧಾಂತವನ್ನು ಅಧ್ಯಯನಮಾಡಿ ಅನುಷ್ಠಾನದಲ್ಲಿಯೂ ಅಳವಡಿಸಿಕೊಳ್ಳಲು ಇಚ್ಛಿಸುವಂಥ ಜಿಜ್ಞಾಸುಗಳ ಅನುಕೂಲಕ್ಕಾಗಿ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಕನ್ನಡಭಾಷೆಯಲ್ಲಿ ನೂರಾರು ಗ್ರಂಥಗಳನ್ನು ರಚಿಸಿದ್ದಾರೆ. ಅಲ್ಲದೆ ಅವರೇ ಸಂಪಾದಕರಾಗಿಯೂ ಲೇಖಕರಾಗಿಯೂ ನಿರ್ವಹಿಸುತ್ತಿದ್ದ ಮಾಸಪತ್ರಿಕೆ "ಅಧ್ಯಾತ್ಮಪ್ರಕಾಶ"ದಲ್ಲಿಯೂ ಕೆಲವು ಧಾರಾವಾಹಿ ಹಾಗೂ ಸ್ವತಂತ್ರಲೇಖನಗಳ ಮೂಲಕವೂ ಓದುಗರನ್ನು ಅನುಗ್ರಹಿಸಿರುತ್ತಾರೆ. "ಕರ್ನಾಟಕದ ಅಭಿನವಶಂಕರಾಚಾರ್ಯರೆನಿಸಿದ ಶ್ರೀಶ್ರೀಗಳವರ ಆಳವಾದ ಪಾಂಡಿತ್ಯ, ನಿಷ್ಕೃಷ್ಟವಾದ ಬರವಣಿಗೆ, ಸರಳವಾದ ಶೈಲಿ, ವ್ಯಾಖ್ಯಾನಗಳಲ್ಲಿರುವಂತೆ ತರ್ಕಕರ್ಕಶವಾದ ಹಾಗೂ ಖಂಡನಮಂಡನಗಳ ಗಡಿಬಿಡಿಯಿಲ್ಲದ, ತಿಳಿನೀರಿನ ಝರಿಯಂತೆ ಹರಿಯುವ ವಿಚಾರಸರಣಿ"ಗಳಿಂದ ಆಕರ್ಷಿತರಾದ ಅನೇಕ ಜಿಜ್ಞಾಸುಗಳು ಈಗಲೂ ಪ್ರಭಾವಿತರಾಗಿ ಅವರ ಸಾಹಿತ್ಯವನ್ನು ಓದುವ ಬಯಕೆಯನ್ನು ಮುಂದಿಡುತ್ತಿದ್ದಾರೆ. ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ 34, 35ನೆಯ ಸಂಪುಟಗಳಲ್ಲಿ (1964ನೆಯ ಸೆಪ್ಟೆಂಬರ್‌ನಿಂದ 1966ನೆಯ ಆಗಸ್ಟ್ ಪೂರ) ಧಾರಾವಾಹಿಯಾಗಿ ಪ್ರಕಟವಾದ **'ಶಂಕರತತ್ತ್ವ'** ಎಂಬ ಹೆಸರಿನ ಲೇಖನಗಳನ್ನೋದಿ ಆಕರ್ಷಿತರಾದ ಶಿವಮೊಗ್ಗ ಜಿಲ್ಲೆಯ ಮತ್ತೂರಿನ ವೇ॥ ಬ್ರ॥ ಶ್ರೀ॥ ಕೇಶವಾವಧಾನಿಗಳವರು ಈ ಲೇಖನಗಳನ್ನು ಪ್ರತ್ಯೇಕ ಪುಸ್ತಕರೂಪದಲ್ಲಿ ಪ್ರಕಟಿಸಬೇಕೆಂದು ಸೂಚಿಸಿದರು. ಅದರಂತೆ ವಿಷಯವನ್ನು ಸಂಗ್ರಹಿಸಿ ಅದೇ ಹೆಸರಿನ ಗ್ರಂಥವಾಗಿ ಈಗ ಹೊರತರಲಾಗಿದೆ.

ಈ ಪುಣ್ಯಕಾರ್ಯಕ್ಕೆ ವೇ॥ ಕೇಶವಾವಧಾನಿಗಳ ಚಿಕ್ಕಪ್ಪಂದಿರಾದ ವೇ॥ ಅನಂತನಾರಾಯಣಾವಧಾನಿಗಳು (ಮತ್ತೂರಿನ ಪೂಜ್ಯ ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಶ್ರೀಅದ್ವೈತಾನಂದೇಂದ್ರಸರಸ್ವತೀಸ್ವಾಮಿಗಳ ಪೂರ್ವಾಶ್ರಮದ ಔರಸಪುತ್ರರು) ಉದಾರವಾಗಿ ಎರಡುಸಾವಿರರೂಪಾಯಿಗಳ ಸಹಾಯಧನವನ್ನು ಒದಗಿಸಿ ಪ್ರೋತ್ಸಾಹಿಸಿದ್ದಾರೆ. ಶ್ರೀಯುತರ ಸಹೋದರ ವರ್ಗದವರೂ ಪುತ್ರವರ್ಗದವರೂ ಪಿತೃವರ್ಯರೂ – ಎಲ್ಲರೂ ಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಸಾಕ್ಷಾತ್ ಶಿಷ್ಯರೂ

ಅನುಯಾಯಿಗಳೂ ಆಗಿದ್ದು ಶ್ರೀಶ್ರೀಗಳವರ ಸಂಪ್ರದಾಯದ ಅದ್ವೈತವೇದಾಂತ ಪ್ರಚಾರಕ್ಕೆ ಹೃತ್ಪೂರ್ವಕವಾದ ಸಹಕಾರ ಸೇವೆಗಳನ್ನು ಸಮರ್ಪಿಸುತ್ತಿದ್ದಾರೆ. ಮತ್ತೂರಿನಲ್ಲಿಯೇ ಒಂದು ಅಧ್ಯಾತ್ಮವಿದ್ಯಾನಿಲಯವನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಸಂಸ್ಕೃತ, ವೇದ, ವೇದಾಂತಪಾಠಗಳನ್ನು ನಡೆಸುತ್ತಾ ಪರಂಪರೆಯನ್ನು ಬೆಳೆಸುತ್ತಿದ್ದಾರೆ. ಇಂಥ ಮಹಾಶಯರುಗಳ ಬೆಂಬಲವು ಹೆಚ್ಚುಹೆಚ್ಚಾಗಿ ದೊರಕಿದಂತೆಲ್ಲ ಅಧ್ಯಾತ್ಮ ಪ್ರಕಾಶಕಾರ್ಯಾಲಯವು ತನ್ನ ಸೇವಾಕ್ಷೇತ್ರವನ್ನು ವಿಸ್ತರಿಸಲಿದೆ.

ಕಾರ್ಯಾಲಯದ ಪ್ರಧಾನ ಚಟುವಟಿಕೆಯಾದ ಅಧ್ಯಾತ್ಮಗ್ರಂಥಗಳ ಪ್ರಕಟನೆಗೆ ಮಹಾಜನರು ಹೆಚ್ಚುಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಪ್ರಾರ್ಥಿಸಿದೆ. ದಾನಗಳಲ್ಲೆಲ್ಲ ಬ್ರಹ್ಮವಿದ್ಯಾದಾನವೂ ಬ್ರಹ್ಮವಿದ್ಯಾ ಪ್ರತಿಪಾದಕವಾದ ಸಾಹಿತ್ಯಪ್ರಚಾರವೂ ಹೆಚ್ಚಿನ ಪುಣ್ಯಕೆಲಸವೆಂಬುದನ್ನು ಕರ್ನಾಟಕದ ಮಹಾಜನರು ಮನಗಂಡು ತಮ್ಮ ಸಂಪಾದನೆಯ ಧರ್ಮಾಂಶವನ್ನು ಇಂಥ ಪ್ರಕಟನೆಗಳಿಗೆ ವಿನಿಯೋಗಿಸುವಂತೆ ಶ್ರೀ ಜಗದ್ಗುರು ಶಂಕರಭಗವತ್ಪಾದರು ಪ್ರೇರಿಸಲೆಂದು ಬೇಡುವೆನು.

ಇತಿ

ಹೊಳೆನರಸೀಪುರ — ಸಜ್ಜನವಿಧೇಯ,

ತಾ॥ 1–10–1991 — **ಸಂಪಾದಕ**

# ಪ್ರಕಾಶಕರ ಬಿನ್ನಹ

## (ಎರಡನೆಯ ಮುದ್ರಣ)

ಶಂಕರವೇದಾಂತದ ಪ್ರಕ್ರಿಯೆಗಳನ್ನು ಸಾಮಾನ್ಯರಿಗೂ ಒದಗಿಸಬೇಕೆಂದು ''ಅಧ್ಯಾತ್ಮಪ್ರಕಾಶ'' ಮಾಸಪತ್ರಿಕೆಯನ್ನು ಆರಂಭಿಸಿ ಅತಿ ಗಹನವಾದ ತತ್ತ್ವವನ್ನು ಅತಿಸರಳವಾಗಿ ಶ್ರೀ ಶ್ರೀಗಳವರು ಬೋಧಿಸಿದರು. ಅಂತಹ ಲೇಖನಗುಚ್ಛಗಳಲ್ಲಿ **'ಶಂಕರತತ್ತ್ವ'ವೂ** ಒಂದು. ಇದರಲ್ಲಿ ಭಾಷ್ಯವಾಕ್ಯಗಳನ್ನೇ ಉದಾಹರಿಸುತ್ತಾ ಪ್ರಸ್ಥಾನತ್ರಯಗಳಲ್ಲಿರುವ ಪ್ರಧಾನಪ್ರಕ್ರಿಯೆಗಳ ಸಾರವನ್ನೆಲ್ಲ ಹಿಂಡಿಟ್ಟಿದ್ದಾರೆ. ಇದೇ ರೀತಿಯಲ್ಲಿ 'ಶಂಕರವೇದಾಂತಸಾರ' ಎಂಬ ಗ್ರಂಥವನ್ನೂ ರಚಿಸಿರುತ್ತಾರೆ. ಇವೆರಡು ಗ್ರಂಥಗಳೂ ಭಾಷ್ಯವಾಕ್ಯಗಳನ್ನೇ ಹಿಡಿದು ತತ್ತ್ವಚಿಂತನೆ ಮಾಡಬೇಕೆನ್ನುವ ಜಿಜ್ಞಾಸುಗಳಿಗೆ ಅತ್ಯುಪಯುಕ್ತವಾದುದು. 1991ರ ಮುದ್ರಣದ ಪ್ರತಿಗಳು ಮುಗಿದನಂತರ ರಘುರಾಕ್ಸ್ ಮೂಲಕ ಕೆಲವು ಪ್ರತಿಗಳನ್ನು 2015ರಲ್ಲಿ ಮಾಡಿಸಲಾಯಿತು. ಈಗ (2017) ಮತ್ತೆ ಮುದ್ರಣದ ದೋಷಗಳನ್ನು ತಿದ್ದಿ, ತಪ್ಪಾಗಿದ್ದ ಖಂಡದ ಸಂಖ್ಯೆಗಳನ್ನು ಸರಿಪಡಿಸಿ ವಿಷಯಾನುಕ್ರಮಣಿಕೆಯನ್ನು ಜೋಡಿಸಿ, ಮುದ್ರಿಸಲಾಗಿದೆ.

ಈ ಗ್ರಂಥಮುದ್ರಣಕ್ಕೆ ಶ್ರೀಯುತರಾದ 1. ಶ್ರೀ ಎಸ್.ವಿ. ಗಿರೀಶ್. ಬೆಂ., 2. ಶ್ರೀ ಶಶಾಂಕ, 3. ಶ್ರೀ ಜಿ.ಆರ್. ಶೇಷಾದ್ರಿ , ಬೆಂ., ಮಹನೀಯರು ಉದಾರವಾಗಿ ಧನಸಹಾಯ ನೀಡಿರುತ್ತಾರೆ. ಅವರುಗಳಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳು. ಎಂದಿನಂತೆ ಬ್ರಹ್ಮವಿದ್ಯಾಪ್ರಸಾರದ ಕಾರ್ಯಕ್ಕೆ ಮಹಾಜನಗಳು ಉದಾರವಾಗಿ ಸಹಾಯಮಾಡಬೇಕೆಂದು ಪ್ರಾರ್ಥನೆ.

1-10-2017 **ಪ್ರಕಾಶಕರು**

ಹೊಳೆನರಸೀಪುರ

# ವಿಷಯಾನುಕ್ರಮಣಿಕೆ


| | | |
|---|---|---|
| | ಪೀಠಿಕೆ | 1 |
| 1. | ಪರಮಾರ್ಥ, ಸಮಗ್ಜ್ಞಾನ | 6 |
| 2. | ಬ್ರಹ್ಮ, ಆತ್ಮ | 8 |
| 3. | ಬ್ರಹ್ಮವನ್ನು ಅರಿತುಕೊಳ್ಳುವದು ಯಾವ ಪ್ರಮಾಣದಿಂದ ? | 10 |
| 4. | ಶಾಸ್ತ್ರಜನ್ಯ ಜ್ಞಾನವೂ ಅದರ ಫಲವೂ | 34 |
| 5. | ಪರತತ್ತ್ವವನ್ನು ನಿಷೇಧಮುಖವಾಗಿ ಉಪದೇಶಿಸುವದು | 37 |
| 6. | ಶಾಸ್ತ್ರ, ಅನುಭವ, ತರ್ಕ | 43 |
| 7. | ಅಧ್ಯಾರೋಪಾಪವಾದ | 47 |
| 8. | ಅಧ್ಯಾಸವೂ ಅಧ್ಯಾರೋಪಾಪವಾದ ನ್ಯಾಯವೂ | 53 |
| 9. | ಶಾಸ್ತ್ರಾಚಾರ್ಯಬೋಧೆ | 57 |
| 10. | ಅವಸ್ಥಾತ್ರಯ, ಕಾರ್ಯಕಾರಣಭಾವ | 63 |
| 11. | ಜೀವೇಶ್ವರ ವಿಭಾಗ | 68 |
| 12. | ದೃಷ್ಟೃದೃಶ್ಯವಿವೇಕ | 79 |
| 13. | ಪಂಚಕೋಶ ವಿವೇಕ | 81 |
| | ಉಪಸಂಹಾರ | 85 |


* * * * *

॥ ಓಂ ॥

# ಶಂಕರತತ್ತ್ವ

## ಪೀಠಿಕೆ

ಶಂಕರತತ್ತ್ವವನ್ನು ಕುರಿತು ಕೆಲವು ಅಭಿಪ್ರಾಯಗಳನ್ನು ವಾಚಕರ ಮುಂದೆ ಇಡಬೇಕೆಂದು ಸಂಕಲ್ಪಿಸಿರುತ್ತೇನೆ. 'ಶಂಕರತತ್ತ್ವ'ವೆಂದರೆ ಮಂಗಲಕರವಾದ ತತ್ತ್ವ, ಶಂಕರಭಗವತ್ಪಾದರ ವಿಷಯದ ತತ್ತ್ವ, ಶಂಕರಭಗವತ್ಪಾದಾಚಾರ್ಯರು ಉಪದೇಶಿಸಿರುವ ತತ್ತ್ವ – ಇಷ್ಟನ್ನೂ ಗ್ರಹಿಸಬೇಕು. 'ತತ್ತ್ವ'ವೆಂದರೆ ವಸ್ತುವಿನ ಯಾಥಾರ್ಥ್ಯವು. ನಿಜವು ಯಾವಾಗಲೂ ಮಂಗಲಕರವಾಗಿಯೇ ಇರುತ್ತದೆ; ಏಕೆಂದರೆ ಅದರ ಜ್ಞಾನವು ಅಮಂಗಲವಾದ ತಪ್ಪುತಿಳಿವಳಿಕೆಯನ್ನು ತೊಲಗಿಸುತ್ತದೆ.

ತತ್ತ್ವವೆಂಬುದು ಯಾವ ವಸ್ತುವಿನ ವಿಷಯದ ನಿಜಕ್ಕಾದರೂ ಅನ್ವಯಿಸುವ ಶಬ್ದವು; ಆದರೂ ಇಲ್ಲಿ ಆ ಶಬ್ದವನ್ನು ಶಂಕರಭಗವತ್ಪಾದರು ಒಪ್ಪಿರುವ ಅರ್ಥದಲ್ಲಿಯೇ ಬಳಸಲಾಗುವುದು.

**ತತ್ ಇತಿ ಸರ್ವನಾಮ । ಸರ್ವಂ ಚ ಬ್ರಹ್ಮ, ತಸ್ಯ ನಾಮ ತತ್ ಇತಿ। ತದ್ಭಾವಃ ತತ್ತ್ವಮ್ । ಬ್ರಹ್ಮಣೋ ಯಾಥಾತ್ಮ್ಯಮ್ ॥** ಗೀ.ಭಾ. 2–16.

ತತ್ ಎಂಬುದು ಸರ್ವನಾಮ, ಎಲ್ಲಕ್ಕೂ ಹೆಸರು. ಸರ್ವವೂ ಆಗಿರುವದು ಬ್ರಹ್ಮ; ಅದಕ್ಕೆ 'ತತ್' (ಅದು) ಎಂಬ ಪ್ರಸಿದ್ಧವಾಚಕವಾದ ಹೆಸರು. ಅದರ ಭಾವವು 'ತತ್ತ್ವ'ವು ಎಂದರೆ ಬ್ರಹ್ಮದ ಯಾಥಾತ್ಮ್ಯವು. ಪರಮಾರ್ಥವನ್ನು ಇದ್ದದ್ದು ಇದ್ದಂತೆ ಕಂಡುಕೊಂಡಿರುವವರೇ ತತ್ತ್ವದರ್ಶಿಗಳು. ಅಂಥವರು ಹೇಳಿಕೊಡುವ ತಿಳಿವಳಿಕೆಯೇ ಕಾರ್ಯಕಾರಿಯಾಗುತ್ತದೆ. ಅದರಿಂದಲೇ ಅಮಂಗಲವಾದ ಭ್ರಾಂತಿಜ್ಞಾನವು ಮತ್ತೆ ತಲೆಯೆತ್ತದಂತೆ ತೊಲಗುವದು, ಆದ್ದರಿಂದ ಆ ಜ್ಞಾನವೇ 'ಶಂಕರಜ್ಞಾನವು'.

**ಜ್ಞಾನವನ್ತೋऽಪಿ ಕೇಚಿತ್ ಯಥಾವತ್ ತತ್ತ್ವದರ್ಶನಶೀಲಾಃ, ಅಪರೇ ನ ; ಅತೋ ವಿಶಿನಷ್ಟಿ ತತ್ತ್ವದರ್ಶಿನಃ ಇತಿ । ಯೇ ಸಮ್ಯಗ್ದರ್ಶಿನಃ, ತೈರುಪದಿಷ್ಟಂ ಜ್ಞಾನಂ ಕಾರ್ಯಕ್ಷಮಂ ಭವತಿ ನೇತರತ್ ಇತಿ ಭಗವತೋ ಮತಮ್ ॥** **ಗೀ. ಭಾ. 4–34.**

ಜ್ಞಾನವಿದ್ದವರಲ್ಲಿಯೂ ಕೆಲವರು ತತ್ತ್ವವನ್ನೇ ಕಾಣುತ್ತಿರುವ ಸ್ವಭಾವದವರು, ಉಳಿದವರಲ್ಲ; ಆದ್ದರಿಂದ '**ತತ್ತ್ವದರ್ಶಿಗಳು**' ಎಂಬ ವಿಶೇಷಣವನ್ನು ಜ್ಞಾನಿಗಳಿಗೆ ಇಲ್ಲಿ (ಗೀ. 4–34) ಭಗವಂತನು ಕೊಟ್ಟಿರುತ್ತಾನೆ. ಅವರು ಹೇಳಿ ಕೊಡುವ ಜ್ಞಾನವೇ ಫಲವನ್ನು ಕೊಡಬಲ್ಲದೇ ಹೊರತು ಬೇರೆಯ ಜ್ಞಾನವು ಫಲಕಾರಿಯಾಗಲಾರದು ಎಂಬುದು ಭಗವಂತನ ಮತವು.

**ತಥಾ ಸತಿ ಇದಮಪಿ ಸಮರ್ಥಂ ವಚನಮ್ – ಯತ್ ಜ್ಞಾತ್ವಾ ಯತ್ ಜ್ಞಾನಂ ತೈರುಪದಿಷ್ಟಮ್ ಅಧಿಗಮ್ಯ ಪ್ರಾಪ್ಯ ಪುನರ್ಭೂಯೋ ಮೋಹಮ್ ಏವಮ್ – ಯಥಾ ಇದಾನೀಂ ಮೋಹಮ್ ಗತೋऽಸಿ ಪುನರೇವಮ್ – ನ ಯಾಸ್ಯಸಿ ಹೇ ಪಾಣ್ಡವ । ಕಿಞ್ಚ ಯೇನ ಜ್ಞಾನೇನ ಭೂತಾನಿ ಅಶೇಷೇಣ ಬ್ರಹ್ಮಾದೀನಿ ಸ್ತಮ್ಬಪರ್ಯನ್ತಾನಿ ದ್ರಕ್ಷ್ಯಸಿ ಸಾಕ್ಷಾತ್ ಆತ್ಮನಿ ಪ್ರತ್ಯಗಾತ್ಮನಿ "ಮತ್ಸಂಸ್ಥಾನಿ ಇಮಾನಿ ಭೂತಾನಿ" ಇತಿ; ಅಥೋ ಅಪಿ ಮಯಿ "ವಾಸುದೇವೇ ಪರಮೇಶ್ವರೇ ಚ ಇಮಾನಿ" ಇತಿ । ಕ್ಷೇತ್ರಜ್ಞೇಶ್ವರೈಕತ್ವಂ ಸರ್ವೋಪನಿಷತ್ಪ್ರಸಿದ್ಧಂ ದ್ರಕ್ಷ್ಯಸಿ ಇತ್ಯರ್ಥಃ ॥** **ಗೀ.ಭಾ. 4–35.**

ಇದೇ ಭಗವಂತನ ಮತವೆಂದಾದರೆ ಭಗವಂತನ ಈ ಮುಂದಿನ ವಾಕ್ಯವೂ ಸಾರ್ಥಕವಾಗುವದು: ಅವರು ಉಪದೇಶಿಸಿದ ಆ ಜ್ಞಾನವನ್ನು ಪಡೆದುಕೊಂಡರೆ ಮತ್ತೆ – ಈಗ ನೀನು ಮೋಹಿತನಾಗಿರುವೆಯಲ್ಲ – ಹೀಗೆ ಭ್ರಾಂತನಾಗುವದಿಲ್ಲ, ಮತ್ತು ಆ ಜ್ಞಾನದಿಂದ ಬ್ರಹ್ಮಾದಿಯಾಗಿ ಸ್ತಂಬದವರೆಗಿನ ಪ್ರಾಣಿಗಳೆಲ್ಲವನ್ನೂ 'ಈ ಪ್ರಾಣಿಗಳೆಲ್ಲವೂ ನನ್ನಲ್ಲಿಯೇ ಇವೆ' ಎಂದು ನೇರಾಗಿ ಕಂಡುಕೊಳ್ಳುವೆ; ಮತ್ತು ನನ್ನಲ್ಲಿಯೂ 'ಪರಮೇಶ್ವರನಾದ ವಾಸುದೇವನಲ್ಲಿ ಇವು ಇವೆ,' ಎಂದೂ ಕಾಣುವೆ. ಜೀವನೂ ಈಶ್ವರನೂ ಒಬ್ಬ ಆತ್ಮನೇ ಎಂದು ಉಪನಿಷತ್ತುಗಳಲ್ಲೆಲ್ಲ ಹೇಳಿರುವ ತತ್ತ್ವವನ್ನು ಕಂಡುಕೊಳ್ಳುವೆ ಎಂದರ್ಥ.

ಮೇಲೆ ನಾವು ಕೊಟ್ಟಿರುವ ಮೂರು ವಾಕ್ಯಗಳಿಂದ ಶ್ರೀಶಂಕರ ಭಗವತ್ಪಾದರವರು ತತ್ತ್ವಜ್ಞಾನವನ್ನು ತಾವೂ ನೇರಾಗಿ ಅನುಭವಕ್ಕೆ ತಂದುಕೊಂಡೇ ಮತ್ತೊಬ್ಬರಿಗೆ ಹೇಳುತ್ತಾರೆಂದು ನಿಶ್ಚಯಿಸಬೇಕಾಗುತ್ತದೆ. ಏಕೆಂದರೆ, ತತ್ತ್ವದರ್ಶಿಗಳು ಹೇಳಿಕೊಡುವ ಜ್ಞಾನದಿಂದ 'ನಾನು ಈಶ್ವರನೇ, ನನ್ನಲ್ಲಿಯೇ ಬ್ರಹ್ಮಾದಿ ಸ್ತಂಬಪರ್ಯಂತವಾದ ಪ್ರಾಣಿಗಳು ಇವೆ' ಎಂದು ನೇರಾಗಿ ಕಂಡುಕೊಳ್ಳಬಹುದು – ಎಂದು ಅವರು ಸ್ಪಷ್ಟವಾಗಿ ಹೇಳಿರುತ್ತಾರೆ. ಆದ್ದರಿಂದ ತತ್ತ್ವಜ್ಞಾನವು ಪರಮಾರ್ಥವು ಇದ್ದದ್ದು ಇದ್ದಂತೆ ಅನುಭವಕ್ಕೆ ತಂದುಕೊಟ್ಟು ಅಮಂಗಲವಾದ ಮೋಹವನ್ನು ತೊಲಗಿಸುವದರಿಂದ ಶಂಕರವಾಗಿರುತ್ತದೆ. ಶಂಕರಭಗವತ್ಪಾದರ ಉಕ್ತಿಯಿಂದಲೇ ಶ್ರದ್ಧಾವಂತರಾದ ಆಸ್ತಿಕರಿಗೆ ಅಂಥ ಜ್ಞಾನವು ದೊರಕಬೇಕಾಗಿರುವದರಿಂದ ಅವರು ಉಪದೇಶಿಸಿರುವ ತತ್ತ್ವವೂ ಶಂಕರವಾಗಿರುತ್ತದೆ.

ಶಂಕರಭಗವತ್ಪಾದರ ವಿಷಯದ ತತ್ತ್ವ, ಶಂಕರಭಗವತ್ಪಾದಾಚಾರ್ಯರು ಉಪದೇಶಿಸಿರುವ ತತ್ತ್ವ, ಮಂಗಲಕರವಾದ ತತ್ತ್ವ – ಎಂಬ ಮೂರು ಅರ್ಥಗಳನ್ನು ಮನಸ್ಸಿನಲ್ಲಿಟ್ಟು 'ಶಂಕರತತ್ತ್ವ'ವೆಂಬ ಹೆಸರನ್ನು ಬಳಸಿರುವದಾಗಿ ಹಿಂದೆ ಹೇಳಿದೆ. ಈ ಮೂರೂ ಒಂದೇ ಪರಮಾರ್ಥತತ್ತ್ವಕ್ಕೆ ಅನ್ವಯಿಸುವ ಹಾಗಿವೆ ಎಂದೂ ತಿಳಿಸಿದೆ.

ಮೊಟ್ಟಮೊದಲು **ಶಂಕರವಿಷಯವಾದ ತತ್ತ್ವವನ್ನು** ಸಂಕ್ಷೇಪವಾಗಿ ತಿಳಿಸಬೇಕಾಗಿದೆ. ಈ ಆಚಾರ್ಯರು **ಉಪನಿಷತ್ತುಗಳು, ಭಗವದ್ಗೀತೆ, ವೇದಾಂತ ಸೂತ್ರ**ಗಳ ರೂಪವಾಗಿರುವ **ಶಾರೀರಕಮಿಮಾಂಸೆ** – ಎಂಬ ಮೂರು ಮುಖ್ಯ **ವೇದಾಂತಪ್ರಸ್ಥಾನ**ಗಳಿಗೆ ಭಾಷ್ಯವನ್ನು ಬರೆದಿರುತ್ತಾರೆಂಬುದು ಅತ್ಯಂತ ಪ್ರಸಿದ್ಧವಾದ ವಿಷಯ. ಆ ಭಾಷ್ಯಗಳ ಕೊನೆಯಲ್ಲಿರುವ ಪುಷ್ಪಿಕಾವಾಕ್ಯಗಳಲ್ಲಿ 'ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯ ಶ್ರೀಗೋವಿಂದಭಗವತ್ಪಾದರ ಶಿಷ್ಯರಾದ ಶ್ರೀಮಚ್ಛಂಕರಭಗವತ್ಪಾದರ ಕೃತಿ' ಎಂಬರ್ಥದ ವಾಕ್ಯವು ಕಾಣಬರುತ್ತದೆ. ಈ ಪುಷ್ಪಿಕಾವಾಕ್ಯಗಳ ಅಕ್ಷರಾನುಕ್ರಮವು ಒಂದೇ ಬಗೆಯಾಗಿಲ್ಲ. **ಗೋವಿಂದ ಭಗವತ್ಪಾದರು ಯಾರು** ? **ಶ್ರೀಮಚ್ಛಂಕರ ಭಗವತ್ಪಾದರೆಂದರೆ ಯಾರು** ? ಎಂಬ ವಿಷಯಕ್ಕೆ **ಆಚಾರ್ಯರ ಸಮಕಾಲೀನರಾದ ಅಥವಾ ಅವರ ಕಾಲಕ್ಕೆ ಬಲುಹತ್ತಿರದ ಕಾಲದವರಾದ ಯಾರೂ ಯಾವ ವಿವರವನ್ನೂ ಕೊಟ್ಟಿಲ್ಲ.**

ಆಚಾರ್ಯರ ಚರಿತ್ರೆಯ ಸಂಗ್ರಹಕ್ಕೆ ಸಾಮಗ್ರಿಯು ಹೇರಳವಾಗಿಲ್ಲ. **ಶಂಕರವಿಜಯಗಳೆಂಬ** ಕೆಲವು ಕಾವ್ಯಗಳಿವೆ. ಆ ಕಾವ್ಯಗಳನ್ನು ಬರೆದವರು ಶಂಕರಾಚಾರ್ಯರಿಗಿಂತ ಬಹಳ ಇತ್ತೀಚಿನವರು. ಅವು ಕಾವ್ಯಗಳಾದ್ದರಿಂದ ಕವಿಗಳ ಕಲ್ಪನೆಯಾಗಿವೆ. **ಅವುಗಳಲ್ಲಿರುವ ಚರಿತ್ರೆಯ ಅಂಶವು ಅತ್ಯಲ್ಪ; ಅಲ್ಲಿರುವ ಕಥೆಗಳು ಒಂದಕ್ಕೊಂದು ವಿರುದ್ಧವಾಗಿಯೂ ಇವೆ.**

ಶಂಕರಾಚಾರ್ಯರ ವಿಷಯವಾಗಿ ಹಲವು **ಕಲ್ಪನಾಕಥೆಗಳು** ಪ್ರಚಾರದಲ್ಲಿವೆ. ಅವು ಆಚಾರ್ಯರು ಪಡೆದಿರುವ ಜನಾನುರಾಗದ ಗುರುತುಗಳೆನ್ನಬಹುದೇ ಹೊರತು, ನಿಜವಾಗಿಯೂ **ಅವುಗಳಿಗೆ ಐತಿಹಾಸಿಕ ಆಧಾರವಿದೆ ಎಂದು ನಂಬುವದಕ್ಕಾಗುವದಿಲ್ಲ.**

ಶಂಕರಾಚಾರ್ಯರು ಸ್ಥಾಪಿಸಿರುವ **ಮಠಗಳು** ಬರೆಯಿಸಿಟ್ಟಿರುವ ಅಥವಾ ಸಂಗ್ರಹಿಸಿರುವ ಕೆಲವು ಆಧಾರಗಳೂ ಇವೆ. ಆದರೆ ಮಠಗಳನ್ನು ಯಾರು, ಯಾವಾಗ ಸ್ಥಾಪಿಸಿದರೆಂಬುದಕ್ಕೆ ಶಿಲಾಶಾಸನವೇ ಮುಂತಾದ ಸರ್ವಮಾನ್ಯವಾದ ಐತಿಹಾಸಿಕವಾದ ಆಧಾರಗಳು ಈವರೆಗೆ ಸಿಕ್ಕಿಲ್ಲ. ಯಾವ ಮಠವು ಮೂಲಪೀಠದ ಪ್ರತಿನಿಧಿಯೆಂಬ ಬಗ್ಗೆ ವಿವಾದವಿರುವದರಿಂದ ಅವರೆಲ್ಲರೂ ಏಕಕಂಠರಾಗಿ ಆಚಾರ್ಯರಿಗೂ ತಮಗೂ ಇರುವ ನಿಕಟಸಂಬಂಧವನ್ನು ತೀರ್ಮಾನಿಸಿ ವಿಮರ್ಶಕರಿಗೆ ತೃಪ್ತಿಕರವಾಗುವಂತೆ ನಿರ್ದೇಶಿಸುವವರೆಗೆ **ಮಠಗಳ ಇತಿಹಾಸದಿಂದಲಾಗಲಿ, ಅವುಗಳಲ್ಲಿ ಸಿಕ್ಕುವ ಲಿಖಿತಾಧಾರಗಳಿಂದಾಗಲಿ ಆಚಾರ್ಯರ ಚರಿತ್ರೆಗೆ ಯಾವ ಸರ್ವಸಮ್ಮತವಿಷಯವೂ ದೊರೆಯವಂತಿಲ್ಲ.**

ಪುರಾತತ್ತ್ವವಿಮರ್ಶಕರು ಕೆಲವರು ಐತಿಹಾಸಿಕದೃಷ್ಟಿಯಿಂದ ಕೆಲವು ನಿಬಂಧಗಳನ್ನು ಬರೆದಿರುತ್ತಾರೆ. ಅವುಗಳಲ್ಲಿರುವ ಅಭಿಪ್ರಾಯಗಳು ಪರಸ್ಪರ ವಿರುದ್ಧವಾಗಿರುತ್ತವೆ. ನಮ್ಮ ದೇಶದಲ್ಲಿ ಇತ್ತೀಚೆಗೆ ಬರೆದಿರುವ ವಿಮರ್ಶಕಗ್ರಂಥಗಳ ಕರ್ತೃಗಳು ಬಲುಮಟ್ಟಿಗೆ ಒಂದೊಂದು ಮಠದ ಶಿಷ್ಯರಾಗಿಯೇ ಬರೆದಿರುತ್ತಾರೆ. **ಈ ಕಾರಣಗಳಿಂದ ಐತಿಹಾಸಿಕಗ್ರಂಥಗಳಿಂದಲೂ ಆಚಾರ್ಯರ ಚರಿತ್ರೆಗೆ ನಿರ್ಣೀತವಾದ ವಿಷಯಗಳು ದೊರೆಯುವಂತಿಲ್ಲ.**

ಆಚಾರ್ಯರು ದಕ್ಷಿಣಭಾರತದಲ್ಲಿ (ಬಹುಜನಸಂಮತಿಯಂತೆ ಕೇರಳದಲ್ಲಿ ಕಾಲಟಿಯಲ್ಲಿ) ಜನಿಸಿದರು; ಬಾಲ್ಯದಲ್ಲಿಯೇ ಪಿತೃವಿಯೋಗವಾಯಿತು.

ಉಪನಯನವಾದ ಸ್ವಲ್ಪಕಾಲದಲ್ಲಿಯೇ ಪ್ರೈಷೋಚ್ಚಾರಣವನ್ನು ಮಾಡಿ ಉತ್ತರದಲ್ಲಿ ಗೋವಿಂದಭಗವತ್ಪಾದರಿಂದ ಕ್ರಮಸಂನ್ಯಾಸವನ್ನು ಪಡೆದು ಅವರ ಉಪದೇಶವನ್ನು ಪಡೆದು ಭಾಷ್ಯಾದಿಗಳನ್ನು ರಚಿಸಿದರು. ದೇಶದಲ್ಲೆಲ್ಲ ಸಂಚಾರವನ್ನು ಮಾಡಿ ಅದ್ವೈತಸಿದ್ಧಾಂತವನ್ನು ನೆಲೆಗೊಳಿಸಿದರು. ಅವರೂ ಅವರ ಶಿಷ್ಯಪರಂಪರೆಯವರೂ ಬರೆದ ವೇದಾಂತಗ್ರಂಥಗಳು ಪ್ರಸಿದ್ಧವಾಗಿವೆ. ಅವರ ಹೆಸರಿನಲ್ಲಿ ಸ್ಥಾಪಿತವಾದ ಮಠಗಳೂ ಪ್ರಸಿದ್ಧವಾಗಿರುತ್ತವೆ. ಆದ್ಯಶಂಕರಾಚಾರ್ಯರೆಂಬ ಹೆಸರು ನಾಗರಿಕ ಭೂಮಂಡಲದಲ್ಲೆಲ್ಲ ಪರಿಚಿತವಾಗಿದೆ. ಅವರ ಅಸಂಖ್ಯಾತಶಿಷ್ಯರು ಈಗಲೂ ಇರುತ್ತಾರೆ. ಇಷ್ಟು ಅಂಶಗಳನ್ನು ಬಿಟ್ಟರೆ, ಮಿಕ್ಕವುಗಳೆಲ್ಲವೂ ಕಲ್ಪನಾರಾಜ್ಯಕ್ಕೇ ಸೇರಿರುತ್ತವೆ. ಆಚಾರ್ಯರ ಚರಿತ್ರೆಯ ವಿಷಯಕ್ಕೆ ಪ್ರಚಲಿತವಾಗಿರುವ ವಿವಿಧ ಕಲ್ಪನೆಗಳನ್ನೂ ಅವುಗಳ ವಿಮರ್ಶೆಯನ್ನೂ ನೋಡಬೇಕೆನ್ನುವವರು **'ಶ್ರೀಶಂಕರಭಗವತ್ಪಾದ ವೃತ್ತಾಂತಸಾರಸರ್ವಸ್ವ'**[1] ಎಂಬ ಗ್ರಂಥವನ್ನು ನೋಡಬೇಕು.

ಶ್ರೀಶಂಕರಭಗವತ್ಪಾದಾಚಾರ್ಯರು ಉಪದೇಶಿಸಿರುವ ತತ್ತ್ವವೇ ಶಾಂಕರವಾಗಿರುತ್ತದೆ, ಜೀವರುಗಳ ಅಮಂಗಲವಾದ ಮೋಹವನ್ನು ಕಳೆದು ಸರ್ವಮಂಗಲವಾದ ಪರಮಾರ್ಥತತ್ತ್ವವೇ ತಾವೆಂಬ ಮಂಗಲಕರವಾದ ತತ್ತ್ವಜ್ಞಾನವನ್ನು ಆ ಆಚಾರ್ಯರ ಉಕ್ತಿಯೇ ತಂದುಕೊಡುತ್ತದೆ ಎಂಬುದನ್ನು ಸ್ಫುಟಗೊಳಿಸುವದಕ್ಕಾಗಿ ಅವರ ಕೆಲವು ಸೂಕ್ತಿಗಳನ್ನು ಭಾಷ್ಯಗಳಿಂದ ಆರಿಸಿ ಈಗ ಕೊಡಲಾಗುವುದು.

* * * * *

1. ಆಚಾರ್ಯರ ವಿಷಯದಲ್ಲಿ ಪ್ರಚಲಿತವಾಗಿರುವ ಸರ್ವವಿಷಯಗಳನ್ನೂ ಸಂಗ್ರಹಿಸಿ ಇದರಲ್ಲಿ ವಿಸ್ತಾರವಾಗಿ ವಿಮರ್ಶಿಸಿದೆ. ಕಾರ್ಯಾಲಯದ ಪ್ರಕಟಣೆ.

# 1. ಪರಮಾರ್ಥ, ಸಮ್ಯಗ್ಜ್ಞಾನ

**1. ಅಪಿ ಚ ಸಮ್ಯಗ್ಜ್ಞಾನಾನ್ಮೋಕ್ಷಃ ಇತಿ ಸರ್ವೇಷಾಂ ಮೋಕ್ಷವಾದಿನಾಮ್ ಅಭ್ಯುಪಗಮಃ । ತಚ್ಚ ಸಮ್ಯಗ್ಜ್ಞಾನಮ್ ಏಕರೂಪಂ ವಸ್ತುತನ್ತ್ರಮ್ । ಏಕರೂಪೇಣ ಹಿ ಅವಸ್ಥಿತೋ ಯೋಽರ್ಥಃ ಸ ಪರಮಾರ್ಥಃ। ಲೋಕೇ ತದ್ವಿಷಯಂ ಜ್ಞಾನಂ ಸಮ್ಯಗ್ಜ್ಞಾನಮ್ – ಇತ್ಯುಚ್ಯತೇ । ಯಥಾ 'ಅಗ್ನಿರುಷ್ಣಃ' ಇತಿ । ತತ್ರ ಏವಂ ಸತಿ ಸಮ್ಯಗ್ಜ್ಞಾನೇ ಪುರುಷಾಣಾಂ ವಿಪ್ರತಿಪತ್ತಿಃ ಅನುಪಪನ್ನಾ ॥ ಸೂ.ಭಾ. 2–1–1.**

ಭಾವಾರ್ಥ : – ಇದಲ್ಲದೆ ಸಮ್ಯಗ್ಜ್ಞಾನದಿಂದ ಮೋಕ್ಷವಾಗುವದೆಂದು ಎಲ್ಲಾವಾದಿಗಳೂ ಒಪ್ಪಿರುತ್ತಾರೆ. ಆ ಸಮ್ಯಗ್ಜ್ಞಾನವೆಂಬುದು ಒಂದೇ ರೂಪದ್ದಾಗಿರುತ್ತದೆ, ವಸ್ತುತಂತ್ರವಾಗಿರುತ್ತದೆ. ಒಂದೇ ರೂಪದಿಂದ ಇದ್ದು ಕೊಂಡಿರುವ ವಸ್ತುವಲ್ಲವೆ, ಪರಮಾರ್ಥವು? ಲೋಕದಲ್ಲಿ ಅದರ ವಿಷಯವಾದ ಜ್ಞಾನವೇ ಸಮ್ಯಗ್ಜ್ಞಾನವೆನಿಸುತ್ತದೆ. ಉದಾಹರಣೆಗೆ 'ಬೆಂಕಿಯು ಬಿಸಿ' ಎಂಬ ಜ್ಞಾನವು ಅಂಥದ್ದು. ಇದು ಹೀಗಿರುವದರಿಂದ ಸಮ್ಯಗ್ಜ್ಞಾನದ ವಿಷಯದಲ್ಲಿ ಜನರಿಗೆ ವಿರುದ್ಧವಾದ ಅಭಿಪ್ರಾಯಗಳಿರುವದು ಸರಿಯಲ್ಲ.

**ವಿವರಣೆ :** – ತತ್ತ್ವವಿಚಾರಕ್ಕೆಲ್ಲ ತಳಹದಿಯಾಗಿರುವ ಮೂರು ವಿಷಯಗಳನ್ನು ಇಲ್ಲಿ ಹೇಳಿದೆ. ತತ್ತ್ವಕ್ಕೆ **'ಪರಮಾರ್ಥ'**ವೆಂಬುದು ಇನ್ನೊಂದು ಹೆಸರು. ಪರಮಾರ್ಥವೆಂದರೆ ಯಾವಾಗಲೂ ಎಲ್ಲೆಲ್ಲಿಯೂ ಒಂದೇ ರೂಪದಲ್ಲಿರುವ ವಸ್ತು. ಅದನ್ನೇ 'ಸತ್ಯ'ವೆಂದು ಜನರು ಬಗೆಯುತ್ತಾರೆ. ಅದನ್ನು ತಿಳಿಸಿಕೊಡುವ ಜ್ಞಾನವೇ **ಸಮ್ಯಗ್ಜ್ಞಾನ,** ಸರಿಯಾದ ತಿಳಿವಳಿಕೆ. ಉದಾಹರಣೆಗೆ ಬೆಂಕಿಯು ಯಾವಾಗಲೂ ಎಲ್ಲೆಲ್ಲಿಯೂ ಬಿಸಿಯಾಗಿರುತ್ತದೆ; 'ಬೆಂಕಿ' ಎಂಬುದು ಒಂದೇ ರೂಪದಲ್ಲಿರುವ ಪರಮಾರ್ಥವಾದ್ದರಿಂದ ಅದನ್ನು ಪರಮಾರ್ಥ, ಸತ್ಯ, ಅದು ಬರಿಯ ಹುಸಿತೋರಿಕೆಯಲ್ಲ – ಎಂದು ಜನರೆಲ್ಲರೂ ಒಪ್ಪಿರುತ್ತಾರೆ. 'ಬೆಂಕಿಯು ಬಿಸಿ' ಎಂಬ ಜ್ಞಾನವು **ಸಮ್ಯಗ್ಜ್ಞಾನ,** ಅದು ಭ್ರಾಂತಿಯಲ್ಲ. ಸಮ್ಯಗ್ಜ್ಞಾನವು ವಸ್ತುತಂತ್ರವಾಗಿರುತ್ತದೆ. ವಸ್ತುವು ಹೇಗೆ ಇರುತ್ತದೆಯೋ ಹಾಗೆಯೇ ತಿಳಿಸಿಕೊಡುವ ಜ್ಞಾನವದು. ಆದ್ದರಿಂದ ಬೆಂಕಿಯನ್ನು ಬಿಸಿಯಾಗಿರುವ ಪದಾರ್ಥವೆಂದು ತಿಳಿಸಿಕೊಡುವ ಜ್ಞಾನವು ಸಮ್ಯಗ್ಜ್ಞಾನವು; ದೂರದಿಂದ ನೋಡಿದ ಕೆಂಡವನ್ನು

ಮಾಣಿಕ್ಯವೆಂದು ತಿಳಿದುಕೊಂಡರೆ ವಸ್ತುವಿಗೆ ಅನುಗುಣವಾದ ಜ್ಞಾನವಾಗಲಾರದು, ಆದ್ದರಿಂದ ಅದು ಭ್ರಾಂತಿ.

ಈ ವಿಚಾರದ ಮೂಲತತ್ತ್ವಗಳನ್ನು ಇಟ್ಟುಕೊಂಡು ಮನದಂದವರಿಗೆ ಈ ಜಗತ್ತಿನ ನಿಜವೇನೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರಬಾರದೆಂದಾಗುವದು. 'ಈ ಜಗತ್ತೆಲ್ಲವೂ ಬ್ರಹ್ಮವೇ ಆಗಿರುತ್ತದೆ' ಎಂದು ಶ್ರುತಿಗಳಲ್ಲಿ ಹೇಳಿರುತ್ತದೆ. ಅದೇ ಸತ್ಯವು, ಅದೇ ಈ ಜಗತ್ತಿಗೆಲ್ಲ ಆತ್ಮವು, ಸ್ವರೂಪವು; ಅದೇ ನೀನು ಎಂದೂ ಬೋಧಿಸಿರುತ್ತದೆ. ಈ ವಾಕ್ಯಗಳಿಂದಾಗುವ ಜ್ಞಾನದಲ್ಲಿ ಯಾವಯಾವ ಅಭಿಪ್ರಾಯಗಳು ಅಡಕವಾಗಿರುವವೆಂದರೆ :

(1) ಈ ಜಗತ್ತು ತಾನು ತೋರುವ ರೂಪದಿಂದ ಸತ್ಯವಲ್ಲ; ಜಗತ್ತು ಯಾವಾಗಲೂ ಇದೇ ರೂಪದಿಂದ ಇದ್ದುಕೊಂಡಿರುವ ಪರಮಾರ್ಥವಲ್ಲ.

(2) ಇದರ ಪರಮಾರ್ಥವು, ನಿಜವಾದ ಸ್ವರೂಪವು ಬ್ರಹ್ಮವೇ.

(3) ಜೀವನ, ವ್ಯಕ್ತಿಯಾಗಿ ಸಂಸಾರಿಯಾಗಿ ತೋರುತ್ತಿರುವಾತನ, ರೂಪವೂ ಸತ್ಯವಲ್ಲ; ಇವನ ಪರಮಾರ್ಥವೂ ಬ್ರಹ್ಮವೇ, ಅಸಂಸಾರಿಸ್ವರೂಪವೇ.

ತಟ್ಟನೆ ನೋಡಿದರೆ ಈ ಅಭಿಪ್ರಾಯಗಳು ಎಲ್ಲರಿಗೂ ಒಪ್ಪಾಗುವಂತೆ ಕಾಣುವದಿಲ್ಲ. ಜನರ ತಿಳಿವಳಿಕೆಗೆ ಇದು ವಿರುದ್ಧವಾಗಿಯೇ ಇರುವಂತೆ ತೋರುತ್ತಿದೆ. ಆದರೂ ಶಂಕರಾಚಾರ್ಯರು ಹೀಗೆನ್ನುತ್ತಿದಾರೆ :–

**2. ಅಬ್ರಹ್ಮಪ್ರತ್ಯಯಃ ಸರ್ವಃ, ಅವಿದ್ಯಾಮಾತ್ರಃ, ರಜ್ಜ್ವಾಮಿವ ಸರ್ಪಪ್ರತ್ಯಯಃ। ಬ್ರಹ್ಮೈವೈಕಂ ಪರಮಾರ್ಥಸತ್ಯಮ್ ಇತಿ ವೇದಾನುಶಾಸನಮ್ ॥**

**ಮುಂ. 2–2–11.**

ಭಾವಾರ್ಥ : ಬ್ರಹ್ಮವಲ್ಲದ್ದು ಎಂಬ ತಿಳಿವಳಿಕೆಯೆಲ್ಲವೂ ಹಗ್ಗದಲ್ಲಿ ಹಾವೆಂಬ ತಿಳಿವಳಿಕೆಯಂತೆ ಅವಿದ್ಯಾಮಾತ್ರವಾಗಿದೆ. ಬ್ರಹ್ಮವೊಂದೇ ಪರಮಾರ್ಥಸತ್ಯವು ಎಂಬುದು ವೇದದ ಉಪದೇಶವು.

**ವಿವರಣೆ** :– ಇದು ಸಮ್ಯಗ್ಜ್ಞಾನವೋ, ಭ್ರಾಂತಿಯೋ? – ಎಂಬುದನ್ನು ವಿಚಾರಮಾಡಿ ನಿಶ್ಚಯಿಸಬೇಕಾಗಿದೆ. ಆದ್ದರಿಂದ ಸಮ್ಯಗ್ಜ್ಞಾನದ ತತ್ತ್ವವನ್ನು ಇನ್ನಷ್ಟು ವಿಚಾರಮಾಡೋಣ.

* * * * *

# 2. ಬ್ರಹ್ಮ, ಆತ್ಮ

3. ತತ್ ಪುನರ್ಬ್ರಹ್ಮ ಪ್ರಸಿದ್ಧಂ ವಾ ಅಪ್ರಸಿದ್ಧಂ ವಾ ಸ್ಯಾತ್? ಯದಿ ಪ್ರಸಿದ್ಧಮ್, ನ ಜಿಜ್ಞಾಸ್ಯಮ್; ಅಥ ಅಪ್ರಸಿದ್ಧಮ್, ನೈವಶಕ್ಯಂ ಜಿಜ್ಞಾಸಿತುಮಿತಿ । ಉಚ್ಯತೇ । ಅಸ್ತಿ ತಾವದ್ ಬ್ರಹ್ಮ ನಿತ್ಯಶುದ್ಧ ಬುದ್ಧಮುಕ್ತಸ್ವಭಾವಮ್, ಸರ್ವಜ್ಞಮ್, ಸರ್ವಶಕ್ತಿಸಮನ್ವಿತಮ್; ಬ್ರಹ್ಮಶಬ್ದಸ್ಯ ಹಿ ವ್ಯುತ್ಪಾದ್ಯಮಾನಸ್ಯ ನಿತ್ಯಶುದ್ಧತ್ವಾದಯೋಽರ್ಥಾಃ ಪ್ರತೀಯನ್ತೇ । ಬೃಂಹತೇರ್ಧಾತೋರರ್ಥಾನುಗಮಾತ್ । ಸರ್ವಸ್ಯಾತ್ಮತ್ವಾಚ್ಚ ಬ್ರಹ್ಮಾಸ್ತಿತ್ವ ಪ್ರಸಿದ್ಧಿಃ । ಸರ್ವೋ ಹಿ ಆತ್ಮಾಸ್ತಿತ್ವಂ ಪ್ರತ್ಯೇತಿ ನ ನಾಹಮಸ್ಮೀತಿ । ಯದಿ ಹಿ ನಾತ್ಮಾಸ್ತಿತ್ವಪ್ರಸಿದ್ಧಿಃ ಸ್ಯಾತ್, ಸರ್ವೋ ಲೋಕೋ "ನಾಹಮಸ್ಮಿ" ಇತಿ ಪ್ರತೀಯಾತ್ । ಆತ್ಮ ಚ ಬ್ರಹ್ಮ ॥ ಸೂ. ಭಾ. 1–1–1.

ಭಾವಾರ್ಥ (ಆಕ್ಷೇಪ) : ಆ ಬ್ರಹ್ಮವು ಪ್ರಸಿದ್ಧವೋ, ಅಪ್ರಸಿದ್ಧವೋ? ಪ್ರಸಿದ್ಧವಾಗಿದ್ದರೆ ಅದನ್ನು ಕುರಿತು ವಿಚಾರಮಾಡಬೇಕಾದದ್ದಿಲ್ಲ; ಹಾಗಿಲ್ಲದೆ ಅಪ್ರಸಿದ್ಧವಾಗಿದೆ ಎಂದರೆ ಅದನ್ನು ವಿಚಾರಮಾಡುವದು ಆಗುವಂತೆಯೇ ಇಲ್ಲವಲ್ಲ.

(ಪರಿಹಾರ) :– ಇದಕ್ಕೆ ಉತ್ತರವನ್ನು ಹೇಳುತ್ತೇವೆ : (1) ಮೊದಲನೆಯದಾಗಿ – ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳದ್ದೂ, ಸರ್ವಜ್ಞವೂ ಸರ್ವಶಕ್ತಿಗಳಿಂದೊಡಗೂಡಿದ್ದೂ ಆಗಿರುವ ಬ್ರಹ್ಮವು ಇದೆ (ಎನ್ನಬೇಕು). ಏಕೆಂದರೆ 'ಬ್ರಹ್ಮ' ಎಂಬ ಶಬ್ದದ ವ್ಯುತ್ಪತ್ತಿಯನ್ನು ನೋಡಿದರೆ ನಿತ್ಯಶುದ್ಧತ್ವವೇ ಮುಂತಾದ ಅರ್ಥಗಳು ತೋರುತ್ತವೆ. 'ಬೃಹಿ' (ಬೆಳೆ, ದೊಡ್ಡದಾಗು) ಎಂಬ ಧಾತುವಿನ ಅರ್ಥಕ್ಕೆ ಅನುಸಾರವಾಗಿ (ಹೀಗೆಂದು ಒಪ್ಪಬೇಕು). (2) ಪ್ರತಿಯೊಬ್ಬನ ಆತ್ಮನಾಗಿರುವದರಿಂದಲೂ ಬ್ರಹ್ಮವು ಇದೆ ಎಂಬುದು ಪ್ರಸಿದ್ಧವಾಗಿದೆಯೆನ್ನಬೇಕು. ಒಬ್ಬೊಬ್ಬನೂ ತಾನು ಇದೇನೆಂದೇ ತಿಳಿದುಕೊಂಡಿರುತ್ತಾನೆಯೇ ಹೊರತು 'ನಾನಿಲ್ಲ' ಎಂದೇನೂ ತಿಳಿಯುತ್ತಿಲ್ಲ. ಆತ್ಮನೆಂದು ಪ್ರಸಿದ್ಧವಾಗದೆ ಇದ್ದಿದ್ದರೆ ಪ್ರತಿಯೊಬ್ಬನೂ ನಾನಿಲ್ಲ ಎಂದು ತಿಳಿಯಬಹುದಾಗಿತ್ತಲ್ಲವೆ? ಆತ್ಮನೇ ಬ್ರಹ್ಮ.

**ವಿವರಣೆ** :– ವೇದದಲ್ಲಿ ಲೋಕಪ್ರಸಿದ್ಧವಲ್ಲದ ಎಷ್ಟೋ ವಿಷಯಗಳನ್ನು ಕುರಿತು ಹೇಳಿರುತ್ತದೆ. ಬ್ರಹ್ಮಶಬ್ದವು ಹೇಳುವ ಪರಮಾರ್ಥವು ಪ್ರಸಿದ್ಧವಾದದ್ದೊ, ಅಲ್ಲವೋ? ಯಾರಿಗೂ ಗೊತ್ತಿಲ್ಲದಿದ್ದರೆ ಅದನ್ನು ಕುರಿತು ವಿಚಾರ ಮಾಡುವದು ಹೇಗೆ? ಎಲ್ಲರಿಗೂ ತಿಳಿದೇ ಇದ್ದರೆ ವಿಚಾರಮಾಡತಕ್ಕದ್ದೇನಿದೆ? ಎಂದು ಆಕ್ಷೇಪ.

ವಿಚಾರಮಾಡಬೇಕಾದ ವಿಷಯವು ಸಾಮಾನ್ಯವಾಗಿ ತಿಳಿದಿರಬೇಕು, ಅದರ ವಿಷಯದಲ್ಲಿ ತಿಳಿಯದೆ ಇರುವ ವಿಶೇಷಗಳೂ ಇರಬೇಕು; ಇಲ್ಲದಿದ್ದರೆ ವಿಚಾರಕ್ಕೆ ಅರ್ಹವಾಗಲಾರದು. ಆದ್ದರಿಂದ ಈ ಆಕ್ಷೇಪವನ್ನು ಮಾಡಿರುತ್ತದೆ. ಇದಕ್ಕೆ ಪರಿಹಾರವೇನೆಂದರೆ ; ಬ್ರಹ್ಮವೆಂಬ ಶಬ್ದಕ್ಕೆ ಇರುವ ಅರ್ಥವನ್ನು ನೋಡಿದರೆ ಅಂಥ ವಸ್ತು ಯಾವದಾದರೊಂದಿರಬೇಕು; ಅದು ಯಾವದು? – ಎಂಬ ವಿಚಾರಕ್ಕೆ ಅವಕಾಶವಿದೆ ಎಂದಾಗುತ್ತದೆ. ಇನ್ನು ಬ್ರಹ್ಮವು ನಮ್ಮ ಆತ್ಮನೇ, ನಮ್ಮಲ್ಲಿ ಒಬ್ಬೊಬ್ಬರ ಸ್ವರೂಪವೇ ಅದು – ಎಂದಿರುವದರಿಂದ ಅದು ಲೋಕಪ್ರಸಿದ್ಧವೂ ಆಗಿದೆ; ಆದ್ದರಿಂದ ಬ್ರಹ್ಮವನ್ನು ಕುರಿತ ವಿಚಾರವನ್ನು ಮಾಡಬಹುದಾಗಿರುತ್ತದೆ. ನಾನು ಎಂಬುದು ಇಲ್ಲವೆಂದು ಕಲ್ಪಿಸಿಕೊಳ್ಳುವದು ಯಾರಿಂದಲೂ ಆಗುವಂತಿಲ್ಲ. ಆದ್ದರಿಂದ ಬ್ರಹ್ಮವು ಅತ್ಯಂತ ಪ್ರಸಿದ್ಧವಾಗಿದೆ ಎಂದು ಇಲ್ಲಿ ಹೇಳಿರುವದನ್ನು ಲಕ್ಷಿಸಬೇಕು.

**4. ಆತ್ಮತ್ವಾಚ್ಚ ಆತ್ಮನೋ ನಿರಾಕರಣಶಙ್ಕಾನುಪಪತ್ತಿಃ । ನ ಹಿ ಆತ್ಮಾ ಆಗನ್ತುಕಃ ಕಸ್ಯಚಿತ್ । ಸ್ವಯಂಸಿದ್ಧತ್ವಾತ್ ॥ ಸೂ. ಭಾ. 2–3–7.**

**ಭಾವಾರ್ಥ : ತಾನೇ ಆಗಿರುವದರಿಂದ ಆತ್ಮನನ್ನು ಇಲ್ಲವೆಂದು ಶಂಕಿಸುವದಕ್ಕೆ ಆಗುವಂತಿಲ್ಲ, ಆತ್ಮನು ಯಾವನಿಗೂ ನಡುವೆ ಬಂದು ಸೇರಿಕೊಳ್ಳುವ ವಸ್ತುವಲ್ಲವಷ್ಟೆ; ಏಕೆಂದರೆ ಅವನು ಸ್ವಯಂಸಿದ್ಧನಾಗಿರುತ್ತಾನೆ.**

**ವಿವರಣೆ** :– ತನಗಿಂತ ಬೇರೆಯಾದ ವಸ್ತುವಿನ ವಿಷಯಕ್ಕೆ ಎಲ್ಲಿದೆ, ಹೇಗಿದೆ? ಅದು ಇದೆ ಎಂಬುದು ಹೇಗೆ ಗೊತ್ತು? – ಎಂದು ಮುಂತಾಗಿ ಆಕ್ಷೇಪಿಸಬಹುದು. ಆದರೆ ತಾನು ಇದೇನೆಯೋ, ಇಲ್ಲವೋ? – ಎಂಬ ಶಂಕೆ ಬರುವಹಾಗೆಯೇ ಇಲ್ಲ. ತಾನಿಲ್ಲವೆಂದು ಸಿದ್ಧಪಡಿಸುವದಕ್ಕೆ ಶಕ್ಯವೂ ಇಲ್ಲ; ಏಕೆಂದರೆ ಇದೆ, ಇಲ್ಲ – ಎಂದು ತೋರಿಸಿಕೊಡುವ ಮೊದಲು ತಾನು ಇರಲೇಬೇಕಾಗಿದೆ. ತರ್ಕಶಾಸ್ತ್ರ, ಗಣಿತಶಾಸ್ತ್ರ – ಮುಂತಾದ ಶಾಸ್ತ್ರಗಳಲ್ಲಿ ಸ್ವತಃ ಸಿದ್ಧತತ್ತ್ವಗಳಿರುತ್ತವೆ. 'ಒಂದು ವಸ್ತುವಿಗೆ ಬೇರೆಯ ಎರಡು ವಸ್ತುಗಳು ಸಮವಾಗಿದ್ದರೆ, ಅವು ಒಂದಕ್ಕೊಂದು ಸಮನಾಗಿರುತ್ತವೆ' ಎಂಬುದು ಇಂಥ ಒಂದು ತತ್ತ್ವ : ಅವುಗಳನ್ನು ಸಿದ್ಧಪಡಿಸಿಕೊಡಬೇಕೆಂದು ಯಾರೂ ನಿರ್ಬಂಧಿಸುವಂತಿಲ್ಲ.

ಒಂದುವೇಳೆ ಅವನ್ನು ಕುರಿತ ಶಂಕೆಯು ಎದ್ದರೆ ಅವು ನಿಶ್ಚಯವೆಂದು ನನಗೇ ಗೊತ್ತಾಗಿದೆ ಎಂದು ತನ್ನ ಇರವಿನಿಂದಲೇ ತೀರ್ಮಾನಿಸಬೇಕಾಗಿರುವದರಿಂದ ಆತ್ಮನ ಇರವು ಅವಕ್ಕಿಂತಲೂ ಹೆಚ್ಚಿನ ಸ್ವಯಂಸಿದ್ಧ. ಇದರಿಂದ ಬ್ರಹ್ಮವೂ ಸ್ವಯಂಸಿದ್ಧವೆಂದು ನಿಶ್ಚಯವಾಯಿತು.

ಈ ಬ್ರಹ್ಮವನ್ನು ಕುರಿತು ಹೇಗೆ ವಿಚಾರಮಾಡಬೇಕು, ಅದಕ್ಕೆ ಸಾಧನವು ಯಾವದು? ಎಂಬುದನ್ನೂ ಆ ವಿಚಾರದಿಂದಾಗುವದು ಸಮ್ಯಗ್ಜ್ಞಾನವೆಂಬುದು ಹೇಗೆ? ಎಂಬುದನ್ನೂ ವಿಚಾರಮಾಡಬೇಕಾಗಿದೆ.

* * * * *

## 3. ಬ್ರಹ್ಮವನ್ನು ಅರಿತುಕೊಳ್ಳುವದು ಯಾವ ಪ್ರಮಾಣದಿಂದ?

**5. ಯದಿ ತರ್ಹಿ ಲೋಕೇ ಬ್ರಹ್ಮ ಆತ್ಮತ್ವೇನ ಪ್ರಸಿದ್ಧಮಸ್ತಿ ತತೋ ಜ್ಞಾತಮೇವ ಇತಿ ಅಜಿಜ್ಞಾಸ್ಯತ್ವಂ ಪುನರಾಪನ್ನಮ್ । ನ । ತದ್ವಿಶೇಷಂ ಪ್ರತಿ ವಿಪ್ರತಿಪತ್ತೇಃ । ದೇಹಮಾತ್ರಂ ಚೈತನ್ಯವಿಶಿಷ್ಟಮ್ ಆತ್ಮಾ ಇತಿ ಪ್ರಾಕೃತಾ ಜನಾಃ ಲೌಕಾಯತಿಕಾಶ್ಚ ಪ್ರತಿಪನ್ನಾಃ । ಇನ್ದ್ರಿಯಾಣ್ಯೇವ ಚೇತನಾನ್ಯಾತ್ಮಾ ಇತಿ ಅಪರೇ। ಮನ ಇತ್ಯನ್ಯೇ । ವಿಜ್ಞಾನಮಾತ್ರಂ ಕ್ಷಣಿಕಮ್ ಇತ್ಯೇಕೇ। ಶೂನ್ಯಮ್ ಇತ್ಯಪರೇ। ಅಸ್ತಿ ದೇಹವ್ಯತಿರಿಕ್ತಃ ಸಂಸಾರೀ ಕರ್ತಾ ಭೋಕ್ತಾ ಇತ್ಯಪರೇ। ಭೋಕ್ತೈವ ಕೇವಲಮ್, ನ ಕರ್ತಾ–ಇತ್ಯೇಕೇ । ಅಸ್ತಿ ತದ್ವ್ಯತಿರಿಕ್ತಃ ಈಶ್ವರಃ ಸರ್ವಜ್ಞಃ ಸರ್ವಶಕ್ತಿಃ– ಇತಿ ಕೇಚಿತ್ । ಆತ್ಮಾ ಸ ಭೋಕ್ತುಃ ಇತ್ಯಪರೇ । ಏವಂ ಬಹವೋ ವಿಪ್ರತಿಪನ್ನಾಃ, ಯುಕ್ತಿವಾಕ್ಯತದಾಭಾಸಸಮಾಶ್ರಯಾಃ ಸನ್ತಃ। ತತ್ರಾವಿಚಾರ್ಯ ಯತ್ಕಿಞ್ಚಿತ್ ಪ್ರತಿಪದ್ಯಮಾನೋ ನಿಃಶ್ರೇಯಸಾತ್ ಪ್ರತಿಹನ್ಯೇತ, ಅನರ್ಥಂ ಚ ಇಯಾತ್ ॥ ಸೂ. ಭಾ. 1–1–1.**

ಭಾವಾರ್ಥ :– (ಆಕ್ಷೇಪ :) ಬ್ರಹ್ಮವು ಆತ್ಮನ ರೂಪದಿಂದ ಪ್ರಸಿದ್ಧವೇ ಆಗಿದ್ದರೆ ತಿಳಿದೇಇದೆಯಾದರೆ ಅದನ್ನು ವಿಚಾರಮಾಡಬೇಕದದ್ದೇನೂ ಇಲ್ಲವೆಂದೇ ಆಯಿತಲ್ಲ ! (ಪರಿಹಾರ) : ಹಾಗಲ್ಲ, ಏಕೆಂದರೆ ಆ ಆತ್ಮನ ವಿಶೇಷಸ್ವರೂಪವು ಯಾವದೆಂಬ ವಿಷಯಕ್ಕೆ ವಿರುದ್ಧಾಭಿಪ್ರಾಯಗಳಿವೆ. ಚೈತನ್ಯವಿಶಿಷ್ಟವಾಗಿರುವ ಶರೀರವೇ ಆತ್ಮನೆಂದು ಸಾಮಾನ್ಯ

**ಜನರೂ ಚಾರ್ವಾಕರೂ ತಿಳಿದಿರುತ್ತಾರೆ. ಚೇತನವಾಗಿರುವ ಇಂದ್ರಿಯಗಳೇ ಆತ್ಮನೆಂದು ಕೆಲವರು; ಮನಸ್ಸೇ ಆತ್ಮನೆಂದು ಮತ್ತೆ ಕೆಲವರು, ಕ್ಷಣಿಕವಾದ ಬುದ್ಧಿಯೇ ಆತ್ಮನೆಂದು ಕೆಲವರು; ಆತ್ಮನಿಲ್ಲವೇಇಲ್ಲವೆಂದು ಕೆಲವರು; ದೇಹಾದಿಗಳಿಗಿಂತ ಬೇರೆಯಾದ ಕರ್ತೃಭೋಕ್ತೃವಾದ ಸಂಸಾರಿಯೊಬ್ಬನುಂಟೆಂದು ಕೆಲವರು; ಅವನು ಭೋಕ್ತೃಮಾತ್ರವೇ, ಕರ್ತೃವಲ್ಲ – ಎಂದು ಕೆಲವರು. ಅವನಿಗಿಂತ ಬೇರೆಯಾಗಿ ಸರ್ವಜ್ಞನೂ ಸರ್ವಶಕ್ತಿಯೂ ಆಗಿರುವ ಈಶ್ವರನೂ ಉಂಟೆಂದು ಕೆಲವರು, ಭೋಕ್ತೃವಿಗೆ ಅವನು ಆತ್ಮನು – ಎಂದು ಮತ್ತೆ ಕೆಲವರು. ಹೀಗೆ ಯುಕ್ತಿ, ವಾಕ್ಯ, ಯುಕ್ತಿವಾಕ್ಯಾಭಾಸಗಳು – ಇವುಗಳನ್ನವಲಂಬಿಸಿ ಕೊಂಡು ಬಹುಜನವಾದಿಗಳು ವಿರುದ್ಧಾಭಿಪ್ರಾಯಗಳುಳ್ಳವರಾಗಿರುವದರಿಂದ ವಿಚಾರ ಮಾಡದೆ ಯಾವದನ್ನಾದರೂ ಆತ್ಮನೆಂದು ಇಟ್ಟುಕೊಂಡುಬಿಟ್ಟರೆ ಪುರುಷಾರ್ಥವೂ ತಪ್ಪಿ, ಅನರ್ಥವನ್ನು ಪಡೆಯಬೇಕಾದೀತು. (ಆದ್ದರಿಂದ ಬ್ರಹ್ಮವನ್ನು ಜಿಜ್ಞಾಸೆಮಾಡುವದು ಅವಶ್ಯ).**

**ವಿವರಣೆ** :– ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಕುರಿತು ವಿಚಾರಮಾಡತಕ್ಕದ್ದೇ ಇಲ್ಲವೆಂದು ತಟ್ಟನೆ ತೋರಬಹುದು. ಆದರೆ ನಮಗೆ ದೇಹ ಇಂದ್ರಿಯಗಳಲ್ಲಿಯೂ ನಾನೆಂಬ ಬುದ್ಧಿ ಇರುತ್ತಿರುವದರಿಂದ ನಿಜವಾದ ಆತ್ಮಸ್ವರೂಪವು ಯಾವದೆಂಬುದನ್ನು ನಿರ್ಣಯಿಸಿಕೊಳ್ಳುವದಕ್ಕಾಗಿ ವಿಚಾರಮಾಡುವದು ಅವಶ್ಯ. ಆತ್ಮಜ್ಞಾನದಿಂದ ಶೋಕಮೋಹಾದಿಗಳು ಹೋಗುವವೆಂದು ಶ್ರುತಿಯಲ್ಲಿದೆ. ಆದ್ದರಿಂದ ಆ ಜ್ಞಾನವನ್ನು ಸಂಪಾದಿಸಿ ಕೊಳ್ಳುವದಕ್ಕಾಗಿ ವಿಚಾರಮಾಡಬೇಕು. ಅದರಿಂದ ಮುಕ್ತಿಯಾಗುವದು; ಇಲ್ಲದಿದ್ದರೆ ಮುಕ್ತಿಯಾಗುವದಿರಲಿ, ದುರ್ಗತಿಯೂ ಆಗುವ ಸಂಭವವಿದೆ.

**6. ಋಗ್ವೇದಾದಿಶಾಸ್ತ್ರಂ ಯೋನಿಃ ಕಾರಣಂ ಪ್ರಮಾಣಮ್ ಅಸ್ಯ ಬ್ರಹ್ಮಣೋ ಯಥಾವತ್ ಸ್ವರೂಪಾಧಿಗಮೇ ॥ ಸೂ.ಭಾ. 1–1–3.**

ಭಾವಾರ್ಥ :– **ಋಗ್ವೇದವೇ ಮುಂತಾದ ಶಾಸ್ತ್ರವೇ ಈ ಬ್ರಹ್ಮದ ಸ್ವರೂಪವನ್ನು ಇದ್ದದ್ದು ಇದ್ದಂತೆ ಅರಿತುಕೊಳ್ಳುವದಕ್ಕೆ ಯೋನಿಯು, ಕಾರಣವು, ಎಂದರೆ ಪ್ರಮಾಣವು.**

ವಿವರಣೆ :– ಬ್ರಹ್ಮವೇ ನಮ್ಮ ಸ್ವರೂಪವಾದರೂ ಅದರ ವಿಷಯಕ್ಕೆ ವಾದಿಗಳು ಭಿನ್ನಭಿನ್ನ ಅಭಿಪ್ರಾಯಗಳುಳ್ಳವರಾಗಿರುವದರಿಂದ ಅದನ್ನು ಅರಿತು ಕೊಳ್ಳುವುದಕ್ಕೆ ಶಾಸ್ತ್ರವೇ, ಎಂದರೆ, ವೇದವೇ ಪ್ರಮಾಣವು. ಈ ವಾಕ್ಯದ ಅಭಿಪ್ರಾಯವು ಮುಂದಿನ ವಾಕ್ಯಗಳಿಂದ ಸ್ಫುಟವಾಗುತ್ತದೆ.

**7. ವಾಕ್ಯಾರ್ಥವಿಚಾರಣಾಧ್ಯವಸಾನನಿರ್ವೃತ್ತಾ ಹಿ ಬ್ರಹ್ಮಾವಗತಿಃ, ನಾನುಮಾನಾದಿಪ್ರಮಾಣಾನ್ತರನಿರ್ವೃತ್ತಾ ॥ ಸೂ.ಭಾ. 1-1-2.**

ಭಾವಾರ್ಥ :- ವೇದಾಂತವಾಕ್ಯಗಳ ಅರ್ಥವನ್ನು ವಿಚಾರಿಸಿ ಮಾಡಿಕೊಳ್ಳುವ ನಿಶ್ಚಯದಿಂದಲೇ ಬ್ರಹ್ಮಾನುಭವವು ಉಂಟಾಗುತ್ತದೆಯೇ ಹೊರತು, ಅನುಮಾನವೇ ಮುಂತಾದ ಬೇರೆಯ ಪ್ರಮಾಣಗಳಿಂದ ಆಗುವದಿಲ್ಲ.

**ವಿವರಣೆ :-** ಪ್ರಮಾಣಗಳಿಂದಾಗುವ ವಸ್ತುನಿಶ್ಚಯಕ್ಕೂ ಬ್ರಹ್ಮವಸ್ತುವಿನ ವಿಷಯವಾದ ನಿಶ್ಚಯಕ್ಕೂ ಬಹಳ ವೈಲಕ್ಷಣ್ಯವಿದೆ. ಇದನ್ನು ಮುಂದೆ ಸ್ಫುಟಗೊಳಿಸಲಾಗುವದು. ಇದಲ್ಲದೆ ಬ್ರಹ್ಮವಸ್ತುವನ್ನು ಪ್ರಮಾಣಗಳಿಂದ ಅರಿತುಕೊಳ್ಳುವದಕ್ಕೆ ಆಗುವಂತೆಯೇ ಇಲ್ಲ. ಇದಕ್ಕೆ ಕಾರಣವನ್ನು ಮುಂದಿನ ವಾಕ್ಯದಿಂದ ತಿಳಿದುಕೊಳ್ಳಬಹುದು.

**8. ರೂಪಾದ್ಯಭಾವಾದ್ ಹಿ ನಾಯಮರ್ಥಃ ಪ್ರತ್ಯಕ್ಷಸ್ಯ ಗೋಚರಃ। ಲಿಙ್ಗಾದ್ಯಭಾವಾಚ್ಚ ನಾನುಮಾನಾದೀನಾಮ್ । ಆಗಮಮಾತ್ರಸಮಧಿಗಮ್ಯ ಏವ ತು ಅಯಮರ್ಥೋ ಧರ್ಮವತ್ ॥ ಸೂ. ಭಾ. 3-1-6.**

ಭಾವಾರ್ಥ :- ಈ ಬ್ರಹ್ಮವಸ್ತುವಿಗೆ ರೂಪವೇ ಮುಂತಾದವುಗಳಿಲ್ಲದ್ದರಿಂದ ಪ್ರತ್ಯಕ್ಷಕ್ಕೆ ವಿಷಯವಲ್ಲ; ಲಿಂಗವೇ ಮುಂತಾದವುಗಳಿಲ್ಲದ್ದರಿಂದ ಅನುಮಾನವೇ ಮುಂತಾದ ಪ್ರಮಾಣಗಳಿಗೂ ವಿಷಯವಲ್ಲ. ಇದು ಶಾಸ್ತ್ರೋಪದೇಶದಿಂದ ಮಾತ್ರವೇ ಧರ್ಮದಂತೆ ತಿಳಿದುಬರತಕ್ಕ ವಸ್ತುವಾಗಿದೆ.

**ವಿವರಣೆ :-** ಶಬ್ದಸ್ಪರ್ಶರೂಪರಸಗಂಧಗಳೆಂಬ ಗುಣಗಳಿದ್ದ ವಸ್ತುವನ್ನು ಶ್ರೋತ್ರ, ತ್ವಗಿಂದ್ರಿಯ, ಚಕ್ಷುಸ್ಸು, ಜಿಹ್ವೆ, ಘ್ರಾಣ – ಎಂಬ ಜ್ಞಾನೇಂದ್ರಿಯಗಳು ತಿಳಿಸಬಲ್ಲವು. ಇಂದ್ರಿಯಗಳೇ ಪ್ರತ್ಯಕ್ಷಪ್ರಮಾಣವೆನಿಸುತ್ತವೆ. ಬ್ರಹ್ಮಕ್ಕೆ ಈ ಯಾವ ಗುಣಗಳೂ ಇರುವದಿಲ್ಲವಾದ್ದರಿಂದ ಇದು ಇಂದ್ರಿಯಗೋಚರವಲ್ಲ. ತಾರ್ಕಿಕರು ಹೊಗೆಯೆಂಬ ಲಿಂಗವನ್ನು (ಗುರುತನ್ನು) ಕಂಡು ಅಲ್ಲಿ ಬೆಂಕಿಯಿರಬೇಕೆಂದು **ಅನುಮಾನ ಪ್ರಮಾಣದಿಂದ** ಕಲ್ಪಿಸುವರು; ಆದರೆ ಬ್ರಹ್ಮಕ್ಕೆ ಇಂಥ ಯಾವ ಗುರುತೂ ಇಲ್ಲದ್ದರಿಂದ ಅದು ಅನುಮಾನಕ್ಕೂ ವಿಷಯವಲ್ಲ. ಗೋವಿನಂತೆ ಇರುವದರಿಂದ ಗವಯ (ಕಾಡುಕೋಣವಿದು) ಎಂಬಂತೆ ಹೋಲಿಕೆಯ ಸಾಧನದಿಂದ **ಉಪಮಾನ**

ಪ್ರಮಾಣದಿಂದ ಕೆಲವು ವಸ್ತುಗಳನ್ನು ತಿಳಿದುಕೊಳ್ಳುವರು. ಬ್ರಹ್ಮವು ಯಾವದನ್ನೂ ಹೋಲುವದಿಲ್ಲವಾದ್ದರಿಂದ ಆ ಪ್ರಮಾಣವೂ ಇಲ್ಲಿ ಕೆಲಸಕ್ಕೆ ಬರುವುದಿಲ್ಲ. ದೇವದತ್ತನು ಹಗಲು ಊಟಮಾಡದೇ ಇದ್ದರೂ ಅವನ ಮೈದಪ್ಪವಾಗಿಯೇ ಇದೆ; ಆದ್ದರಿಂದ ಅವನು ರಾತ್ರೆ ಊಟಮಾಡುತ್ತಿರಬೇಕೆಂಬುದು **ಅರ್ಥಾಪತ್ತಿಯು**. ಇನ್ನೊಂದು ರೀತಿಯಿಂದ ಹೊಂದುವದಿಲ್ಲವಾದ್ದರಿಂದ ಹೀಗಿರಬೇಕು ಎಂದು ಕಲ್ಪಿಸುವದಕ್ಕೆ ಈ ಪ್ರಮಾಣವು ಬೇಕು. ಆದರೆ ಇಂಥ ಉಪಪಾದಕವೂ ಬ್ರಹ್ಮಕ್ಕಿಲ್ಲವಾದ್ದರಿಂದ ಅದು ಅರ್ಥಾಪತ್ತಿಪ್ರಮಾಣಕ್ಕೂ ವಿಷಯವಲ್ಲ. ಈ ನೆಲದಮೇಲೆ ಗಡಿಗೆ ಇದೆ ಎಂಬುದು ಯಾವ ಪ್ರಮಾಣದಿಂದಲೂ ಕಾಣಬರುವದಿಲ್ಲವಾದ್ದರಿಂದ ಇಲ್ಲಿ ಗಡಿಗೆಯಿಲ್ಲ ಎಂದು ಕಲ್ಪಿಸುವದಕ್ಕೆ **ಅನುಪಲಬ್ಧಿಪ್ರಮಾಣವೆಂದು** ಹೆಸರು. ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಇಲ್ಲವೆಂದು ಕಲ್ಪಿಸುವದಕ್ಕೂ ಆಗುವದಿಲ್ಲ. ಅಂತೂ ಬ್ರಹ್ಮವು ಯಾವ ಪ್ರಮಾಣಕ್ಕೂ ಗೋಚರವಲ್ಲವೆಂದಾಯಿತು.

**9. ನ ಹ್ಯಾತ್ಮಾ ಆತ್ಮನಃ ಪ್ರಮಾಣಮ್ ಅಪೇಕ್ಷ್ಯ ಸಿಧ್ಯತಿ । ತಸ್ಯ ಹಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಅಪ್ರಸಿದ್ಧಪ್ರಮೇಯಸಿದ್ಧಯೇ ಉಪಾದೀಯನ್ತೇ । ನ ಹಿ ಆಕಾಶಾದಯಃ ಪದಾರ್ಥಾಃ ಪ್ರಮಾಣನಿರಪೇಕ್ಷಾಃ ಸ್ವಯಂಸಿದ್ಧಾಃ ಕೇನಚಿತ್ ಅಭ್ಯುಪಗಮ್ಯನ್ತೇ । ಆತ್ಮಾ ತು ಪ್ರಮಾಣಾದಿವ್ಯವಹಾರಾಶ್ರಯತ್ವಾತ್ ಪ್ರಾಗೇವ ಪ್ರಮಾಣಾದಿವ್ಯವಹಾರಾತ್ ಸಿಧ್ಯತಿ ॥ ಸೂ. ಭಾ. 2–3–7.**

ಭಾವಾರ್ಥ :– ಆತ್ಮನು ತನಗೆ ತಾನು ಪ್ರಮಾಣದ ಅಪೇಕ್ಷೆಯಿಂದ ಸಿದ್ಧವಾಗುವಹಾಗಿಲ್ಲ. ಏಕೆಂದರೆ ಅವನಿಗೇ ಅಪ್ರಸಿದ್ಧವಾಗಿರುವ ಪ್ರಮೇಯಗಳ ಸಿದ್ಧಿಯಾಗುವದಕ್ಕೆಂದಲ್ಲವೆ, ಪ್ರತ್ಯಕ್ಷಾದಿಪ್ರಮಾಣಗಳನ್ನು ಸ್ವೀಕರಿಸುವದು? ಆಕಾಶಾದಿ ಪದಾರ್ಥಗಳು ಪ್ರಮಾಣವನ್ನು ಬಯಸದೆ ತಾವೇ ಸಿದ್ಧವಾಗಿರುವವೆಂದು ಯಾರೋಬ್ಬರೂ ಒಪ್ಪುವದಿಲ್ಲವಷ್ಟೆ ? ಆತ್ಮನಾದರೋ ಪ್ರಮಾಣವೇ ಮುಂತಾದ ವ್ಯವಹಾರಕ್ಕೆ ಆಶ್ರಯನಾಗಿರುವದರಿಂದ ಪ್ರಮಾಣಾದಿವ್ಯವಹಾರಕ್ಕಿಂತ ಮುಂಚಿತವಾಗಿಯೇ ಸಿದ್ಧನಾಗಿರುತ್ತಾನೆ.

**ವಿವರಣೆ** :– ಆತ್ಮನು ಪ್ರಮಾಣಸಿದ್ಧನಲ್ಲ; ತಾನೇ ಮೊದಲು ಸಿದ್ಧನಾಗಿರುತ್ತಾನೆ. ಆಕಾಶಾದಿಗಳು ಪ್ರಮಾಣಗಳ ಬಲದಿಂದ ಆತ್ಮನಿಗೆ ಸಿದ್ಧವಾಗುತ್ತವೆ,

ಹೀಗಿರುವದರಿಂದ ಆತ್ಮನೇ ಪ್ರಮಾಣಾದಿಗಳಿಗೂ ವಿಷಯಿ; ಅವನ್ನು ಅವನು ತಾನೇ ಅರಿತುಕೊಳ್ಳುತ್ತಾನೆ. ತಾನಂತೂ ಎಲ್ಲವನ್ನೂ ಅರಿಯುವ ಪ್ರಮಾತೃವಾಗಿ ಸ್ವತಃಸಿದ್ಧನಾಗಿರುತ್ತಾನೆ.

**10. ನನು, ಆತ್ಮಾ ಅಹಂಪ್ರತ್ಯಯವಿಷಯತ್ವಾತ್ ಉಪನಿಷತ್ಸ್ವೇವ ವಿಜ್ಞಾಯತ ಇತ್ಯನುಪಪನ್ನಮ್ । ನ । ತತ್ಸಾಕ್ಷಿತ್ವೇನ ಪ್ರತ್ಯುಕ್ತತ್ವಾತ್ । ನ ಹಿ ಅಹಂಪ್ರತ್ಯಯವಿಷಯಕರ್ತ್ರ್ಯವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ, ಸಮಃ, ಏಕಃ, ಕೂಟಸ್ಥನಿತ್ಯಃ, ಪುರುಷಃ, ವಿಧಿಕಾಣ್ಡೇ ತರ್ಕಸಮಯೇ ವಾ ಕೇನಚಿತ್ ಅಧಿಗತಃ ಸರ್ವಸ್ಯ ಆತ್ಮಾ ॥ ಸೂ.ಭಾ. 1–1–4.**

ಭಾವಾರ್ಥ :– (ಆಕ್ಷೇಪ:) ಆತ್ಮನು ಅಹಂಪ್ರತ್ಯಯವಿಷಯನಾಗಿರುವದರಿಂದ ಉಪನಿಷತ್ತುಗಳಲ್ಲಿಯೇ ತಿಳಿಯಬರುತ್ತಾನೆಂಬುದು ಹೊಂದುವದಿಲ್ಲವಲ್ಲ! (ಪರಿಹಾರ): ಹಾಗಲ್ಲ. ಅವನಿಗೂ ಆತ್ಮನು ಸಾಕ್ಷಿಯಾಗಿರುತ್ತಾನೆಂದು ಉತ್ತರವನ್ನು ಹೇಳಿರುತ್ತೇವೆ. ಅಹಂಪ್ರತ್ಯಯವಿಷಯವಾಗಿರುವ ಕರ್ತೃವಾಗಿರುವ ಆತ್ಮನಿಗಿಂತ ಅವನಿಗೂ ಸಾಕ್ಷಿಯಾಗಿರುವ, ಸರ್ವಭೂತಗಳಲ್ಲಿಯೂ ಇರುವ ಒಂದೇಸಮನಾಗಿ ಏಕನಾಗಿ ಕೂಟಸ್ಥನಿತ್ಯವಾಗಿರುವ ಪುರುಷನು ವಿಧಿಕಾಂಡದಲ್ಲಾಗಲಿ, ತರ್ಕಶಾಸ್ತ್ರದಲ್ಲಾಗಲಿ ಯಾರಿಗೂ ತಿಳಿಯಬಂದಿಲ್ಲವಷ್ಟೆ ?

**ವಿವರಣೆ** :– ಆತ್ಮನು ಪ್ರಮಾಣಗಳಿಗಿಂತ ಮೊದಲೇ ಸಿದ್ಧನಾಗಿರುವದರಿಂದ ಅವನನ್ನು ತಿಳಿಸಿಕೊಡುವದಕ್ಕೆ ಪ್ರಮಾಣಗಳೇನೂ ಬೇಕಿಲ್ಲವೆಂದದ್ದರಿಂದ ಪ್ರಮಾತೃವೇ ವೇದಾಂತದಲ್ಲಿ ಹೇಳಿರುವ ಆತ್ಮನೆಂದು ಕೆಲವರು ತಪ್ಪಾಗಿ ತಿಳಿದುಕೊಳ್ಳಬಹುದು. ಆದರೆ ನಿಜವು ಹೀಗಿಲ್ಲ. ಪ್ರಮಾತೃವು ಒಂದೊಂದು ಶರೀರಕ್ಕೆ ಒಬ್ಬೊಬ್ಬನಾಗಿರುತ್ತಾನೆ. ವೇದಾಂತದಲ್ಲಿ ಹೇಳಿರುವ ಆತ್ಮನಾದರೋ ಎಲ್ಲಾ ಶರೀರಗಳಲ್ಲಿಯೂ ಇರುವ ಒಬ್ಬನೇ ಆಗಿರುವ ನಿರ್ವಿಕಾರನಾದ ಸರ್ವಸಾಕ್ಷಿಯಾಗಿರುವ ಪರಮಾತ್ಮನು ; ಅವನನ್ನೇ ಬ್ರಹ್ಮವೆಂದು ವೇದಾಂತಗಳಲ್ಲಿ ಹೇಳಿರುವದು. ಆ ಆತ್ಮನನ್ನು ಶ್ರುತಿಪ್ರಮಾಣದಿಂದಲೇ ಅರಿತುಕೊಳ್ಳಬೇಕಾಗಿರುತ್ತದೆ. ಅವನು ಪ್ರಮಾಣಸಿದ್ಧನಲ್ಲದ್ದರಿಂದಲೇ ತರ್ಕಪ್ರಧಾನರಾದ ವಾದಿಗಳೂ ಸಾಮಾನ್ಯ ಜನರೂ ಅವನ ಸ್ವರೂಪವನ್ನು ಅರಿಯಲಾರದೆ ಇರುತ್ತಾರೆ.

**11. ತತ್ ಪ್ರತ್ಯಕ್ಷವಿಷಯಮೇವೇತಿ ಚೇತ್ । ನ । ವಾದಿವಿಪ್ರತಿಪತ್ತಿದರ್ಶನಾತ್ । ನ ಹಿ ದೇಹಾನ್ತರಸಂಬನ್ಧಿನ ಆತ್ಮನಃ ಪ್ರತ್ಯಕ್ಷೇಣಾಸ್ತಿತ್ವವಿಜ್ಞಾನೇ ಲೌಕಾಯತಿಕಾ ಬೌದ್ಧಾಶ್ಚ ನಃ ಪ್ರತಿಕೂಲಾಃ ಸ್ಯುಃ 'ನಾಸ್ತ್ಯಾತ್ಮಾ' ಇತಿ ವದನ್ತಃ ।.... ನ ಹಿ ಪ್ರತ್ಯಕ್ಷೇಣ ನಿರೂಪಿತೇ ಸ್ಥಾಣ್ವಾದೌ ವಿಪ್ರತಿಪತ್ತಿರ್ಭವತಿ । ವೈನಾಶಿಕಾಸ್ತು ಅಹಮಿತಿ ಪ್ರತ್ಯಯೇ ಜಾಯಮಾನೇಽಪಿ ದೇಹಾನ್ತರವ್ಯತಿರಿಕ್ತಸ್ಯ ನಾಸ್ತಿತ್ವಮೇವ ಪ್ರತಿಜಾನತೇ । ತಸ್ಮಾತ್, ಪ್ರತ್ಯಕ್ಷವಿಷಯವೈಲಕ್ಷಣ್ಯಾತ್, ಪ್ರತ್ಯಕ್ಷಾತ್ ನಾತ್ಮಾಸ್ತಿತ್ವಸಿದ್ಧಿಃ ॥ ಬೃ. ಭಾ. ಅವ.**

ಭಾವಾರ್ಥ :– (ಆಕ್ಷೇಪ :) ಆತ್ಮನು ಇದಾನೆಂಬುದು ಪ್ರತ್ಯಕ್ಷಕ್ಕೆ ವಿಷಯವಲ್ಲವೆ? (ಪರಿಹಾರ) : ಅಲ್ಲ, ಏಕೆಂದರೆ, ವಾದಿಗಳಲ್ಲಿ ವಿರುದ್ಧಾಭಿಪ್ರಾಯವಿರುವದು ಕಂಡುಬರುತ್ತದೆ. ದೇಹಾಂತರಸಂಬಂಧಿಯಾದ ಆತ್ಮನು ಇದಾನೆಂದು ಪ್ರತ್ಯಕ್ಷದಿಂದಲೇ ಗೊತ್ತಾಗುವಂತಿದ್ದರೆ ಚಾರ್ವಾಕರೂ ಬೌದ್ಧರೂ 'ಆತ್ಮನಿಲ್ಲ' ಎನ್ನುತ್ತಾ ನಮಗೆ ಎದುರುಬೀಳುತ್ತಿರಲಿಲ್ಲ. ಪ್ರತ್ಯಕ್ಷದಿಂದ ಇದು ಮೋಟುಮರವೇ ಎಂದು ನಿಶ್ಚಿತವಾಗಿರುವಲ್ಲಿ, 'ಮರ, 'ಮನುಷ್ಯ' – ಎಂಬ ವಿರುದ್ಧಾಭಿಪ್ರಾಯಗಳು ಆಗುವದಿಲ್ಲವಷ್ಟೆ? ಬೌದ್ಧರಾದರೋ 'ನಾನು' ಎಂಬ ಪ್ರತ್ಯಯವು ಉಂಟಾಗುತ್ತಿದ್ದರೂ ದೇಹಕ್ಕಿಂತ ವ್ಯತಿರಿಕ್ತವಾಗಿ ಆತ್ಮನಿಲ್ಲವೆಂದೇ ಹೇಳುತ್ತಿದಾರೆ. ಆದ್ದರಿಂದ ಪ್ರತ್ಯಕ್ಷವಿಷಯಕ್ಕಿಂತ ಆತ್ಮನು ವಿಲಕ್ಷಣನಾಗಿರುತ್ತಾನಾದ್ದರಿಂದ ಆ ಪ್ರಮಾಣದಿಂದ ಆತ್ಮಸಿದ್ಧಿಯಾಗಲಾರದು.

**ವಿವರಣೆ** :– ಸಾಕ್ಷಿರೂಪನಾದ ಆತ್ಮನ ಮಾತು ಹಾಗಿರಲಿ, 'ನಾನು' ಎಂಬ ಅರಿವಿಗೆ ವಿಷಯನಾಗಿರುವ ಆತ್ಮನು ಕೂಡ ಪ್ರತ್ಯಕ್ಷಪ್ರಮಾಣದಿಂದ ಸಿದ್ಧನಾಗುವಂತಿಲ್ಲ. 'ಶರೀರವೇ ಆತ್ಮನು', 'ಕ್ಷಣಿಕವಿಜ್ಞಾನವೇ ಆತ್ಮನು' ಎಂದು ಬೇರೆಬೇರೆಯ ವಾದಿಗಳು ಹೇಳುತ್ತಿದಾರೆ. ಹಿಂದಿನ ಚಾರ್ವಾಕರು ಮಾತ್ರವಲ್ಲ; ಈಗಿನ ಭೌತಿಕವಿಜ್ಞಾನವನ್ನು ಅವಲಂಬಿಸಿರುವ ಯುಕ್ತಿಪ್ರಧಾನರೂ ಶರೀರಕ್ಕಿಂತ ಬೇರೆಯಾಗಿ ಜೀವನಿಲ್ಲ – ಎಂದು ವಾದಿಸುತ್ತಿದಾರೆ. **ಬರ್ಟ್ರಾಂಡ್‌ರಸೆಲ್** ಎಂಬಾತನು Religion and Science (ಮತವೂ ವಿಜ್ಞಾನಶಾಸ್ತ್ರವೂ) ಎಂಬ ಗ್ರಂಥದಲ್ಲಿ Soul and Body (ಜೀವನೂ ಶರೀರವೂ) ಎಂಬ ಐದನೆಯ ಅಧ್ಯಾಯದಲ್ಲಿ ಶರೀರಕ್ಕಿಂತ ಬೇರೆಯಾದ ಜೀವನು ಇದಾನೆಂಬುದನ್ನು ಖಂಡಿಸಿ ಕೊನೆಯಲ್ಲಿ ಹೀಗೆಂದು ಬರೆದಿರುತ್ತಾನೆ:

The continuity of a person throughout the life of his body, if, as I contend, it depends upon habit formation, must also depend upon the continuity of the body. It would be as easy to transfer a water-course to heaven without loss of identity as it would be to transfer a person. (P. 142)

(ಮನುಷ್ಯನು ತನ್ನ ಶರೀರವಿರುವವರೆಗೂ ಇರುತ್ತಾನೆಂಬುದು ಮತ್ತೆ ಮತ್ತೆ ಹಾಗೆಂದುಕೊಳ್ಳುವ ಅಭ್ಯಾಸಮಾತ್ರದ ಫಲವಾಗಿದೆ ಎಂದು ಆಗಲೆ ವಾದಿಸಿರುತ್ತೇನಷ್ಟೇ? ಆಮೇಲೂ ಅವನು ಇರುವದಕ್ಕೆ ಅವನ ಶರೀರವು ಇದ್ದೇ ಇರಬೇಕು. ಶರೀರದ ಅವಲಂಬನೆಯಿಲ್ಲದೆ ಮನುಷ್ಯನನ್ನು ಸ್ವರ್ಗಕ್ಕೆ ಕಳುಹಿಸುವದೆಂಬುದು ಒಂದು ಜಲಪ್ರವಾಹವನ್ನು ಅದೇ ಆಕಾರದಿಂದ ಸ್ವರ್ಗಕ್ಕೆ ಕಳುಹಿಸುವಷ್ಟೇ ಸುಲಭ, ಎಂದರೆ ಎಂದಿಗೂ ಆಗತಕ್ಕದ್ದಲ್ಲ) – ಎಂದು ಬರೆದಿರುವದನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು.

**12. ಆಗಮೇನ ತು ಆತ್ಮಾಸ್ತಿತ್ವೇ ಅವಗತೇ ವೇದಪ್ರದರ್ಶಿತ ಲೌಕಿಕಲಿಙ್ಗವಿಶೇಷೈಶ್ಚ ತದನುಸಾರಿಣೋ ಮೀಮಾಂಸಕಾಃ ತಾರ್ಕಿಕಾಶ್ಚ ಅಹಂ ಪ್ರತ್ಯಯಲಿಙ್ಗಾನಿ ಚ ವೈದಿಕಾನ್ಯೇವ ಸ್ವಮತಿಪ್ರಭವಾಣಿ ಇತಿ ಕಲ್ಪಯನ್ತೋ ವದನ್ತಿ, ಪ್ರತ್ಯಕ್ಷಶ್ಚ ಅನುಮೇಯಶ್ಚ ಆತ್ಮಾ ಇತಿ ॥ ಬೃ. ಭಾ. ಅವ.**

**ಭಾವಾರ್ಥ :– ಆಗಮದಿಂದ ಆತ್ಮನಿದಾನೆಂಬುದು ಗೊತ್ತಾಗಿರುವದರಿಂದಲೂ ವೇದದಲ್ಲಿ ತಿಳಿಸಿಕೊಟ್ಟಿರುವ ಕೆಲವು ಗುರುತುಗಳಿಂದಲೂ ವೇದಾನುಸಾರಿಗಳಾದ ಮೀಮಾಂಸಕರೂ ತಾರ್ಕಿಕರೂ ವೇದೋಕ್ತವಾದ ಅಹಂಪ್ರತ್ಯಯದ ಲಿಂಗಗಳನ್ನು ತಮ್ಮ ಬುದ್ಧಿಯಿಂದಲೇ ತಿಳಿದುಬಂದವುಗಳೆಂದು ಕಲ್ಪಿಸಿಕೊಂಡು ಆತ್ಮನು ಪ್ರತ್ಯಕ್ಷನು, ಮತ್ತು ಅನುಮೇಯನು – ಎನ್ನುತ್ತಿದಾರೆ.**

**ವಿವರಣೆ** :– ಆತ್ಮನನ್ನು ಪ್ರಮಾಣಗಳಿಂದಲೇ ನಿಶ್ಚಯಿಸುತ್ತೇವೆಂದು ಹೇಳುವ ಮೀಮಾಂಸಕರೂ, ವೈಶೇಷಿಕರೇ ಮುಂತಾದ ತಾರ್ಕಿಕರೂ ಆತ್ಮನು ನಾನು ಎಂಬ ಪ್ರತ್ಯಯಕ್ಕೆ ಗೋಚರನಾಗಿರುವದರಿಂದ **ಮಾನಸಪ್ರತ್ಯಕ್ಷಕ್ಕೆ** ವಿಷಯನೆಂದೂ, ಯಾವನು ಪ್ರಾಣಾಪಾನಾದಿವೃತ್ತಿಗಳ ಕರ್ತೃವೋ ಅವನೇ

ಆತ್ಮನು – ಎಂದು ಮುಂತಾದ ಅನುಮಾನಪ್ರಮಾಣಕ್ಕೆ ಗೋಚರನೆಂದೂ ಕಲ್ಪಿಸುತ್ತಿದಾರೆ. ನಿಜವಾಗಿ ಈ ಅಹಂಪ್ರತ್ಯಯಾದಿಗಳು ವೇದದಲ್ಲಿ ಹೇಳಿರುವವೇ ಹೊರತು, ಲೌಕಿಕಪ್ರಮಾಣವಾಗಲಾರವು; ಏಕೆಂದರೆ ಪ್ರಮಾತೃವಾದ ಆತ್ಮನು ಪ್ರಮೇಯಕ್ಕೆ ಗೋಚರನಾಗಲೇ ಆರನು.

**13. ದೇಹಾನ್ತರಗತೇಷ್ಟಾನಿಷ್ಟಪ್ರಾಪ್ತಿಪರಿಹಾರೋಪಾಯವಿಶೇಷಾರ್ಥಿನಃ, ತದ್ವಿಶೇಷಜ್ಞಾಪನಾಯ ಕರ್ಮಕಾಣ್ಡಮಾರಬ್ಧಮ್; ನ ತ್ವಾತ್ಮನಃ ಇಷ್ಟಾನಿಷ್ಟ ಪ್ರಾಪ್ತಿಪರಿಹಾರೇಚ್ಛಾಕಾರಣಮ್ ಆತ್ಮವಿಷಯಮ್ ಅಜ್ಞಾನಂ ಕರ್ತೃಭೋಕ್ತೃ ಸ್ವರೂಪಾಭಿಮಾನಲಕ್ಷಣಂ ತದ್ವಿಪರೀತಬ್ರಹ್ಮಾತ್ಮಸ್ವರೂಪವಿಜ್ಞಾನೇನಾಪ ನೀತಮ್ ॥** ಬೃ. ವಾ. ಅವ.

ಭಾವಾರ್ಥ :– ದೇಹಾಂತರಕ್ಕೆ ಸಂಬಂಧಪಟ್ಟ ಇಷ್ಟಾನಿಷ್ಟಗಳನ್ನು ಪಡೆದುಕೊಳ್ಳುವದಕ್ಕೂ ಪರಿಹಿಸಿಕೊಳ್ಳುವದಕ್ಕೂ ಯಾವಯಾವದು ಉಪಾಯವೋ ಅದನ್ನು ಇಚ್ಛಿಸುವವನಿಗೆ, ಇಂಥಿಂಥದ್ದು ಉಪಾಯವೆಂದು ತಿಳಿಸಿಕೊಡುವದಕ್ಕೆ ಕರ್ಮಕಾಂಡವು ಪ್ರಾರಂಭವಾಗಿದೆ. ಆದರೆ ಅಲ್ಲಿ ಇಷ್ಟವನ್ನು ಪಡೆದುಕೊಳ್ಳಬೇಕು, ಅನಿಷ್ಟವನ್ನು ತೊಗಲಗಿಸಿಕೊಳ್ಳಬೇಕು – ಎಂಬ ಇಚ್ಛೆಗೆ ಕಾರಣವಾಗಿರುವ ಆತ್ಮವಿಷಕಯಕವಾದ – ನಾನು ಕರ್ತೃಭೋಕ್ತೃಸ್ವರೂಪನೆಂದು ತಿಳಿಯುವ – ಅಜ್ಞಾನವನ್ನು ಅದಕ್ಕೆ ವಿರುದ್ಧವಾದ ನಾನು ಬ್ರಹ್ಮಾತ್ಮಸ್ವರೂಪನೆಂಬ ವಿಜ್ಞಾನದಿಂದ ಕಳೆದುಹಾಕಿರುವದಿಲ್ಲ.

ವಿವರಣೆ :– ಕರ್ಮಕಾಂಡಕ್ಕೂ ಜ್ಞಾನಕಾಂಡಕ್ಕೂ ಪ್ರತಿಪಾದ್ಯ ವಿಷಯದಲ್ಲಿರುವ ವೈಲಕ್ಷಣವನ್ನು ಇಲ್ಲಿ ತಿಳಿಸಿರುತ್ತದೆ. ತಾನು ಕರ್ತೃಭೋಕ್ತೃ ರೂಪನೆಂದು ಪ್ರತಿಯೊಬ್ಬನೂ ತಿಳಿದುಕೊಂಡಿರುತ್ತಾನೆ. ಆದರೆ ಅವನಿಗೆ ಜನ್ಮಾಂತರದಲ್ಲಿ ಅಥವಾ ಲೋಕಾಂತರದಲ್ಲಿ ಈಗಿನ ಕರ್ಮಗಳಿಗೆ ಫಲವನ್ನು ಅನುಭವಿಸಬೇಕಾಗುವದೆಂಬುದಾಗಲಿ, ಆಗ್ಗೆ ತನಗೆ ಆಗಬೇಕಾಗಿರುವ ಇಷ್ಟಪ್ರಾಪ್ತಿಗೂ ಅನಿಷ್ಟನಿವೃತ್ತಿಗೂ ಉಪಾಯವೇನೆಂಬುದಾಗಲಿ ತಿಳಿದಿರುವುದಿಲ್ಲ. ಆ ಉಪಾಯ ವನ್ನು ಮಾತ್ರ ಕರ್ಮಕಾಂಡದ ವಾಕ್ಯಗಳು ತಿಳಿಸುತ್ತವೆ. ಕರ್ತೃತ್ವಭೋಕ್ತೃತ್ವವೇ ಅವಿದ್ಯಾಕೃತವೆಂಬುದನ್ನು ತಿಳಿಸಿಕೊಟ್ಟು ಆ ತಪ್ಪುತಿಳಿವಳಿಕೆಯನ್ನು ಕಳೆಯುವದರ ಮೂಲಕ 'ನೀನು ನಿಜವಾಗಿ ಎಂದೆಂದಿಗೂ ಬ್ರಹ್ಮಸ್ವರೂಪನೇ' ಎಂಬುದನ್ನು ಜ್ಞಾನಕಾಂಡದಲ್ಲಿ ಮಾತ್ರ ಹೇಳಿಕೊಟ್ಟಿರುತ್ತದೆ.

**14. ತದ್ ಬ್ರಹ್ಮ ಸರ್ವಜ್ಞಂ ಸರ್ವಶಕ್ತಿ ಜಗದುತ್ಪತ್ತಿಸ್ಥಿತಿಲಯಕಾರಣಮ್, ವೇದಾನ್ತಶಾಸ್ತ್ರಾದೇವ ಅವಗಮ್ಯತೇ । ಕಥಮ್? ಸಮನ್ವಯಾತ್ । ಸರ್ವೇಷು ಹಿ ವೇದಾನ್ತೇಷು ವಾಕ್ಯಾನಿ ತಾತ್ಪರ್ಯೇಣ ಏಕಸ್ಯಾರ್ಥಸ್ಯ ಪ್ರತಿಪಾದಕತ್ವೇನ ಸಮನುಗತಾನಿ ॥ ಸೂ.ಭಾ. 1–1–4.**

ಭಾವಾರ್ಥ :– ಸರ್ವಜ್ಞವೂ ಸರ್ವಶಕ್ತಿಗಳುಳ್ಳದ್ದೂ ಆಗಿ ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣವಾಗಿರುವ ಬ್ರಹ್ಮವು ವೇದಾಂತಶಾಸ್ತ್ರದಿಂದಲೇ ಗೊತ್ತಾಗುತ್ತದೆ. ಏಕೆಂದರೆ ಉಪನಿಷತ್ತುಗಳಲ್ಲೆಲ್ಲ ವಾಕ್ಯಗಳು ತಾತ್ಪರ್ಯದಿಂದ ಈ ವಸ್ತುವನ್ನೇ ಹೇಳುವದರಲ್ಲಿ ಸಮನ್ವಿತವಾಗಿರುತ್ತವೆ.

**ವಿವರಣೆ :**– ಬ್ರಹ್ಮವು ನಮ್ಮೆಲ್ಲರಿಗೂ ಆತ್ಮನೆಂದು ಹೇಳಿದ್ದಾಗಿದೆ. ಆತ್ಮನು ಪ್ರಮಾಣಾದಿವ್ಯವಹಾರಕ್ಕಿಂತ ಮೊದಲೇ ಸಿದ್ಧನಾಗಿರುತ್ತಾನೆಂದೂ ಹೇಳಿರುತ್ತದೆ. ಈ ಬ್ರಹ್ಮವು ಜಗತ್ತಿಗೆ ಕಾರಣವಾಗಿರುವ ಸರ್ವಜ್ಞವೆಂದು ಇಲ್ಲಿ ಹೇಳಿದೆ. ಆದ್ದರಿಂದ ನಮ್ಮ ಆತ್ಮನನ್ನು ಇಂಥ ಬ್ರಹ್ಮವೆನ್ನಬಹುದೇ? ಶಾಸ್ತ್ರವು ಇದಕ್ಕೆ ಪ್ರಮಾಣವೆನ್ನಬಹುದೇ? – ಎಂಬುದನ್ನು ಇನ್ನು ವಿಚಾರಮಾಡಬೇಕಾಗಿದೆ.

**15. ನ ಚ ತದ್ಗತಾನಾಂ ಪದಾನಾಂ ಬ್ರಹ್ಮಸ್ವರೂಪವಿಷಯೇ ನಿಶ್ಚಿತೇ ಸಮನ್ವಯೇ ಅವಗಮ್ಯಮಾನೇ ಅರ್ಥಾನ್ತರಕಲ್ಪನಾ ಯುಕ್ತಾ । ಶ್ರುತಹಾನ್ಯಶ್ರುತಕಲ್ಪನಾಪ್ರಸಙ್ಗಾತ್ ॥ ಸೂ.ಭಾ. 1–1–4.**

ಭಾವಾರ್ಥ :– ವೇದಾಂತವಾಕ್ಯಗಳಲ್ಲಿರುವ ಪದಗಳು ಬ್ರಹ್ಮಸ್ವರೂಪದ ವಿಷಯದಲ್ಲಿಯೇ ನಿಶ್ಚಿತವಾಗಿ ಸಮನ್ವಯವಾಗುವವೆಂಬುದು ಗೊತ್ತಾಗುತ್ತಿರುವಲ್ಲಿ ಮತ್ತೊಂದು ಅರ್ಥವನ್ನು ಕಲ್ಪಿಸುವದು ಸರಿಯಲ್ಲ. (ಹಾಗೆ ಮಾಡಿದರೆ) ಹೇಳಿರುವದನ್ನು ಬಿಡುವದು, ಹೇಳದೆ ಇರುವದನ್ನು ಕಲ್ಪಿಸುವದು – ಎಂಬ ದೋಷವು ಗಂಟುಬಿದ್ದೀತು.

**ವಿವರಣೆ :**– ವೇದವಾಕ್ಯಗಳು ಎರಡು ವಿಧವಾಗಿರುತ್ತವೆ. ವಸ್ತುವನ್ನೇ ತಿಳಿಸಿ ಮುಗಿಯುವ ವಾಕ್ಯಗಳು ಕೆಲವು. 'ಈ ಆತ್ಮನು ಬ್ರಹ್ಮವು' (ಬೃ. 2–5–11), 'ಈ ಜಗತ್ತೆಲ್ಲವೂ ಅತ್ಯಂತಪ್ರಿಯವಾದ ಬ್ರಹ್ಮವೇ' (ಮುಂ. 2–2–11),– ಈ ಬಗೆಯ ವಾಕ್ಯಗಳಲ್ಲಿ ಬ್ರಹ್ಮವಸ್ತುವನ್ನು ಹೇಳುವದರಲ್ಲಿಯೇ ವಾಕ್ಯವ್ಯಾಪಾರವು ಮುಗಿಯುತ್ತದೆ. ವೇದದ ಕರ್ಮಕಾಂಡದಲ್ಲಿರುವ 'ಬದುಕಿರುವವರೆಗೂ

ಅಗ್ನಿಹೋತ್ರವನ್ನು ಮಾಡಬೇಕು' ಮುಂತಾದ ವಾಕ್ಯಗಳು ಹೀಗೆ ಮಾಡಬೇಕು – ಎಂದು ವಿಧಿಯನ್ನು ಹೇಳುವದರಲ್ಲಿ ಕೊನೆಗಾಣುತ್ತವೆ. 'ಹೀಗೆ ಮಾಡಬೇಕು', 'ಹೀಗೆ ಮಾಡಬಾರದು' ಎಂಬ ರೂಪದ ವಾಕ್ಯಗಳು ಅನುಷ್ಠಾನಮಾಡಬೇಕಾದ ಕರ್ಮಗಳನ್ನು ಹೇಳುವಂತೆ 'ಈ ಆತ್ಮನು ಬ್ರಹ್ಮವು' ಮುಂತಾದ ವಾಕ್ಯಗಳಲ್ಲಿ ಮಾಡಬೇಕಾದದ್ದನ್ನು ಹೇಳುವ ಪದಗಳು ಇಲ್ಲ; ವಾಕ್ಯವು ವಸ್ತುಸ್ವರೂಪವನ್ನು ತಿಳಿಸುವದರಲ್ಲಿಯೇ ಮುಗಿದಿದೆ. ಆದ್ದರಿಂದ ವಾಕ್ಯದಲ್ಲಿರುವ ಪದಗಳಿಗೆ ವಸ್ತುವನ್ನು ಹೇಳುವದರಲ್ಲಿ ಅನ್ವಯವಾದರೆ ವಸ್ತುಪರವೆಂದೂ ಕ್ರಿಯೆಯನ್ನು ಹೇಳುವದರಲ್ಲಿ ಅನ್ವಯವಾದರೆ ಮಾತ್ರ ಕ್ರಿಯಾಪರವೆಂದೂ ತಾತ್ಪರ್ಯವನ್ನು ಕಲ್ಪಿಸುವದು ಯುಕ್ತವೇ ಹೊರತು ವಾಕ್ಯದಲ್ಲಿಲ್ಲದ ಅರ್ಥವನ್ನು ಕಲ್ಪಿಸುವದು ನ್ಯಾಯವಲ್ಲ. ಆದ್ದರಿಂದ ಬ್ರಹ್ಮವನ್ನು ತಿಳಿಸುವದಕ್ಕೆ ಶಾಸ್ತ್ರವೇ ಪ್ರಮಾಣವೆಂಬುದು ಸರಿ ಎಂದು ಅಭಿಪ್ರಾಯ.

**16. ನ ವಾಕ್ಯಸ್ಯ ವಸ್ತ್ವನ್ವಾಖ್ಯಾನಂ ವಾ ಕ್ರಿಯಾನ್ವಾಖ್ಯಾನಂ ವಾ ಪ್ರಾಮಾಣ್ಯಾಪ್ರಾಮಾಣ್ಯಕಾರಣಮ್, ಕಿಂ ತರ್ಹಿ, ನಿಶ್ಚಿತಫಲವದ್ವಿಜ್ಞಾನೋತ್ಪಾದಕತ್ವಮ್ । ತದ್ ಯತ್ರಾಸ್ತಿ ತತ್ ಪ್ರಮಾಣಂ ವಾಕ್ಯಮ್, ಯತ್ರ ನಾಸ್ತಿ ತದಪ್ರಮಾಣಮ್ ॥** ಬೃ. **1–4–7.**

**ಭಾವಾರ್ಥ :– ವಾಕ್ಯವು ವಸ್ತುವನ್ನು ಹೇಳುವದಾಗಲಿ ಕ್ರಿಯೆಯನ್ನು ಹೇಳುವದಾಗಲಿ ಅದು ಪ್ರಮಾಣ ಅಥವಾ ಅಪ್ರಮಾಣ – ಎಂಬುದಕ್ಕೆ ಕಾರಣವಲ್ಲ; ಮತ್ತೇನೆಂದರೆ ನಿಶ್ಚಿತವಾದ, ಸಫಲವಾದ ಜ್ಞಾನವನ್ನುಂಟುಮಾಡುವದು.**

**ವಿವರಣೆ :–** ವೇದದಲ್ಲಿ ಕೆಲವು 'ಅರ್ಥವಾದ'ಗಳೆಂಬ ವಾಕ್ಯಗಳಿವೆ. ಅವುಗಳು ಮಾಡಬೇಕಾದ ಕರ್ಮವನ್ನು ಹೇಳುವದಿಲ್ಲವಾದ್ದರಿಂದ ಅವು ಪ್ರಮಾಣವಲ್ಲ – ಎಂದು ಮೀಮಾಂಸಕರು ನಿಶ್ಚಯಿಸಿರುತ್ತಾರೆ. ಹೀಗಿದ್ದರೂ ಅಂಥ ವಾಕ್ಯಗಳು ಮಾಡಬೇಕಾದದ್ದನ್ನು ಹೊಗಳುವದು, ಅಥವಾ ಮಾಡಬಾರದ್ದನ್ನು ನಿಂದಿಸುವದು – ಇವುಗಳಿಂದ ಕರ್ಮವಾಕ್ಯಗಳಿಗೆ ಸಂಬಂಧಪಟ್ಟಿರುತ್ತವೆಯಾದ್ದರಿಂದ ಪ್ರಮಾಣವೆನ್ನಬಹುದು – ಎಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಇಲ್ಲಿ ಭಾಷ್ಯಕಾರರು ಆ ಮತವು ಅರ್ಧಸತ್ಯ; ಏಕೆಂದರೆ ಅರ್ಥವಾದಗಳು ಮತ್ತೊಂದು ವಾಕ್ಯಕ್ಕೆ ಅಂಗವಾಗಿರುವದು ನಿಜ. ಅವುಗಳಲ್ಲಿ ಕೆಲವು ಲೋಕದಲ್ಲಿ

ಗೊತ್ತಿರುವ ಅರ್ಥವನ್ನೇ ಹೇಳುತ್ತವೆ; 'ಬೆಂಕಿಯು ಚಳಿಗೆ ಔಷಧಿ' ಎಂಬ ವಾಕ್ಯವು ಇದಕ್ಕೆ ಉದಾಹರಣೆ. ಈ ವಾಕ್ಯವು **ಅನುವಾದ,** ಬೇರೊಂದು ಪ್ರಮಾಣದಿಂದ ಸಿದ್ಧವಾದದ್ದನ್ನೇ ಹೇಳುತ್ತದೆಯಾದ್ದರಿಂದ ಸ್ವತಂತ್ರವಾಗಿ ಆ ವಿಷಯಕ್ಕೆ ಪ್ರಮಾಣವಲ್ಲ. ಮತ್ತೆ ಕೆಲವು ಲೋಕಸಿದ್ಧವಾದದ್ದಕ್ಕೆ ವಿರುದ್ಧವಾಗಿರುತ್ತವೆ. 'ಕುರುಡನು ರತ್ನದ ಜ್ಞಾನವನ್ನು ಪಡೆಯುವನು' ಎಂಬುದು ಈ ಬಗೆಯ ವಾಕ್ಯ. ಲೋಕಕ್ಕೆ ವಿರೋಧವಾಗದಂತೆ ಈ ವಾಕ್ಯಕ್ಕೆ ಯಾವದಾದರೊಂದು ಅರ್ಥವನ್ನು ಕಲ್ಪಿಸಬೇಕು. ಈ ಎರಡೂ ಇಲ್ಲದ ವಾಕ್ಯಗಳು ಕೆಲವು ಇವೆ; ಇಂದ್ರಾದಿದೇವತೆಗಳ ವಿಷಯಗಳನ್ನು ವರ್ಣಿಸುವ ವಾಕ್ಯಗಳು ಇಂಥವು. ಅವು ಲೋಕವಿರುದ್ಧವೂ ಅಲ್ಲ. ಪ್ರಮಾಣಾಂತರದಿಂದ ಸಿದ್ಧವಾದ ಅರ್ಥವನ್ನೂ ಹೇಳುವದಿಲ್ಲ; ಆದ್ದರಿಂದ ಅಂಥ ಉಪವಾಕ್ಯಗಳಿಗೂ ಆಯಾ ಅರ್ಥವನ್ನು ಕಲ್ಪಿಸಬೇಕು. ಆದ್ದರಿಂದ ವಾಕ್ಯವು ಕ್ರಿಯೆಯನ್ನು ಕುರಿತ ಜ್ಞಾನವನ್ನುಂಟುಮಾಡಲಿ, ವಸ್ತುವನ್ನು ಕುರಿತ ಜ್ಞಾನವನ್ನುಂಟುಮಾಡಲಿ, ನಿಶ್ಚಿತವಾದ ಜ್ಞಾನವನ್ನುಂಟುಮಾಡಿದರೆ ಸಾಕು. ಅಷ್ಟರಿಂದಲೇ ಅದು ಪ್ರಮಾಣವಾಗುತ್ತದೆ. ಆ ಜ್ಞಾನದಿಂದ ಯಾವದಾದರೊಂದು ಪ್ರಯೋಜನವಾಗಬೇಕೆಂದು ಮೀಮಾಂಸಕರು ಹೇಳುತ್ತಾರೆ. ಅದೂ ಆಗಬಹುದೆಂದು ಇಲ್ಲಿ ಒಪ್ಪಿದೆ. ಅಂತೂ ವಸ್ತುವನ್ನು ತಿಳಿಸುವ ವಾಕ್ಯವೂ ಪ್ರಮಾಣವೆಂಬುದು ಇಲ್ಲಿ ಮುಖ್ಯ.

**17. ನ ಚ ಪರಿನಿಷ್ಠಿತವಸ್ತುನಿಷ್ಠಸ್ವರೂಪತ್ವೇಽಪಿ ಪ್ರತ್ಯಕ್ಷಾದಿ ವಿಷಯತ್ವಂ ಬ್ರಹ್ಮಣಃ । 'ತತ್ತ್ವಮಸಿ' ಇತಿ ಬ್ರಹ್ಮಾತ್ಮಭಾವಸ್ಯ ಶಾಸ್ತ್ರಮನ್ತರೇಣ ಅನವಗಮ್ಯಮಾನತ್ವಾತ್ ॥** **ಸೂ.ಭಾ. 1–1–4.**

ಭಾವಾರ್ಥ :– ಬ್ರಹ್ಮವು ಸಿದ್ಧವಸ್ತುವಾದರೂ ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಗೆ ವಿಷಯವಲ್ಲ; ಏಕೆಂದರೆ "ಅದೇ ನೀನು" ಎಂದು ಶ್ರುತಿಯು ಹೇಳುವ ಬ್ರಹ್ಮಾತ್ಮಭಾವವು ಶಾಸ್ತ್ರಪ್ರಮಾಣವನ್ನು ಬಿಟ್ಟು ಮಿಕ್ಕ ಪ್ರತ್ಯಕ್ಷಾದಿಗಳಿಂದ ತಿಳಿಯುವಂತಿಲ್ಲ.

**ವಿವರಣೆ :–** ವಾಕ್ಯವು ಬ್ರಹ್ಮವನ್ನು ತಿಳಿಸಿದರೂ ಮತ್ತೊಂದು ಪ್ರಮಾಣವು ತಿಳಿಸಿರುವದನ್ನೇ ತಿಳಿಸಿಕೊಡುವದರಿಂದ ಅನುವಾದಮಾತ್ರವಾಗಲಿ, ಅದು ಬ್ರಹ್ಮಕ್ಕೆ ಪ್ರಮಾಣವೆಂದೇನೂ ಆಗಬೇಕಾದದ್ದಿಲ್ಲ – ಎಂದರೆ ಇದು ಸರಿಯಲ್ಲ. ಏಕೆಂದರೆ ಬ್ರಹ್ಮಕ್ಕೆ ಶಬ್ದಸ್ಪರ್ಶರೂಪಾದಿಗುಣಗಳಿಲ್ಲವಾದ್ದರಿಂದ ಅದನ್ನು ಪ್ರತ್ಯಕ್ಷದಿಂದ

ಅರಿತುಕೊಳ್ಳುವದಕ್ಕೆ ಆಗುವಂತಿಲ್ಲ. ಇಂದ್ರಿಯಕ್ಕೆ ವಿಷಯವಲ್ಲವಾದ್ದರಿಂದಲೇ ಅನುಮಾನಾದಿಗಳಿಂದ – ಹೊಗೆಯಿರುವದನ್ನು ಕಂಡು ಬೆಂಕಿಯನ್ನು ಕಲ್ಪಿಸುವದೇ ಮುಂತಾದರೀತಿಯಿಂದ – ಊಹಿಸುವದಕ್ಕೂ ಆಗುವದಿಲ್ಲ. ಆದ್ದರಿಂದ ಇದಕ್ಕೆ ಶಾಸ್ತ್ರವೇ ಬೇಕು.

**18. ಜ್ಞಾಪಕಂ ಹಿ ಶಾಸ್ತ್ರಂ ನ ತು ಕಾರಕಮ್ ಇತಿ ಸ್ಥಿತಿಃ ॥**
**ಬೃ. ಭಾ. 1–4–10.**

**ಭಾವಾರ್ಥ :– ಶಾಸ್ತ್ರವು ಇದ್ದದ್ದನ್ನು ತಿಳಿಸುವದೇ ಹೊರತು ಇಲ್ಲದ್ದನ್ನುಂಟು ಮಾಡುವುದಿಲ್ಲ – ಎಂಬುದು ವಸ್ತುಸ್ಥಿತಿ.**

**ವಿವರಣೆ :–** ನಾವು ಅದ್ವಿತೀಯವಾದ ಬ್ರಹ್ಮವಾಗಿರುವೆವೆಂಬುದು ಪ್ರತ್ಯಕ್ಷಾದಿಗಳಿಂದ ತಿಳಿದುಬಂದಿಲ್ಲವಾದ್ದರಿಂದ ಶಾಸ್ತ್ರವು ಪ್ರಮಾಣ ವೆಂದಾಗುವದಕ್ಕಾಗಿ 'ನೀನು ಅದು' ಎಂಬ ವಾಕ್ಯಕ್ಕೆ 'ನಾನು ಬ್ರಹ್ಮವಾಗಿದೇನೆ ಎಂದು ಉಪಾಸನೆ ಮಾಡಬೇಕು; ಅದರಿಂದಲೇ ನಮಗೆ ಬ್ರಹ್ಮರೂಪವು ಪ್ರಾಪ್ತವಾಗುತ್ತದೆ' ಎಂಬ ಅರ್ಥವನ್ನು ಮೀಮಾಂಸಕರ ಮತವನ್ನನುಸರಿಸಿ ಕೆಲವರು ಶಂಕಿಸಬಹುದು; ಇದು ಸರಿಯಲ್ಲ; ಏಕೆಂದರೆ ವಚನವು ಇರುವ ವಿಷಯವನ್ನು ತಿಳಿಸೀತೇ ಹೊರತು ಇದ್ದದ್ದನ್ನು ಇಲ್ಲವಾಗಿಸುವದಕ್ಕಾಗಲಿ, ಇಲ್ಲದ್ದನ್ನು ಉಂಟುಮಾಡುವದಕ್ಕಾಗಲಿ ಸಮರ್ಥವಾಗಲಾರದು ಎಂದು ಆಚಾರ್ಯರು ಇಲ್ಲಿ ಪರಿಹಾರವನ್ನು ಹೇಳಿರುತ್ತಾರೆ. ವೇದವಾಕ್ಯಗಳನ್ನು ಪ್ರಮಾಣವೆಂತ ಉದಾಹರಿಸಿ ಶಾಸ್ತ್ರವನ್ನು ನಂಬದವರೆಲ್ಲ ನಾಸ್ತಿಕರೆಂದು ಹಳಿಯುವ ಮತವು ಆಚಾರ್ಯರಿಗೆ ಒಪ್ಪಿಲ್ಲ.

**19. ನ ಹಿ ಶ್ರುತಿಶತಮಪಿ ಶೀತೋಽಗ್ನಿಃ, ಅಪ್ರಕಾಶಕೋ ವಾ ಇತಿ ಬ್ರುವತ್ ಪ್ರಾಮಾಣ್ಯಮ್ ಉಪೈತಿ ॥ ಗೀ.ಭಾ. 18–66**

**ಭಾವಾರ್ಥ :– ಒಂದುನೂರು ಶ್ರುತಿಗಳು 'ಬೆಂಕಿಯು ತಣ್ಣಗಿದೆ, ಬೆಳಕನ್ನು ಕೊಡುವದಿಲ್ಲ' – ಎಂದರೂ ಅದಕ್ಕೆ ಪ್ರಾಮಾಣ್ಯವು ಬರಲಾರದು.**

**ವಿವರಣೆ :–** ಲೋಕದಲ್ಲಿ ಕಂಡಿರುವದಕ್ಕೆ ವಿರುದ್ಧವಾಗಿರುವ ಜ್ಞಾನವನ್ನುಂಟುಮಾಡುವ ವಾಕ್ಯವು ಎಂದಿಗೂ ಪ್ರಮಾಣವಾಗಲಾರದು –

ಎಂಬುದಕ್ಕೆ ಈ ದೃಷ್ಟಾಂತವನ್ನು ಕೊಟ್ಟಿದೆ. ಇದರಿಂದ ಶಾಸ್ತ್ರವಚನವನ್ನು ಉದಾಹರಿಸಿದ ಮೇಲೂ ಆ ವಾಕ್ಯದಿಂದಾಗುವ ಜ್ಞಾನವು ಸರಿಯೆಂಬುದನ್ನು ಎಲ್ಲರಿಗೂ ಮನವರಿಕೆಯಾಗುವಂತೆ ತಿಳಿಸಿಕೊಡಬೇಕಾದದ್ದು ಅವಶ್ಯವೆಂದಂತೆ ಆಯಿತು.

**20. ಧ್ಯಾನಂ ಚಿನ್ತನಂ ಯದ್ಯಪಿ ಮಾನಸಮ್, ತಥಾಪಿ ಪುರುಷೇಣ ಕರ್ತುಮ್, ಅಕರ್ತುಮ್ ಅನ್ಯಥಾ ವಾ ಕರ್ತುಂ ಶಕ್ಯಮ್ । ಪುರುಷತನ್ತ್ರತ್ವಾತ್। ಜ್ಞಾನಂ ತು ಪ್ರಮಾಣಜನ್ಯಮ್ । ಪ್ರಮಾಣಂ ಚ ಯಥಾಭೂತವಸ್ತುವಿಷಯಮ್। ಅತೋ ಜ್ಞಾನಂ ಕರ್ತುಮ್, ಅಕರ್ತುಮ್, ಅನ್ಯಥಾ ವಾ ಕರ್ತುಮ್ ಅಶಕ್ಯಮ್। ಕೇವಲಂ ವಸ್ತುತನ್ತ್ರಮೇವ ತತ್ । ನ ಚೋದನಾತನ್ತ್ರಮ್ । ನಾಪಿ ಪುರುಷತನ್ತ್ರಮ್।.... ಏವಂ ಸರ್ವಪ್ರಮಾಣವಿಷಯವಸ್ತುಷು ವೇದಿತವ್ಯಮ್ । ತತ್ರೈವಂ ಸತಿ ಯಥಾಭೂತಬ್ರಹ್ಮಾತ್ಮವಿಷಯಮಪಿ ಜ್ಞಾನಂ ನ ಚೋದನಾತನ್ತ್ರಮ್॥**

**ಸೂ.ಭಾ. 1–1–4.**

ಭಾವಾರ್ಥ :– ಧ್ಯಾನವೆಂದರೆ ಚಿಂತಿಸಿಕೊಳ್ಳುವದು. ಅದು ಮಾನಸವೃತ್ತಿಯೇ ಆಗಿದ್ದರೂ ಮನುಷ್ಯನು ಅದನ್ನು ಮಾಡುವದಕ್ಕೆ, ಬಿಡುವದಕ್ಕೆ ಅಥವಾ ಬೇರೊಂದು ಬಗೆಯಲ್ಲಿ ಮಾಡುವದಕ್ಕೆ ಆಗುತ್ತದೆ. ಏಕೆಂದರೆ ಅದು ಪುರುಷನ ಇಚ್ಛೆಗೆ ಅಧೀನವಾಗಿರುತ್ತದೆ. ಜ್ಞಾನವಾದರೋ, ಪ್ರಮಾಣದಿಂದ ಉಂಟಾಗುತ್ತದೆ; ಪ್ರಮಾಣವು ವಸ್ತುವು ಇದ್ದದ್ದು ಇದ್ದಂತೆ ತಿಳಿಸಿಕೊಡತಕ್ಕದ್ದು. ಆದ್ದರಿಂದ ಜ್ಞಾನವು ಮಾಡುವದಕ್ಕೆ, ಬಿಡುವದಕ್ಕೆ, ಅಥವಾ ಬೇರೊಂದು ಬಗೆಯಲ್ಲಿ ಮಾಡಿಕೊಳ್ಳುವದಕ್ಕೆ ಆಗುವದಿಲ್ಲ. ಅದು ವಸ್ತುತಂತ್ರವೇ ಹೊರತು ಶಾಸ್ತ್ರವಿಧಿತಂತ್ರವಲ್ಲ, ಮನುಷ್ಯನಿಗಧೀನವೂ ಅಲ್ಲ. ಹೀಗೆಯೇ ಎಲ್ಲಾ ಪ್ರಮಾಣವಸ್ತು ವಿಷಯಗಳಲ್ಲಿಯೂ ತಿಳಿಯಬೇಕು. ಹೀಗಿರುವದರಿಂದ ಇದ್ದಂತೆಯೇ ಇರುವ ಬ್ರಹ್ಮಾತ್ಮನ ವಿಷಯದಲ್ಲಿ ಆಗುವ ಜ್ಞಾನವೂ ವಿಧಿತಂತ್ರವಲ್ಲ.

**ವಿವರಣೆ :–** ಶಾಸ್ತ್ರದಲ್ಲಿ ಜ್ಞಾನವೆಂಬ ಶಬ್ದದಿಂದಲೂ ಉಪಾಸನೆಯ ರೂಪವಾದ – ಎಂದರೆ ಬರಿಯ ಭಾವನೆಯ ರೂಪವಾಗಿರುವ – ಮನೋವ್ಯಾಪಾರವನ್ನೇ ಹೇಳಿದೆ – ಎಂದು ಕೆಲವರು ಹೇಳುತ್ತಾರೆ. ಇದು ಸರಿಯಲ್ಲ. 'ನೀನೇ ಬ್ರಹ್ಮವಾಗಿರುವೆ' ಎಂದರೆ ಹಾಗೆಂದು ಧ್ಯಾನಿಸಬೇಕು ಎಂದು ಅರ್ಥವನ್ನು ಮಾಡುವದಕ್ಕೆ ಏನು ಕಾರಣವೂ ಇರುವದಿಲ್ಲ. ಧ್ಯಾನವೆಂದರೆ ನಾವು ಮಾಡಿಕೊಳ್ಳುವ ಭಾವನೆ. ಜ್ಞಾನವೆಂದರೆ ಪ್ರತ್ಯಕ್ಷಾದಿಪ್ರಮಾಣವ್ಯಾಪಾರದಿಂದ

ತಾನೇ ಉಂಟಾಗುವ ಅರಿವು. ಆದ್ದರಿಂದ 'ನೀನು ಬ್ರಹ್ಮಸ್ವರೂಪನು' ಎಂದು ಹೇಳುವ ವಾಕ್ಯದಿಂದಲೂ ಜ್ಞಾನವೇ ಆಗುತ್ತದೆ ಎಂದೇ ತಿಳಿಯಬೇಕು – ಎಂಬುದು ಆಚಾರ್ಯರ ಮತ.

**21. ಅನುಭವಾರೂಢಂ ತು ಜ್ಞಾನಫಲಮ್ 'ಯತ್ ಸಾಕ್ಷಾದಪರೋಕ್ಷಾದ್ಬ್ರಹ್ಮ' ಇತಿ ಶ್ರುತೇಃ । 'ತತ್ತ್ವಮಸಿ' ಇತಿ ಚ ಸಿದ್ಧವದುಪದೇಶಾತ್। ನ ಹಿ 'ತತ್ತ್ವಮಸಿ' ಇತ್ಯಸ್ಯ ವಾಕ್ಯಸ್ಯ ಅರ್ಥಃ ತತ್ತ್ವಂ ಮೃತೋ ಭವಿಷ್ಯಸಿ ಇತ್ಯೇವಂ ಪರಿಣೇತುಂ ಶಕ್ಯಃ ॥ ಸೂ.ಭಾ. 3–3–32.**

ಭಾವಾರ್ಥ :– ಜ್ಞಾನದ ಫಲವು ಅನುಭವಕ್ಕೆ ಹೊಂದತಕ್ಕದ್ದು. ಏಕೆಂದರೆ 'ನೇರಾಗಿ ಅಪರೋಕ್ಷವಾಗಿರುವ ಬ್ರಹ್ಮವು', 'ನಮ್ಮ ತೀರ ಒಳಗಿರುವ ಆತ್ಮನು' (ಬೃ. 3–4–1) ಎಂದು ಶ್ರುತಿಯಿದೆ. "ನೀನು ಅದೇ ಆಗಿರುವೆ" ಎಂದು ಈಗಲೆ ಇದ್ದುಕೊಂಡಿರುವ ವಿಷಯವನ್ನು ಹೇಳುವ ರೀತಿಯಲ್ಲಿ ಉಪದೇಶಿಸಿರುತ್ತದೆ. "ನೀನು ಅದೇ ಆಗಿರುವೆ" ಎಂಬ ವಾಕ್ಯದ ಅರ್ಥವನ್ನು 'ನೀನು ಸತ್ತು ಅದೇ ಆಗುವೆ' ಎಂದು ಮಾರ್ಪಡಿಸುವದಕ್ಕೆ ಆಗಲಾರದಷ್ಟೆ ?

**ವಿವರಣೆ** :– 'ನೀನು ಬ್ರಹ್ಮವು' ಎಂದೂ ಶಾಸ್ತ್ರದಲ್ಲಿ ಹೇಳಿರುವದರಿಂದ ಕರ್ಮದ ಫಲವಾದ ಸ್ವರ್ಗಪ್ರಾಪ್ತಿಯೇ ಮುಂತಾದದ್ದರಂತೆ ಈ ಬ್ರಹ್ಮಭಾವವು ಸತ್ತಬಳಿಕ ಆಗತಕ್ಕದ್ದಾಗಿರಬೇಕು – ಎಂದು ಶಂಕಿಸುವವರಿಗೆ ಇದು ಉತ್ತರ. ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದಲೂ 'ನೀನು (ಈಗಲೇ) ಬ್ರಹ್ಮವಾಗಿದ್ದೀಯೆ' ಎಂದೇ ಶ್ರುತಿಯಲ್ಲಿ ಹೇಳುತ್ತಿರುವದರಿಂದಲೂ ಅದು ಸತ್ತಮೇಲೆ ಆಗುವ ಪ್ರಾಪ್ತಿಯಲ್ಲ – ಎಂಬುದು ಆಚಾರ್ಯರ ಅಭಿಪ್ರಾಯ.

**22. ಯತ್ರಾಪಿ ಅವಿದ್ಯಾವಸ್ಥಾಯಮ್ ಅನ್ಯಃ ಅನ್ಯಂ ಪಶ್ಯತಿ, ತತ್ರಾಪಿ ಯೇನ ಇದಂ ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾತ್ ? ಯೇನ ವಿಜಾನಾತಿ ತಸ್ಯ ಕರಣಸ್ಯ ವಿಜ್ಞೇಯೇ ವಿನಿಯುಕ್ತತ್ವಾತ್ । ಜ್ಞಾತುಶ್ಚ ಜ್ಞೇಯ ಏವ ಹಿ ಜಿಜ್ಞಾಸಾ ನಾತ್ಮನಿ । ನ ಚ ಅಗ್ನೇರಿವ ಆತ್ಮಾ ಆತ್ಮನೋ ವಿಷಯಃ । ನ ಚ ಅವಿಷಯೇ ಜ್ಞಾತುರ್ಜ್ಞಾನಮ್ ಉಪಪದ್ಯತೇ । ತಸ್ಮಾತ್ ಯೇನೇದಂ ಸರ್ವಂ ವಿಜಾನಾತಿ ತಂ ವಿಜ್ಞಾತಾರಂ ಕೇನ ಕರಣೇನ ಕೋ ವಾ ಅನ್ಯೋ ವಿಜಾನೀಯಾತ್? ॥ ಬೃ.ಭಾ. 2–4–14.**

ಭಾವಾರ್ಥ :– ಅವಿದ್ಯಾವಸ್ಥೆಯಲ್ಲಿ ಒಬ್ಬನಿಗೆ ಮತ್ತೊಬ್ಬನು ಕಾಣಿಸುತ್ತಾನಷ್ಟೆ? ಅಲ್ಲಿ ಮಾತ್ರ ಯಾವನಿಂದ ಇದೆಲ್ಲವನ್ನೂ ಅರಿಯುತ್ತಾರೋ ಆ ಆತ್ಮನನ್ನು ಏತರಿಂದ ತಿಳಿಯುವದಕ್ಕಾದೀತು? ಏತರಿಂದ ತಿಳಿಯುತ್ತಾರೋ ಆ ಕರಣವು ಅರಿಯಲ್ಪಡಬೇಕಾದ ವಸ್ತುವಿನಲ್ಲಿಯೇ ವಿನಿಯೋಗವಾಗಿರುತ್ತದೆಯಲ್ಲವೆ? ಜ್ಞಾತೃವಿಗೂ ಜ್ಞೇಯವನ್ನು ಅರಿಯುವದರಲ್ಲಿಯೇ ಪ್ರಯತ್ನವಿರುವದೇ ಹೊರತು ತನ್ನನ್ನು ಅರಿಯಬೇಕೆಂದಿರುವ ದರಲ್ಲಿಲ್ಲ. ಬೆಂಕಿಯು ಬೆಂಕಿಯನ್ನು ಹೇಗೆ ಸುಡಲಾರದೋ ಹಾಗೆ ಆತ್ಮನು ತನಗೆ ತಾನೇ ವಿಷಯನಾಗಲಾರನು; ವಿಷಯವಲ್ಲದ್ದರಲ್ಲಿ ಜ್ಞಾತೃವಿಗೆ ಜ್ಞಾನವುಂಟಾಗಲಾರದು. ಆದ್ದರಿಂದ ಯಾವನಿಂದ ಎಲ್ಲವನ್ನೂ ಅರಿಯುತ್ತಾನೋ ಆ ವಿಜ್ಞಾತೃವನ್ನು ಏತರಿಂದ ಅರಿತಾನು ?

ವಿವರಣೆ :– 'ಬ್ರಹ್ಮಾತ್ಮವಸ್ತು ಸ್ವಯಂಪ್ರಕಾಶವಾದರೆ ಏತಕ್ಕೆ ನಮಗೆ ಅದರ ಜ್ಞಾನವಾಗುವದಿಲ್ಲ?' ಎಂದರೆ ಅಹಂಪ್ರತ್ಯಯನಾದ ಆತ್ಮನು ಕೂಡ ಕರಣದಿಂದ ಮತ್ತೊಂದು ವಸ್ತುವನ್ನರಿತಾನೇ ಹೊರತು ತನ್ನನ್ನು ತಾನೇ ಅರಿತಾನೆ? ಅರಿಯಲಾರನು. ಆದ್ದರಿಂದ ಸರ್ವಸಾಕ್ಷಿಯಾದ ಆತ್ಮನನ್ನು ಏತರಿಂದಲೂ ಅರಿತುಕೊಳ್ಳುವದು ಆಗಲಾರದು.

**23. ನನು ಏಕತ್ವೈಕಾನ್ತ್ಯಾಭ್ಯುಪಗಮೇ ನಾನಾತ್ವಾಭಾವಾತ್ ಪ್ರತ್ಯಕ್ಷಾದೀನಿ ಲೌಕಿಕಾನಿ ಪ್ರಮಾಣಾನಿ ವ್ಯಾಹನ್ಯೇರನ್; ನಿರ್ವಿಷಯತ್ವಾತ್, ಸ್ಥಾಣ್ವಾವಿವ ಪುರುಷಾದಿಜ್ಞಾನಾನಿ । ತಥಾ ವಿಧಿಪ್ರತಿಷೇಧಶಾಸ್ತ್ರಮಪಿ ಭೇದಾಪೇಕ್ಷತ್ವಾತ್ ತದಭಾವೇ ವ್ಯಾಹನ್ಯೇತ । ಮೋಕ್ಷಶಾಸ್ತ್ರಸ್ಯಾಪಿ ಶಿಷ್ಯಶಾಸಿತ್ರಾದಿಭೇದಾಪೇಕ್ಷತ್ವಾತ್ ತದಭಾವೇ ವ್ಯಾಘಾತಃ ಸ್ಯಾತ್.... ಅತ್ರೋಚ್ಯತೇ । ನೈಷ ದೋಷಃ । ಸರ್ವವ್ಯವಹಾರಾಣಾಮೇವ ಪ್ರಾಗ್ ಬ್ರಹ್ಮಾತ್ಮತಾವಿಜ್ಞಾನಾತ್ ಸತ್ಯತ್ವೋಪಪತ್ತೇಃ। ಸ್ವಪ್ನವ್ಯವಹಾರಸ್ಯೇವ ಪ್ರಾಕ್ ಪ್ರಬೋಧಾತ್ ॥ ಸೂ. ಭಾ. 2–1–14**

ಭಾವಾರ್ಥ :– ಏಕತ್ವವೊಂದನ್ನೇ ನಿಯಮದಿಂದ ಒಪ್ಪುವದಾದರೆ ನಾನಾತ್ವವೇ ಇಲ್ಲದ್ದರಿಂದ ಪ್ರತ್ಯಕ್ಷವೇ ಮುಂತಾದ ಲೌಕಿಕಪ್ರಮಾಣಗಳಿಗೆ ವಿಷಯವೇ ಇಲ್ಲದ್ದರಿಂದ ಮೋಟುಮರದಲ್ಲಿ ಕಳ್ಳನನ್ನು ಕಲ್ಪಿಸಿದಂತೆ – ಅವು ವಿರುದ್ಧಾರ್ಥವನ್ನು ಹೇಳುವವೆಂದಾಗುವದಿಲ್ಲವೇ? ವಿಧಿಪ್ರತಿಷೇಧಶಾಸ್ತ್ರಕ್ಕೆ ಭೇದವು ಬೇಕಾಗಿರುವದರಿಂದ ಆ ಭೇದವೇ ಇಲ್ಲವೆಂದಾದರೆ ಅದೂ ವಿರುದ್ಧಾರ್ಥವನ್ನು ಹೇಳುವದೆಂದಾಗುವದಿಲ್ಲವೆ? ಮೋಕ್ಷಶಾಸ್ತ್ರಕ್ಕೂ ಶಿಷ್ಯ, ಗುರು– ಮುಂತಾದ ಭೇದವು ಬೇಕಾಗಿರುವದರಿಂದ ಆ

**ಭೇಧವಿಲ್ಲವೆಂದಾದರೆ ಆ ಶಾಸ್ತ್ರವೂ ವಿರುದ್ಧಾರ್ಥಬೋಧಕವೆಂದಾಗುವದಿಲ್ಲವೆ? – ಎಂದರೆ ಈ ದೋಷವೇನೂ ಇಲ್ಲಿಲ್ಲ; ಏಕೆಂದರೆ ಎಚ್ಚರವಾಗುವವರೆಗೂ ಸ್ವಪ್ನವ್ಯವಹಾರವು ಸತ್ಯವಾಗಿರುವಂತೆ, ಎಲ್ಲಾ ವ್ಯವಹಾರಗಳೂ ಬ್ರಹ್ಮಾತ್ಮಜ್ಞಾನವುಂಟಾಗುವದಕ್ಕಿಂತ ಮುಂಚೆ ಸತ್ಯವಾಗಿರಬಹುದಾಗಿದೆ.**

**ವಿವರಣೆ** :– ಅದ್ವೈತವೆಂದರೆ 'ಜೀವನೇ ಬ್ರಹ್ಮವು; ಆ ಬ್ರಹ್ಮವು ತನಗೆರಡನೆಯದೇನೂ ಇಲ್ಲದ್ದು' – ಎಂಬ ಸಿದ್ಧಾಂತ. ಪ್ರಮಾಣವ್ಯವಹಾರಕ್ಕೆಲ್ಲ ಮುಖ್ಯವಾಗಿ ಸತ್ಯವಾದ ಪ್ರಮಾತೃ – ಅರಿತುಕೊಳ್ಳುವವನು, ಪ್ರಮಾಣ – ಅರಿವು, ಪ್ರಮೇಯ – ಅರಿಯಲ್ಪಡತಕ್ಕ ವಸ್ತು ಎಂಬೀ ಭೇದಗಳಿರಬೇಕಷ್ಟೆ? ಆದರೆ ಅದ್ವೈತದಲ್ಲಿ ಈ ಯಾವ ಭೇದಗಳೂ ಇಲ್ಲವಲ್ಲ ! – ಎಂಬ ಶಂಕೆಗೆ ಪರಿಹಾರವಿದು.

ಪ್ರಮಾಣವ್ಯವಹಾರಕ್ಕೆ ಈ ಭೇದಗಳೆಲ್ಲ ಸತ್ಯವೆಂಬ ಬುದ್ಧಿಯಿರಬೇಕೆಂಬುದು ನಿಜ. ಆದರೆ ಭೇದವು ನಿಜವಾಗಿ ಸತ್ಯವಾಗಿರಬೇಕೆಂಬುದೇನೂ ಇಲ್ಲ. ಇದಕ್ಕೆ ಕನಸಿನ ಉದಾಹರಣೆಯನ್ನು ತೆಗೆದುಕೊಳ್ಳೋಣ. ಅಲ್ಲಿ ಪ್ರಮಾಣಾದಿಗಳೆಲ್ಲವೂ ಸತ್ಯವಾಗಿರುವವೆಂಬ ಬುದ್ಧಿಯಿರುತ್ತದೆ. ಅಷ್ಟರಿಂದಲೇ ಆಗಿನ ಎಲ್ಲಾ ವ್ಯವಹಾರವೂ ಸಾಗುತ್ತದೆ. ಅದರಂತೆಯೇ ಪ್ರತ್ಯಕ್ಷಾದಿಗಳು ಪ್ರಮಾಣವೆಂಬ ಬುದ್ಧಿಯೂ ಕರ್ಮಶಾಸ್ತ್ರವು ಪ್ರಮಾಣವೆಂಬ ಬುದ್ಧಿಯೂ ಶಿಷ್ಯ – ಶಾಸ್ತ್ರಾದಿ ಭೇದಬುದ್ಧಿಯೂ ಸತ್ಯವೆಂದೇ ತಿಳಿವಳಿಕೆಯು ಇರುವವರೆಗೆ ವ್ಯವಹಾರವು ನಡೆಯುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಆದರೆ ಅದ್ವಿತೀಯವಾದ ಬ್ರಹ್ಮವೇ ನಾನು – ಎಂಬ ಬುದ್ಧಿಯು ಬಂದಾಗ – ಎಚ್ಚರವಾಗುತ್ತಲೂ ಕನಸು ಹುಸಿಯೆಂದಾಗುವಂತೆ – ಈ ವ್ಯವಹಾರವೆಲ್ಲವೂ ಹುಸಿಯೆಂದಾಗಬಹುದಾಗಿದೆ. ಇದರಲ್ಲಿ ಯಾವ ವಿರೋಧವೂ ಇರುವದಿಲ್ಲ.

**24. ಅಸ್ಮತ್ಪ್ರತ್ಯಯಗೋಚರೇ ವಿಷಯಿಣಿ ಚಿದಾತ್ಮಕೇ ಯುಷ್ಮತ್ಪ್ರತ್ಯಯಗೋಚರಸ್ಯ ವಿಷಯಸ್ಯ ತದ್ಧರ್ಮಾಣಾಂ ಚ ಅಧ್ಯಾಸಃ ತದ್ವಿಪರ್ಯಯೇಣ ವಿಷಯಿಣಸ್ತದ್ಧರ್ಮಾಣಾಂ ಚ ವಿಷಯೇ ಅಧ್ಯಾಸಃ ಮಿಥ್ಯಾ ಇತಿ ಭವಿತಂ ಯುಕ್ತಮ್; ತಥಾಪಿ ಅನ್ಯೋನ್ಯಸ್ಮಿನ್ – ಅನ್ಯೋನ್ಯಾತ್ಮಕತಾಮ್, ಅನ್ಯೋನ್ಯಧರ್ಮಾಂಶ್ಚ ಅಧ್ಯಸ್ಯ ಇತರೇತರಾವಿವೇಕೇನ, ಅತ್ಯನ್ತವಿವಿಕ್ತಯೋಃ,**

**ಧರ್ಮಧರ್ಮಿಣೋಃ, ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ ಅಹಮಿದಮ್, ಮಮೇದಮ್ ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ॥**

**ಅಧ್ಯಾಸಭಾಷ್ಯ.**

**ಭಾವಾರ್ಥ :–** ಅಸ್ಮತ್ಪ್ರತ್ಯಯಕ್ಕೆ (ನಾನು ಎಂಬ ಅರಿವಿಗೆ) ವಿಷಯವಾದ ಚಿತ್ಸ್ವರೂಪದಲ್ಲಿ ಯುಷ್ಮತ್ಪ್ರತ್ಯಯ (ನೀನು, ಇದು – ಎಂಬ ಅರಿವಿಗೆ) ಗೋಚರವಾಗಿರುವ ವಿಷಯದ ಮತ್ತು ಅದರ ಧರ್ಮಗಳನ್ನು ಅಧ್ಯಾಸಮಾಡುವದೂ, ಅದಕ್ಕೆ ವಿಪರೀತವಾಗಿ ವಿಷಯಿಯನ್ನೂ ಅದರ ಧರ್ಮಗಳನ್ನೂ ವಿಷಯದಲ್ಲಿಯೂ ಅಧ್ಯಾಸಮಾಡುವದೆಂಬುದೂ ಸುಳ್ಳು ಎಂದಾಗುವದೇ ಯುಕ್ತ; ಆದರೂ ಅತ್ಯಂತವಾಗಿ ಬೇರೆ ಬೇರೆಯಾಗಿ ವಿಂಗಡವಾಗಿರುವ ಈ ಧರ್ಮಗಳನ್ನೂ ಧರ್ಮಿಗಳನ್ನೂ ಒಂದರಿಂದೊಂದನ್ನು ವಿಂಗಡಿಸಿಕೊಳ್ಳದೆ ಇರುವ ಕಾರಣದಿಂದ, ತಪ್ಪುತಿಳಿವಳಿಕೆಯ ನಿಮಿತ್ತದಿಂದ ಒಂದರಲ್ಲಿ ಒಂದನ್ನು ಹುಟುಹಾಕಿಕೊಂಡು 'ನಾನು ಇದು', 'ನನ್ನದಿದು' ಎಂದು ಸ್ವಭಾವದಿಂದಲೇ ವ್ಯವಹರಿಸುತ್ತಿದಾರೆ.

**ವಿವರಣೆ :–** ನಾನೆಂಬರಿವಿಗೆ ವಿಷಯವಾಗಿರುವದರ ಪರಮಾರ್ಥವು ಆತ್ಮನು, ಇದು ಎಂಬರಿವಿಗೆ ವಿಷಯವಾಗಿರುವದೆಲ್ಲವೂ ಅನಾತ್ಮವು; ಪರಮಾತ್ಮನು ಸತ್ಯವು, ಅನಾತ್ಮವು ಅನೃತವು, ಹುಸಿತೋರಿಕೆ. ಹೀಗಿರುವದರಿಂದ ಇವೆರಡನ್ನೂ ಒಂದನ್ನೊಂದೆಂದು ತಿಳಿಯುವದಾಗಲಿ ಒಂದರ ಧರ್ಮವನ್ನು ಮತ್ತೊಂದರದ್ದೆಂದು ತಿಳಿಯುವದಾಗಲಿ ಆಗುವಂತೆಯೇ ಇಲ್ಲ, ಹೀಗಿದ್ದರೂ ಆತ್ಮನನ್ನು ಅನಾತ್ಮದಂತೆ ವಿಷಯವಾಗಿ ಭಾವಿಸಿಕೊಳ್ಳುವದೂ, ಅನಾತ್ಮವನ್ನು ಆತ್ಮನೆಂದು ಭಾವಿಸಿಕೊಳ್ಳವದೂ ಜನರಿಗೆ ಸ್ವಭಾವವಾಗಿಬಿಟ್ಟಿದೆ. ದೇಹ, ಇಂದ್ರಿಯ, ಮನಸ್ಸು – ಇವು ಅನಾತ್ಮ, ಆತ್ಮನಿಗಿಂತ ಬೇರೆಯಾಗಿ ಅವು ನಿಜವಾಗಿಯೂ ಇಲ್ಲವೇ ಇಲ್ಲ; ಆದರೂ ಅನಾತ್ಮವಾದ ದೇಹಾದಿಗಳನ್ನು ಸತ್ಯವೆಂದೂ ಅನೇಕವೆಂದೂ ಭಾವಿಸಿಕೊಂಡು ಇದಕ್ಕಿಂತ ಬೇರೆಯಾಗಿ ಆತ್ಮನು ಇಲ್ಲವೆಂದೂ ನಾನು ಅನಾತ್ಮದಂತೆ ಪರಿಚ್ಛಿನ್ನನಾಗಿ ಅನಿತ್ಯವಾಗಿ ಇರುತ್ತೇನೆಂದೂ ಭಾವಿಸಿಕೊಳ್ಳುವದಲ್ಲದೆ, ದೇಹಾದಿಗಳೂ ಪ್ರಪಂಚವೂ ನಿತ್ಯವಾಗಿರುವವೆಂದು ನಂಬುವದೂ ಜನರಿಗೆ ಸ್ವಭಾವವಾಗಿಬಿಟ್ಟಿದೆ. ಲೋಕದಲ್ಲಿ ಜನರು ನಾನು, ನನ್ನದು–ಎಂದು ವ್ಯವಹರಿಸುತ್ತಿರುವ ಪದಾರ್ಥವು ಈ ದಿಟಸಟೆಗಳ ಮಿಶ್ರಣವಾಗಿದೆ. ಇದನ್ನು ಶಾಸ್ತ್ರಜ್ಞರು ಮಾತ್ರವೇ ನಿಶ್ಚಯಿಸಿಕೊಂಡಿರುತ್ತಾರೆ.

**25. ತಮೇತಮ್ ಅವಿದ್ಯಾಖ್ಯಮ್ ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾಃ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ, ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ॥ ಅಧ್ಯಾಸಭಾಷ್ಯ.**

**ಭಾವಾರ್ಥ :–** ಹೀಗೆ ಆತ್ಮನನ್ನೂ ಅನಾತ್ಮವನ್ನೂ ಒಂದರಲ್ಲೊಂದನ್ನು ಅಧ್ಯಾರೋಪಿಸುವದೆಂಬ ಅವಿದ್ಯೆಯನ್ನು ಇಟ್ಟುಕೊಂಡೇ ಎಲ್ಲಾ ಲೌಕಿಕವೈದಿಕಪ್ರಮಾಣ ಪ್ರಮೇಯವ್ಯವಹಾರಗಳೂ ವಿಧಪ್ರತಿಷೇಧ, ಮೋಕ್ಷ – ಇವುಗಳನ್ನು ತಿಳಿಸುವ ಎಲ್ಲಾ ಶಾಸ್ತ್ರಗಳೂ ಹೊರಟಿರುತ್ತವೆ.

**ವಿವರಣೆ :–** ನಮ್ಮ ನಿಜವಾದ ಅದ್ವಿತೀಯಾತ್ಮನನ್ನೂ ಹುಸಿಯಾದ ದೇಹಾದ್ಯನಾತ್ಮವನ್ನೂ ಒಂದನ್ನೊಂದೆಂದು ತಿಳಿದುಕೊಂಡು ಕಲೆಬೆರಕೆಮಾಡಿ ಕೊಂಡಿರುವದೇ ಅವಿದ್ಯೆ. ಅವಿದ್ಯೆಯಿರುವಾಗಲೇ ಎಲ್ಲಾ ಪ್ರಮಾಣಾದಿ ವ್ಯವಹಾರಗಳೂ ನಡೆದಿರುತ್ತವೆ. 23ನೆಯ ಖಂಡದಲ್ಲಿ ಹೇಳಿರುವಂತೆ ಕನಸು ಇರುವವರೆಗೂ ಸ್ವಪ್ನವ್ಯವಹಾರವನ್ನು ಸತ್ಯವೆಂದೇ ಎಲ್ಲರೂ ಭಾವಿಸುವಂತೆಯೇ, ಈ ಅವಿದ್ಯೆ ಇರುವವರೆಗೂ ನಾವು ನಾನು, ನನ್ನದು ಎಂಬ ವ್ಯವಹಾರವನ್ನು ಸತ್ಯವೆಂದೇ ಇಟ್ಟುಕೊಂಡಿರುವೆವು. ಈ ದೃಷ್ಟಿಯಿಂದಲೇ ಕರ್ಮ, ಉಪಾಸನೆ, ಮೋಕ್ಷ – ಇವುಗಳನ್ನು ಶಾಸ್ತ್ರಗಳು ಹೇಳುತ್ತಿರುವವು. ಪ್ರತ್ಯಕ್ಷಾದಿಗಳು ಪ್ರಮಾಣ ವೆಂಬುದೂ ಕರ್ಮಾದಿಗಳನ್ನು ಹೇಳಿಕೊಡುವ ಶಾಸ್ತ್ರವೂ ಪ್ರಮಾಣವೆಂಬುದೂ ಪ್ರಮಾಣವ್ಯವಹಾರವೆಲ್ಲ ಸತ್ಯವೆಂಬುದೂ ಈ ಅವಿದ್ಯೆಯೆಂಬ ತಪ್ಪುತಿಳಿವಳಿಕೆಯು ಇರುವವರೆಗೇ ನಡೆದಿರುತ್ತದೆ. ಎಚ್ಚರವಾಗುತ್ತಲೂ ಕನಸೆಲ್ಲವೂ ಹುಸಿಯೆಂದು ನಿಶ್ಚಯವಾಗಿಬಿಡುವಂತೆ ಬ್ರಹ್ಮವೇ ನಾನೆಂಬ ಅರಿವಾಗುತ್ತಲೂ ಈ ಪ್ರಮಾಣಪ್ರಮೇಯಾದಿ ವ್ಯವಹಾರವೆಲ್ಲವೂ ಹುಸಿಯೆಂದು ನಿಶ್ಚಿತವಾಗಿಬಿಡುವದು.

**26. ಕಥಂ ಪುನಃ ಅವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚ ಇತಿ? ಉಚ್ಯತೇ – ದೇಹೇನ್ದ್ರಿಯಾದಿಷು ಅಹಂಮಮಾಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣ ಪ್ರವೃತ್ತ್ಯನುಪಪತ್ತೇಃ ॥ ಅಧ್ಯಾಸಭಾಷ್ಯ**

**ಭಾವಾರ್ಥ :–** (ಪ್ರಶ್ನೆ :) ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳೂ ಶಾಸ್ತ್ರಗಳೂ ಅವಿದ್ಯಾವಂತರ ವಿಷಯ ಎಂಬುದು ಹೇಗೆ? (ಉತ್ತರ :) ಹೇಳುತ್ತೇವೆ. ದೇಹ,

**ಇಂದ್ರಿಯಾದಿಗಳು – ಮುಂತಾದವುಗಳಲ್ಲಿ ನಾನು, ನನ್ನದು – ಎಂಬ ಅಭಿಮಾನವಿಲ್ಲದವನು ಪ್ರಮಾತೃವಾಗಿರುವದೆಂಬುದು ಹೊಂದುವದಿಲ್ಲವೆಂದಾಗುವದರಿಂದ ಪ್ರಮಾಣಗಳು ತಮ್ಮ ವ್ಯಾಪಾರವನ್ನು ಮಾಡಲಾರವು.**

**ವಿವರಣೆ** :– ಪ್ರಮಾಣವೆಂದರೆ ಸರಿಯಾದ ತಿಳಿವಳಿಕೆಗೆ ಸಾಧನ. ಹೀಗಿರುವಲ್ಲಿ ಪ್ರಮಾಣವೆನಿಸಿರುವ ಪ್ರತ್ಯಕ್ಷಾದಿಗಳೂ ಶಾಸ್ತ್ರಗಳೂ ಅವಿದ್ಯೆಯನ್ನು ಮುಂದುಮಾಡಿಕೊಂಡೇ ಹೊರಟಿವೆ ಎನ್ನಬಹುದೆ? 'ಪ್ರಮಾತೃ' ಎಂದರೆ ಸರಿಯಾಗಿ ತಿಳಿದುಕೊಳ್ಳುವವನು; ಅವನು ಅವಿದ್ಯಾವಂತನೆನ್ನಬಹುದೆ? – ಎಂದು ಹಿಂದಿನ (25ನೆಯ) ಖಂಡದಮೇಲೆ ಇಲ್ಲಿ ಆಕ್ಷೇಪವನ್ನು ಎತ್ತಿ ಪರಿಹಾರವನ್ನು ಹೇಳಿದೆ.

'ಅವಿದ್ಯೆ' ಎಂದರೆ ತಪ್ಪು ತಿಳಿವಳಿಕೆ. ತಿಳಿವಳಿಕೆಯು ತಪ್ಪೆ, ಸರಿಯೇ? – ಎಂಬುದನ್ನು ಲೋಕದಲ್ಲಿ ಪ್ರಮಾಣಗಳಿಂದಲೇ ಗೊತ್ತುಮಾಡುತ್ತಿರುತ್ತಾರೆ. ಆದರೆ ಪ್ರಮಾಣವ್ಯವಹಾರವು ಸರಿಯಾದ ತಿಳಿವಳಿಕೆಯೆ? ಎಂಬುದನ್ನು ಪರೀಕ್ಷಿಸುವದಕ್ಕೆ ಹೊರಟಾಗ ಆ ಪರೀಕ್ಷೆಗೆ ಅನುಭವವೊಂದೇ ಆಧಾರವಾಗಬೇಕಾಗುತ್ತದೆ. ದೇಹವನ್ನು ನಾನೆಂತಲೂ ಇಂದ್ರಿಯಗಳನ್ನೂ ಮನಸ್ಸನ್ನೂ ನನ್ನವೆಂತಲೂ ಇಟ್ಟುಕೊಂಡೇ ಲೋಕದ ವ್ಯವಹಾರವು ನಡೆದಿರುತ್ತದೆ. ಆದ್ದರಿಂದ ವ್ಯವಹಾರದೃಷ್ಟಿಗೆ ಪ್ರಮಾಣಗಳು ಸಾಕು. ಆದರೆ ದೇಹವು ನನ್ನದೆಂಬುದು ನಿಜವೇ? ಇಂದ್ರಿಯಗಳೂ ಮನಸ್ಸೂ ನನ್ನವು ಎಂಬುದು ಸರಿಯೆ? – ಎಂದು ವಿಚಾರಿಸಿದರೆ ದೇಹಾದಿಗಳು ಯಾವಾಗಲೂ ನಮ್ಮ ಸ್ವರೂಪಕ್ಕೆ ಸೇರಿರುವದಿಲ್ಲ. ಕನಸಿನಲ್ಲಿ ನಮಗೆ ಎಚ್ಚರದ ಯಾವ ದೇಹಾದಿಗಳೂ ಇರುವದಿಲ್ಲ. ಆದರೂ ನಾವು ಅಲ್ಲಿ ಇರುತ್ತೇವೆ. ಆದ್ದರಿಂದ ದೇಹಾದಿಗಳನ್ನು 'ನಾನು, ನನ್ನದು' ಎಂದು ವ್ಯವಹರಿಸುವದು ತಪ್ಪುತಿಳಿವಳಿಕೆ ಎಂದಾಯಿತು. ಇದನ್ನು ಹಿಂದೆ (24ನೆಯ ಖಂಡದಲ್ಲಿ) ತಿಳಿಸಿದೇವೆ. ಆದ್ದರಿಂದ 'ನಾನು ಪ್ರಮಾತೃ, ಇವು ನನಗೆ ಸೇರಿದ ಪ್ರಮಾಣಗಳು' ಎಂದು ವ್ಯವಹರಿಸುವದು ಈ ಪರಮಾರ್ಥದೃಷ್ಟಿಯಿಂದ ತಪ್ಪು ತಿಳಿವಳಿಕೆಯ ಫಲವೇ, ಅವಿದ್ಯಾಪೂರ್ವಕವೇ – ಎಂದದ್ದು ಸರಿ.

**27. ಮನ ಇತಿ ಪ್ರತ್ಯಯಃ, ವಿಜ್ಞಾನಮ್ । ತಚ್ಚ ಯತ್ರ ಅಭಿಧಾನಂ ಪ್ರವೃತ್ತಮ್ ಅತೀನ್ದ್ರಿಯೇಽಪಿ ಅರ್ಥೇ ತದರ್ಥೇ ಚ ಪ್ರವರ್ತತೇ ಪ್ರಕಾಶನಾಯ। ಯತ್ರ ಚ ವಿಜ್ಞಾನಂ ತತ್ರ ವಾಚಃ ಪ್ರವೃತ್ತಿಃ । ತಸ್ಮಾತ್ ಸಹೈವ ವಾಙ್ಮನಸಯೋಃ,**

**ಅಭಿಧಾನಪ್ರತ್ಯಯಯೋಃ ಪ್ರವೃತ್ತಿಃ ಸರ್ವತ್ರ । ತಸ್ಮಾತ್ ಬ್ರಹ್ಮಪ್ರಕಾಶನಾಯ ಸರ್ವಥಾ ಪ್ರಯೋಕ್ತೃಭಿಃ ಪ್ರಯುಜ್ಯಮಾನಾ ಅಪಿ ವಾಚಃ, ಯಸ್ಮಾತ್ ಅಪ್ರತ್ಯಯವಿಷಯಾತ್, ಅನಭಿಧೇಯಾತ್, ಅದೃಶ್ಯಾದಿವಿಶೇಷಣಾತ್ ಸಹೈವ ಮನಸಾ ವಿಜ್ಞಾನೇನ ಸರ್ವಪ್ರಕಾಶನಸಮರ್ಥೇನ ನಿವರ್ತನ್ತೇ ....॥**

**ತೈ.ಭಾ. 2–9**

ಭಾವಾರ್ಥ :– ಮನಸ್ಸು ಎಂದರೆ ಪ್ರತ್ಯಯವು, ವಿಜ್ಞಾನವು (**concept**); ಆ (ಪ್ರತ್ಯಯವು) ಎಲ್ಲಿ ಅಭಿಧಾನವು (ಹೆಸರು) ತೊಡಗುವದೋ ಅಂಥ ವಸ್ತುವು ಅತೀಂದ್ರಿಯವಾಗಿದ್ದರೂ ಅದನ್ನು ತಿಳಿಸುವದಕ್ಕೆ ತೊಡಗುತ್ತದೆ. ಮತ್ತು ಎಲ್ಲಿ ವಿಜ್ಞಾನವು ತೊಡಗುವದೋ ಅಲ್ಲಿಯೇ ವಾಕ್ಕಿನ ಪ್ರವೃತ್ತಿ. ಆದ್ದರಿಂದ ವಾಕ್ಕು, ಮನಸ್ಸು – ಇವೆರಡೂ ಎಲ್ಲೆಲ್ಲಿಯೂ ಜೊತೆಜೊತೆಯಾಗಿಯೇ ತೊಡಗುತ್ತವೆ. ಆದಕಾರಣ ಬ್ರಹ್ಮವನ್ನು ತಿಳಿಸಿಕೊಡುವದಕ್ಕೆಂದು ಶಬ್ದವನ್ನು ಬಳಸುವವರು ಮಾತುಗಳನ್ನು ಪ್ರಯೋಗಿಸಿದರೂ ಅವು – ಪ್ರತ್ಯಯಕ್ಕೆ ವಿಷಯವಲ್ಲವಾಗಿರುವದರಿಂದ ಅಭಿಧೇಯವಲ್ಲದ, ಅದೃಶ್ಯತ್ವವೇ ಮುಂತಾದ ವಿಶೇಷಣಗಳುಳ್ಳ, ಬ್ರಹ್ಮವನ್ನು ತಿಳಿಸಲಾರದೆ – ಎಲ್ಲವನ್ನೂ ಬೆಳಗಿ ತಿಳಿಸಬಲ್ಲ ವಿಜ್ಞಾನದೊಡನೆಯೇ ಹಿಂತಿರುಗುವವು.

**ವಿವರಣೆ** :– ವ್ಯವಹಾರದಲ್ಲಿ ವಿಷಯಗಳನ್ನು ತಿಳಿಸಿಕೊಡುವದಕ್ಕೆ ವಿಜ್ಞಾನಗಳು ಅಥವಾ ಪ್ರತ್ಯಯಗಳು, ಮತ್ತು ಶಬ್ದಗಳು – ಎಂಬ ಎರಡು ಸಾಧನಗಳು ನಮಗೆ ಇರುತ್ತವೆ. ಈ ಲೋಕದಲ್ಲಿ ಈಗ ಇಂದ್ರಿಯಕ್ಕೆ ಗೋಚರವಾಗದೆ ಇರುವ ಜನ್ಮಾಂತರದ ಮತ್ತು ಲೋಕಾಂತರದಲ್ಲಿರುವ ಅತೀಂದ್ರಿಯವಾದ ಸ್ವರ್ಗಾದಿಗಳನ್ನು ತಿಳಿಸುವದಕ್ಕೂ ಈ ಶಬ್ದಪ್ರತ್ಯಯಗಳು ಸಾಕಾಗಿರುತ್ತವೆ. ಆದರೆ ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದ ಅದು ಏತಕ್ಕೂ ವಿಷಯವಲ್ಲ, ವಿಷಯಿ, ಎಲ್ಲವನ್ನೂ ತಾನು ಅರಿಯಬಲ್ಲದ್ದು, ತಾನು ಏತರಿಂದಲೂ ಅರಿಯಲ್ಪಡತಕ್ಕದ್ದಲ್ಲ. ಇದಕ್ಕೆ ಶಬ್ದ, ಸ್ಪರ್ಶ, ರೂಪ – ಮುಂತಾದ ಯಾವ ಗುಣವೂ ಇಲ್ಲದ್ದರಿಂದ ಇದನ್ನು ಪ್ರತ್ಯಕ್ಷದಿಂದ ತಿಳಿಯುವದಕ್ಕೆ ಆಗುವದಿಲ್ಲ, ಯಾವ ಗುರುತು ಮುಂತಾದದ್ದೂ ಇಲ್ಲದ್ದರಿಂದ ಅನುಮಾನಾದಿಪ್ರಮಾಣಗಳಿಂದಲೂ ತಿಳಿಯಬರುವಂತಿಲ್ಲ ಎಂದು ಹಿಂದೆ (8ನೆಯ ಖಂಡ)ದಲ್ಲಿ ತಿಳಿಸಲಾಗಿರುತ್ತದೆ. ಆದ್ದರಿಂದ ಬ್ರಹ್ಮವು ಪ್ರತ್ಯಯಕ್ಕೆ ವಿಷಯವಲ್ಲ; ಆದ್ದರಿಂದ ಅದು ಮಾತಿಗೂ ವಿಷಯವಲ್ಲವೆಂದೇ ಆಯಿತು. ಅದನ್ನು ಅನುಭವದಿಂದಲೇ ತಿಳಿದುಕೊಳ್ಳಬೇಕೇ ಹೊರತು ಯಾವದೊಂದು ಪ್ರಮಾಣದಿಂದಲೂ ತಿಳಿಯುವದಾಗಲಾರದು.

**28. ಅವಿಷಯತ್ವೇ ಬ್ರಹ್ಮಣಃ ಶಾಸ್ತ್ರಯೋನಿತ್ವಾನುಪಪತ್ತಿಃ, ಇತಿ ಚೇತ್। ನ। ಅವಿದ್ಯಾಕಲ್ಪಿತಭೇದನಿವೃತ್ತಿಪರತ್ವಾತ್ ಶಾಸ್ತ್ರಸ್ಯ। ನ ಹಿ ಶಾಸ್ತ್ರಮ್ ಇದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ; ಕಿಂ ತರ್ಹಿ, ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯ ವೇದಿತೃವೇದನಾದಿಭೇದಮ್ ಅಪನಯತಿ ॥ ಸೂ.ಭಾ. 1–1–4**

ಭಾವಾರ್ಥ :– 'ಬ್ರಹ್ಮವು ಏತಕ್ಕೂ ವಿಷಯವಲ್ಲವಾದರೆ, ಅದಕ್ಕೆ ಶಾಸ್ತ್ರವು ಪ್ರಮಾಣವೆನ್ನುವದು ಹೊಂದುವದಿಲ್ಲವಷ್ಟೆ !' ಎಂದರೆ ಹಾಗಲ್ಲ. ಏಕೆಂದರೆ ಅವಿದ್ಯೆಯಿಂದ ಕಲ್ಪಿತವಾಗಿರುವ ಭೇದವನ್ನು ತೊಲಗಿಸುವದರಲ್ಲಿಯೇ ಶಾಸ್ತ್ರಕ್ಕೆ ತಾತ್ಪರ್ಯವಿದೆ. ಶಾಸ್ತ್ರವು 'ಇದು' ಎಂದು ವಿಷಯವಾಗಿರುವ ಬ್ರಹ್ಮವನ್ನು ತಿಳಿಸುವದಕ್ಕೆ ಹೊರಟಿಲ್ಲ; ಮತ್ತೇನೆಂದರೆ, ಅದು ಪ್ರತ್ಯಗಾತ್ಮನಾಗಿರುವದರಿಂದ ವಿಷಯವಲ್ಲ ಎಂದು ತಿಳಿಸಿಕೊಟ್ಟು ಅವಿದ್ಯೆಯಿಂದ ಕಲ್ಪಿತವಾಗಿರುವ ಜ್ಞೇಯ, ಜ್ಞಾತೃ, ಜ್ಞಾನ – ಮುಂತಾದ ಭೇದವನ್ನು ಕಳೆಯುತ್ತದೆ.

**ವಿವರಣೆ** :– ಶಾಸ್ತ್ರವು ಅವಿದ್ಯಾಕಲ್ಪಿತವಾದದ್ದೂ ಆಗಿದೆ, ಬ್ರಹ್ಮವು ಅವಿಷಯವೂ ಆಗಿದೆ; ಆದರೂ ಅದಕ್ಕೆ ಶಾಸ್ತ್ರವು ಪ್ರಮಾಣವೂ ಆಗಿದೆ – ಎಂಬುದು ತನಗೆತಾನೇ ವಿರುದ್ಧವಾದ ಮಾತಲ್ಲವೆ? – ಎಂಬುದು ಆಕ್ಷೇಪದ ಸಾರ. ಶಾಸ್ತ್ರವು ಪ್ರಮಾಣವೆಂದಾಗಿರುವದು ಬ್ರಹ್ಮವನ್ನು ವಿಷಯವಾಗಿಸಿಕೊಂಡು ತಿಳಿಸುವದರಿಂದಲ್ಲ. ಮತ್ತೇನೆಂದರೆ ಪ್ರಮಾಣಪ್ರಮೇಯಪ್ರಮಾತೃಗಳೆಂಬ ಕಲ್ಪಿತವಾದ ಭೇದವನ್ನು ಕಳೆಯುವದರಿಂದ – ಎಂಬುದು ಸಮಾಧಾನ.

(ಇಲ್ಲಿ ಬ್ರಹ್ಮವು ಪ್ರಮೇಯವೂ ಆಗಿದೆ, ವಿಷಯವೂ ಅಲ್ಲ – ಎಂಬುದು ತನಗೆತಾನೇ ವಿರುದ್ಧವೆಂಬದು ಸ್ಪಷ್ಟ. ವಿಷಯವಾಗಿಲ್ಲದೆ ಪ್ರಮೇಯವಾದದ್ದು ಹೇಗೆ? ವಿಷಯವನ್ನಾಗಿಸದೆ, ವಸ್ತುವನ್ನು ತಿಳಿಸಿಕೊಡುವದು ಹೇಗೆ? – ಎಂಬ ಶಂಕೆಗೆ ಇನ್ನು ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ).

**29. ನನು ವಿರುದ್ಧಮಿದಮುಚ್ಯತೇ ಅಪ್ರಮೇಯಂ ಜ್ಞಾಯತೇ ಇತಿ ಚ। ಜ್ಞಾಯತ ಇತಿ ಪ್ರಮಾಣೈರ್ಮೀಯತೇ ಇತ್ಯರ್ಥಃ, ಅಪ್ರಮೇಯಮ್ ಇತಿ ಚ ತತ್ಪ್ರತಿಷೇಧಃ । ನೈಷ ದೋಷಃ । ಅನ್ಯವಸ್ತುವತ್ ಅನಾಗಮ ಪ್ರಮಾಣಪ್ರಮೇಯತ್ವಪ್ರತಿಷೇಧಾರ್ಥತ್ವಾತ್ । ಯಥಾ ಅನ್ಯಾನಿ ವಸ್ತೂನಿ**

**ಆಗಮನಿರಪೇಕ್ಷೈಃ ಪ್ರಮಾಣೈರ್ವಿಷಯೀಕ್ರಿಯನ್ತೇ ನ ತಥಾ ಏತದಾತ್ಮತತ್ತ್ವಂ ಪ್ರಮಾಣಾನ್ತರೇಣ ವಿಷಯೀಕರ್ತುಂ ಶಕ್ಯತೇ ॥ ಬೃ.ಭಾ. 4–4–20**

ಭಾವಾರ್ಥ :– (ಶಂಕೆ :) ಅಪ್ರಮೆಯವೂ ಆಗಿದೆ, ಅರಿಯಲ್ಪಡುತ್ತಲೂ ಇದೆ – ಎಂಬಿದು ವಿರುದ್ಧವಾದ ಮಾತನ್ನಾಡಿದಂತಾಗಲಿಲ್ಲವೆ? ಅರಿಯಲ್ಪಡುವದೆಂದರೆ ಪ್ರಮಾಣಕ್ಕೆ ಗೊತ್ತುಮಾಡುವದಕ್ಕೆ ಆಗುವದೆಂದರ್ಥ; ಅಪ್ರಮೇಯವೆಂದರೆ ಅದನ್ನು ಅಲ್ಲಗಳೆಯುವದು. (ಇದು ಹೇಗಾದೀತು)? (ಪರಿಹಾರ :) ಇದೇನೂ ತಪ್ಪಲ್ಲ. ಆಗಮವಿಲ್ಲದ ಪ್ರಮಾಣಗಳಿಗೆ ಇದು ಪ್ರಮೇಯವಲ್ಲವೆಂಬುದೇ ಅಪ್ರಮೇಯವೆಂಬುದರ ಅರ್ಥ. ಆಗಮವನ್ನು ಬಯಸದ ಪ್ರಮಾಣಗಳಿಂದ ಮಿಕ್ಕ ವಸ್ತುಗಳನ್ನು ಹೇಗೆ ವಿಷಯೀಕರಿಸ ಬಹುದೋ ಹಾಗೆ ಈ ಆತ್ಮತತ್ತ್ವವನ್ನು ಪ್ರಮಾಣಗಳಿಂದ ವಿಷಯೀಕರಿಸುವದಾಗುವದಿಲ್ಲ, ಅಷ್ಟೆ.

**ವಿವರಣೆ** :– ಇಲ್ಲಿ ಆಗಮದಿಂದ ಆತ್ಮನನ್ನು ವಿಷಯೀಕರಿಸಬಹುದು – ಎಂಬ ತಪ್ಪು ಅಭಿಪ್ರಾಯವಾಗುವ ಸಂಭವವಿದೆ. ಇದನ್ನು ಮುಂದಿನ ವಾಕ್ಯದಲ್ಲಿ ಪರಿಹರಿಸಿದೆ.

**30. ನನು ಆಗಮೇನ ಆತ್ಮಾ ಪರಿಚ್ಛಿದ್ಯತೇ ಪ್ರತ್ಯಕ್ಷಾದಿನಾ ಚ ಪೂರ್ವಮ್ । ನ । ಆತ್ಮನಃ ಸ್ವತಃಸಿದ್ಧತ್ವಾತ್ ।.... ನ ಹಿ ಆತ್ಮಾ ನಾಮ ಕಸ್ಯಚಿತ್ ಅಪ್ರಸಿದ್ಧೋ ಭವತಿ । ಶಾಸ್ತ್ರಂ ತು ಅನ್ತ್ಯಂ ಪ್ರಮಾಣಮ್ ಅತದ್ಧರ್ಮಾಧ್ಯಾರೋಪಣಮಾತ್ರನಿವರ್ತಕತ್ವೇನ ಪ್ರಾಮಾಣ್ಯಮ್ ಆತ್ಮನಃ ಪ್ರತಿಪದ್ಯತೇ ನ ತು ಅಜ್ಞಾತಾರ್ಥಜ್ಞಾಪಕತ್ವೇನ ॥ ಗೀ.ಭಾ. 2–18**

ಭಾವಾರ್ಥ :– (ಶಂಕೆ :) ಆಗಮದಿಂದ ಆತ್ಮನನ್ನು ಗೊತ್ತುಪಡಿಸಬಹುದಲ್ಲವೆ? ಅದಕ್ಕಿಂತ ಮೊದಲು ಪ್ರತ್ಯಕ್ಷಾದಿಗಳಿಂದಲೂ ಗೊತ್ತುಪಡಿಸಬಹುದಲ್ಲವೆ? (ಪರಿಹಾರ :) ಹಾಗಲ್ಲ. ಏಕೆಂದರೆ ಆತ್ಮನು ಸ್ವತಃಸಿದ್ಧನಾಗಿರುತ್ತಾನೆ. ಆತ್ಮನೆಂದರೆ ಯಾರಿಗೂ ಅಪ್ರಸಿದ್ಧನಾಗಿರು ವದಿಲ್ಲವಷ್ಟೆ? ಶಾಸ್ತ್ರವಾದರೋ ಅಂತ್ಯಪ್ರಮಾಣವು; ಅವನದಲ್ಲದ ಧರ್ಮವನ್ನು ಅಧ್ಯಾರೋಪಮಾಡಿಕೊಂಡಿರುವದನ್ನು ತೆಗೆದುಹಾಕುವದರಿಂದಲೇ ಪ್ರಮಾಣವೆನಸಿ ಕೊಳ್ಳುತ್ತದೆಯೇ ಹೊರತು ಮೊದಲು ಅರಿಯದೆ ಇದ್ದ ವಸ್ತುವನ್ನು ತಿಳಿಸು ವದರಿಂದಲ್ಲ.

**ವಿವರಣೆ** :– ಬ್ರಹ್ಮವು ಎಲ್ಲರಿಗೂ ಆತ್ಮನಾಗಿರುವದೆಂದೂ ಆತ್ಮನು ಸ್ವತಃ ಸಿದ್ಧನೆಂದೂ ಹಿಂದೆ (ವಾಕ್ಯ 3–4ರಲ್ಲಿ) ಹೇಳಿಯೇ ಇರುತ್ತದೆ. ಆದರೂ

ಇಲ್ಲಿ ಸಾಮಾನ್ಯಜನರ ತಿಳಿವಳಿಕೆಯನ್ನನುಸರಿಸಿ ಶಂಕಿಸಿರುತ್ತದೆ. ಆತ್ಮನನ್ನು ತಿಳಿಸುವದಕ್ಕೆಂದೇ ಶಾಸ್ತ್ರವು ಬಂದಿರುತ್ತದೆಯಾದ್ದರಿಂದ ಆತ್ಮನು ಶಾಸ್ತ್ರಕ್ಕೆ ಪ್ರಮೇಯನೆಂದಾಯಿತು. 'ನಾನು' ಎಂಬ ಅರಿವಿಗೆ ಪ್ರತ್ಯಕ್ಷವಾಗಿ ವಿಷಯ ನಾಗಿರುವದರಿಂದಲೂ 'ಯಾವನು ನೋಡುತ್ತಾನೋ ಕೇಳುತ್ತಾನೋ ಮೂಸುತ್ತಾನೋ ಮುಟ್ಟುತ್ತಾನೋ ಅವನೇ ಆತ್ಮನು' ಎಂದು ಅನುಮಾನದಿಂದ ಕಲ್ಪಿಸಿಕೊಳ್ಳಬಹುದಾದ್ದರಿಂದಲೂ ಆತ್ಮನು ಪ್ರಮಾಣವಿಷಯನೇ ಆಗಿರುತ್ತಾನಲ್ಲವೆ? – ಎಂಬುದು ಇಲ್ಲಿ ಶಂಕೆಯ ಅಭಿಪ್ರಾಯ. ಪ್ರತ್ಯಕ್ಷದಿಂದ ಅರಿಯುವದಕ್ಕಾಗಲಿ ಅನುಮಾನಾದಿಗಳಿಂದ ಊಹಿಸಿಕೊಳ್ಳುವದಕ್ಕಾಗಲಿ ಮುಂಚೆಯೇ ಪ್ರಮಾತೃವಾದ ಆತ್ಮನು ಇರಬೇಕಾಗಿರುವದರಿಂದ ಅವನು ಪ್ರಮಾಣವೇದ್ಯವೆಂಬುದು ಸರಿಯಲ್ಲ – ಎಂಬುದು ಪರಿಹಾರ.

ಹಾಗಾದರೆ ಶಾಸ್ತ್ರವಾದರೂ ಪ್ರಮಾಣವೆಂಬುದು ಹೇಗೆ? ಎಂದು ಕೇಳಬಹುದು. ಇದಕ್ಕೆ ಉತ್ತರವೇನೆಂದರೆ ಆತ್ಮನಲ್ಲಿ ತಪ್ಪುತಿಳಿವಳಿಕೆಯಿಂದ ಅವನದಲ್ಲದ ಸ್ವರೂಪವನ್ನು ಜನರು ಕಲ್ಪಿಸಿಕೊಂಡಿರುತ್ತಾರೆ; ಈ ತಪ್ಪುತಿಳಿವಳಿಕೆ ಯನ್ನು ಕಳೆಯುವದರಿಂದಲೇ ಶಾಸ್ತ್ರವು ಪ್ರಮಾಣವೆನಿಸುವದು! ಪ್ರಮೇಯವನ್ನು ವಿಷಯೀಕರಿಸಿದರೇ ಪ್ರಮಾಣವೆನ್ನಬೇಕಾದದ್ದೇನೂ ಇಲ್ಲ ಎಂಬುದು ಉತ್ತರದ ಸಾರ. ಅದು 'ಅಂತ್ಯಪ್ರಮಾಣ'ವೆಂದರೇನೆಂಬುದನ್ನು ಇಷ್ಟರಲ್ಲಿಯೇ ವಿಶದಗೊಳಿಸಲಾಗುವದು.

**31. ಪ್ರಮಾತೃಪ್ರಮಾಣಾದಿವ್ಯಾಪಾರಪ್ರತಿಷೇಧೇನೈವ ಆಗಮೋಽಪಿ ವಿಜ್ಞಾಪಯತಿ ನ ತು ಅಭಿಧಾನಾಭಿಧೇಯಲಕ್ಷಣವಾಕ್ಯಧರ್ಮಾಙ್ಗೀಕರಣೇನ। ತಸ್ಮಾನ್ನ ಆಗಮೇನಾಪಿ ಸ್ವರ್ಗಮೇರ್ವಾದಿವತ್ ತತ್ ಪ್ರತಿಪಾದ್ಯತೇ । ಪ್ರತಿಪಾದಯಿತ್ರಾತ್ಮಭೂತಂ ಹಿ ತತ್ । ಪ್ರತಿಪಾದಯಿತುಃ ಪ್ರತಿಪಾದನಸ್ಯ ಪ್ರತಿಪಾದ್ಯವಿಷಯತ್ವಾತ್। ಭೇದೇ ಹಿ ಸತಿ ತತ್ ಭವತಿ॥ ಬೃಭಾ. 4–4–20**

ಭಾವಾರ್ಥ :– ಪ್ರಮಾತೃ, ಪ್ರಮಾಣ – ಮುಂತಾದವುಗಳ ವ್ಯಾಪಾರವನ್ನು ಅಲ್ಲಗಳೆಯುವದರಿಂದಲೇ ಆಗಮವೂ ತಿಳಿಸಿಕೊಡುತ್ತದೆಯೇ ಹೊರತು ಅಭಿಧಾನ ಅಭಿಧೇಯ – ಎಂಬ ರೂಪದ ವಾಕ್ಯಧರ್ಮವನ್ನು ಅಂಗೀಕರಿಸಿ ಅಲ್ಲ. ಆದ್ದರಿಂದ ಸ್ವರ್ಗ, ಮೇರು – ಮುಂತಾದವುಗಳಂತೆ ಆಗಮದಿಂದಲೂ ಅದು ಪ್ರತಿಪಾದಿಸಲ್ಪಡುವದಿಲ್ಲ.

**ಪ್ರತಿಪಾದಿಸುವ (ಆಗಮದ) ಆತ್ಮನೇ ಅಲ್ಲವೆ, ಅದು? ಏಕೆಂದರೆ ಪ್ರತಿಪಾದಿಸುವವನು ತಿಳಿಸಿಕೊಡುವದು, ತಿಳಿಸಿಕೊಡಬೇಕಾದ ವಸ್ತುವನ್ನು ಕುರಿತದ್ದು, ತಿಳಿಸುವಾತನಿಗೂ ತಿಳಿಸಿಕೊಡಬೇಕಾದ ವಿಷಯಕ್ಕೂ ಭೇದವಿದ್ದರಲ್ಲವೆ, ಅದು ಸಾಧ್ಯ?**

**ವಿವರಣೆ :–** ಆತ್ಮನು ಅಖಂಡವಾಗಿರುವ ಅದ್ವೈತತತ್ತ್ವವು ; ಅವನಲ್ಲಿ ಪ್ರಮಾತೃ, ಪ್ರಮಾಣ, ಪ್ರಮೇಯ – ಎಂಬ ಭೇದವು ಅವಿದ್ಯೆಯಿಂದ ಕಲ್ಪಿತವಾಗಿರುವದು – ಎಂದು ಹಿಂದೆ ತಿಳಿಸಿಕೊಡಲಾಗಿದೆ. ಆದ್ದರಿಂದ ಆತ್ಮನಲ್ಲಿ ಹುಟ್ಟುಗಟ್ಟಲಾಗಿರುವ ಪ್ರಮಾತ್ರಾದಿಗಳನ್ನು ಇಲ್ಲವೆಂದು ತಿಳಿಸಿಕೊಡುವದರಿಂದಲೇ ಶಾಸ್ತ್ರವು ಪ್ರಮಾಣವೆನಿಸುವದು – ಎಂದು ಅಭಿಪ್ರಾಯ.

**32. ನ ಹಿ ಆತ್ಮಸ್ವರೂಪಾಧಿಗಮೇ ಸತಿ ಪುನಃ ಪ್ರಮಾಣ ಪ್ರಮೇಯವ್ಯವಹಾರಃ ಸಂಭವತಿ । ಪ್ರಮಾತೃತ್ವಂ ಹಿ ಆತ್ಮನೋ ನಿವರ್ತಯತಿ ಅನ್ತ್ಯಂ ಪ್ರಮಾಣಮ್ । ನಿವರ್ತಯದೇವ ಚ ಅಪ್ರಮಾಣೀಭವತಿ ಸ್ವಪ್ನಕಾಲಪ್ರಮಾಣಮಿವ ಪ್ರಬೋಧೇ ॥ ಗೀ.ಭಾ. 2–19**

ಭಾವಾರ್ಥ :– **ಆತ್ಮಸ್ವರೂಪವನ್ನು ಅರಿತುಕೊಂಡಮೇಲೆ ಮತ್ತೆ ಪ್ರಮಾಣ ಪ್ರಮೇಯವ್ಯವಹಾರವೇ ಇರುವಹಾಗಿಲ್ಲ. ಏಕೆಂದರೆ ಅಂತ್ಯಪ್ರಮಾಣವಾದ ಶಾಸ್ತ್ರವು ಆತ್ಮನಲ್ಲಿ ಪ್ರಮಾತೃತ್ವವನ್ನೇ ತೊಲಗಿಸುತ್ತದೆ; ತೊಲಗಿಸುವದರಿಂದಲೇ, ಕನಸಿನ ಕಾಲದ ಪ್ರಮಾಣವು ಎಚ್ಚರದಲ್ಲಿ ಬಾಧಿತವಾಗುವಂತೆ, ಅಪ್ರಮಾಣವಾಗಿ ಬಿಡುತ್ತದೆ.**

**ವಿವರಣೆ :–** ಪ್ರಮಾತೃವಿದ್ದರೇ ಪ್ರಮಾಣಪ್ರಮೇಯವ್ಯವಹಾರವು ಇರುತ್ತದೆ. ಆದರೆ ಆತ್ಮನಲ್ಲಿ ಪ್ರಮಾತೃತ್ವವೇ ಇಲ್ಲವೆಂಬುದನ್ನು ತಿಳಿಸಿಕೊಡುವದೇ ಶಾಸ್ತ್ರದ ಕೆಲಸ. ಆದ್ದರಿಂದ ಆತ್ಮಸ್ವರೂಪದ ಯಥಾರ್ಥಜ್ಞಾನವಾದ ಬಳಿಕ ಮತ್ತೆ ಪ್ರಮಾಣವ್ಯವಹಾರವು ಉಳಿದಿರುವದಿಲ್ಲ. ಪ್ರಮಾಣಗಳೆಲ್ಲವೂ ಅವಿದ್ಯಾಕೃತ ವೆಂಬುದನ್ನು ತಿಳಿಸುವದರಿಂದ ಶಾಸ್ತ್ರವೂ ಆಗ ಅಪ್ರಮಾಣವೇ ಆಗಿಬಿಡುತ್ತದೆ. ಹೀಗೆ ಪ್ರಮಾತೃ, ಪ್ರಮಾಣ, ಪ್ರಮೇಯ – ಎಂಬ ವ್ಯವಹಾರವನ್ನೇ ಕಳೆದುಹಾಕಿ ಬಿಡುವದರಿಂದ ಶಾಸ್ತ್ರವು ಅಂತ್ಯಪ್ರಮಾಣವು.

ಹಾಗಾದರೆ ಶಾಸ್ತ್ರದಿಂದ ಆತ್ಮಜ್ಞಾನವಾಗುವದೆಂಬ ಮಾತಿಗೆ ಏನರ್ಥ? ಆತ್ಮಜ್ಞಾನವಾದ ಬಳಿಕ ಜ್ಞಾನಿಗೆ ಪ್ರಮಾಣಾದಿವ್ಯವಹಾರವೇ ಇರುವದಿಲ್ಲವೆ? ಇದನ್ನು ಇನ್ನು ವಿಚಾರಿಸಬೇಕಾಗಿದೆ.

## 4. ಶಾಸ್ತ್ರಜನ್ಯಜ್ಞಾನವೂ ಅದರ ಫಲವೂ

**33. ಅವಿಷಯತ್ವೇ ಬ್ರಹ್ಮಣಃ ಶಾಸ್ತ್ರಯೋನಿತ್ವಾನುಪಪತ್ತಿಃ – ಇತಿ ಚೇತ್, ನ । ಅವಿದ್ಯಾಕಲ್ಪಿತಭೇದನಿವೃತ್ತಿಪರತ್ವಾತ್ ಶಾಸ್ತ್ರಸ್ಯ । ನ ಹಿ ಶಾಸ್ತ್ರಮ್ ಇದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ, ಕಿಂ ತರ್ಹಿ, ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿಭೇದಮ್ ಅಪನಯತಿ ॥ ಸೂ.ಭಾ. 1–1–4**

ಭಾವಾರ್ಥ :– (ಶಂಕೆ) ಬ್ರಹ್ಮವು ಏತಕ್ಕೂ ವಿಷಯವಲ್ಲದಿದ್ದರೆ ಅದಕ್ಕೆ ಶಾಸ್ತ್ರವು ಪ್ರಮಾಣವೆಂಬುದು ಹೊಂದುವದಿಲ್ಲವಲ್ಲ! (ಪರಿಹಾರ) ಹಾಗಲ್ಲ. ಏಕೆಂದರೆ ಶಾಸ್ತ್ರಕ್ಕೆ ಅವಿದ್ಯಾಕಲ್ಪಿತವಾದ ಭೇದವನ್ನು ಕಳೆಯುವದರಲ್ಲಿಯೇ ತಾತ್ಪರ್ಯವಿದೆ. (ಇದರ ವಿವರ:) ಶಾಸ್ತ್ರವು 'ಇದು' ಎಂದು ಬ್ರಹ್ಮವನ್ನು ವಿಷಯವಾಗಿಸಿಕೊಂಡು ತಿಳಿಸುವದಕ್ಕೆ ಹೊರಟಿಲ್ಲ; ಮತ್ತೆ ಹೇಗೆಂದರೆ, ಅದು ವಿಷಯವಲ್ಲ – ಎಂದು ತಿಳಿಸಿಕೊಟ್ಟು ಅವಿದ್ಯಾಕಲ್ಪಿತವಾದ ವೇದ್ಯ (ತಿಳಿಯಲ್ಪಡತಕ್ಕದ್ದು), ವೇದಿತೃ (ತಿಳಿಯುವಾತನು), ವೇದನ (ತಿಳಿವು) – ಮುಂತಾದ ಭೇದವನ್ನು ಹೋಗಲಾಡಿಸುತ್ತದೆ.

**ವಿವರಣೆ :–** ಶ್ರುತಿಯನ್ನು ಪ್ರಮಾಣವೆಂದು ಕರೆಯುವದು ಬ್ರಹ್ಮವನ್ನು ಅದು ಇಂಥದ್ದು ಎಂದು ವಿಷಯವಾಗಿಸಿಕೊಂಡು ತಿಳಿಯಪಡಿಸುವದರಿಂದಲ್ಲ. ಅದರಲ್ಲಿರುವ ಜ್ಞಾತೃಜ್ಞಾನಾದಿಭೇದಗಳು ನಿಜವಾಗಿಲ್ಲವೆಂಬುದನ್ನು ಹೇಳಿಕೊಟ್ಟು ನಮ್ಮ ಭ್ರಾಂತಿಯನ್ನು ತೊಲಗಿಸುವದರಿಂದ, ಶಿಷ್ಯ, ಗುರು, ಶಾಸ್ತ್ರ – ಎಂಬ ಭೇದವನ್ನು ಅದು ತೊಲಗಿಸುತ್ತದೆ – ಎಂದು (23ರಲ್ಲಿ) ಹೇಳಿದೆ. ಪ್ರಮಾಣ ಪ್ರಮೇಯಾದಿಗಳ ವ್ಯವಹಾರವನ್ನೂ ಅದು ಅಲ್ಲಗಳೆಯುತ್ತದೆ ಎಂದು (31ರಲ್ಲಿ) ಹೇಳಿದ್ದಾಗಿದೆ. ಹೇಳುವ ಶಬ್ದ, ಹೇಳಲ್ಪಡುವ ಅರ್ಥ – ಮುಂತಾದ ಭೇದವನ್ನೂ ಅಲ್ಲಗಳೆಯುತ್ತದೆ – ಎಂಬುದನ್ನು ಅಲ್ಲಿ ತಿಳಿಸಿದೆ. ಅಷ್ಟರಿಂದಲೇ ಶ್ರುತಿಯು ಪ್ರಮಾಣವೆನಿಸಿದೆ. ಇದೇ ವಾಕ್ಯವನ್ನು ಹಿಂದೆ (28) ಒಮ್ಮೆ ಉದಾಹರಿಸಿತ್ತು. ಆತ್ಮನಲ್ಲಿ ಯಾವ ಭೇದವೂ ಇಲ್ಲವೆಂಬುದನ್ನು ತಿಳಿಸುವದಕ್ಕಾಗಿ ಮತ್ತೆ ಉದಾಹರಿಸಿಕೊಂಡಿದೆ.

**34. ಸರ್ವಶಬ್ದಪ್ರವೃತ್ತಿನಿಮಿತ್ತಶೂನ್ಯತ್ವಾತ್ ತಸ್ಯ ಶಬ್ದಾನಭಿಧೇಯತ್ವಮಿತಿ ವಿಶೇಷಪ್ರತಿಷೇಧೇನೈವ ತುರೀಯಂ ನಿರ್ದಿದಿಕ್ಷತಿ ॥ ಮಾಂ.ಭಾ. 7**

ಭಾವಾರ್ಥ :– ಯಾವ ಶಬ್ದಪ್ರವೃತ್ತಿನಿಮಿತ್ತವೂ ಇಲ್ಲದ್ದರಿಂದ ಅದನ್ನು ಶಬ್ದದಿಂದ ಹೇಳುವದಕ್ಕೆ ಬರುವಂತಿಲ್ಲವಾದ್ದರಿಂದ ವಿಶೇಷಗಳನ್ನು ಅಲ್ಲಗಳೆಯುವದರಿಂದಲೇ ತುರೀಯವನ್ನು ತಿಳಿಸುವದಕ್ಕೆ ಹೊರಟಿದೆ.

**ವಿವರಣೆ :–** ಘಟತ್ವ, ಪಟತ್ವ – ಮುಂತಾದದ್ದರಂತೆ ಆತ್ಮನಲ್ಲಿ ಜಾತಿ, ಸಾಮಾನ್ಯ – ಎಂಬ ವಿಶೇಷವಿಲ್ಲ; ಇದರಂತೆ ಅದರಲ್ಲಿ ದ್ರವ್ಯ, ಗುಣ, ಕರ್ಮ, ವ್ಯಕ್ತಿ, ಸಂಬಂಧ – ಎಂಬ ಯಾವ ವಿಶೇಷವೂ ಇಲ್ಲ. ಆದ್ದರಿಂದ ಬ್ರಹ್ಮದಲ್ಲಿ ಯಾವ ವಿಶೇಷಗಳೂ ಇಲ್ಲವೆಂದೇ ಅದನ್ನು ತಿಳಿಸಿಕೊಡಬೇಕಾಗಿರುತ್ತದೆ. ಎಚ್ಚರ, ಕನಸು, ಗಾಢನಿದ್ರೆ – ಎಂಬ ಮೂರು ಅವಸ್ಥೆಗಳನ್ನೂ ಅನುಭವಿಸುವ ಆತ್ಮರೂಪಗಳಿಗಿಂತ ಬೇರೆಯಾಗಿರುವದರಿಂದ ಈ ನಿರ್ವಿಶೇಷವಾದ ಆತ್ಮಸ್ವರೂಪವನ್ನು **"ಚತುರ್ಥ"** **"ತುರೀಯ"** (ನಾಲ್ಕನೆಯದು) ಎಂದೂ ಕರೆಯುವದುಂಟು. ಈ ಹೆಸರನ್ನು ಪ್ರಯೋಗಿಸುವದರಲ್ಲಿರುವ ಸ್ವಾರಸ್ಯವನ್ನು ಮುಂದೆ ವಿಮರ್ಶೆಗೆ ತೆಗೆದುಕೊಳ್ಳುವೆವು. ಮೂರವಸ್ಥೆಗಳಿಗೂ ಸಂಬಂಧಪಡದ ಆತ್ಮನನ್ನು ಯಾವ ಶಬ್ದದಿಂದಲೂ ಹೇಳಿ ತಿಳಿಸುವದು ಆಗಲಾರದೆಂಬುದನ್ನು ಮಾತ್ರ ಈಗ್ಗೆ ಹೇಳಿಟ್ಟಿರುತ್ತೇವೆ.

**35. ಅಧ್ಯಾರೋಪಿತನಾಮರೂಪಕರ್ಮದ್ವಾರೇಣ ಬ್ರಹ್ಮ ನಿರ್ದಿಶ್ಯತೇ 'ವಿಜ್ಞಾನಮಾನನ್ದಂ ಬ್ರಹ್ಮ', 'ವಿಜ್ಞಾನಘನ ಏವ', 'ಬ್ರಹ್ಮ', 'ಆತ್ಮಾ' ಇತ್ಯೇವಮಾದಿಶಬ್ದೈಃ । ಯದಾ ಪುನಃ ಸ್ವರೂಪಮೇವ ನಿರ್ದಿದಿಕ್ಷಿತಂ ಭವತಿ ನಿರಸ್ತಸರ್ವೋಪಾಧಿವಿಶೇಷಮ್, ತದಾ ನ ಶಕ್ಯತೇ ಕೇನಚಿದಪಿ ಪ್ರಕಾರೇಣ ನಿರ್ದೇಷ್ಟುಮ್ । ತದಾ ಅಯಮೇವ ಅಭ್ಯುಪಾಯೋ ಯದುತ ಪ್ರಾಪ್ತನಿರ್ದೇಶ ಪ್ರತಿಷೇಧದ್ವಾರೇಣ "ನೇತಿ ನೇತಿ" ಇತಿ ನಿರ್ದೇಶಃ ॥ ಬೃ.ಭಾ. 2–3–6**

ಭಾವಾರ್ಥ :– ನಾಮ, ರೂಪ, ಕರ್ಮ – ಇವುಗಳನ್ನು ಅಧ್ಯಾರೋಪ ಮಾಡುವದರ ಮೂಲಕ ಬ್ರಹ್ಮವನ್ನು 'ವಿಜ್ಞಾನ', 'ಆನಂದ'. 'ವಿಜ್ಞಾನಘನ', 'ಬ್ರಹ್ಮ', 'ಆತ್ಮ' – ಈ ಮುಂತಾದ ಶಬ್ದಗಳಿಂದ ಕರೆಯುತ್ತಾರೆ. ಆದರೆ ಬ್ರಹ್ಮವನ್ನು ಅದು ಇರುವಂತೆಯೇ – ಯಾವದೊಂದು ಗೊತ್ತಾದ ಉಪಾಧಿಯಿಲ್ಲದಂತೆ – ತಿಳಿಸಿ ಕೊಡಬೇಕೆಂದರೆ ಆಗ ಯಾವ ಪ್ರಕಾರದಿಂದಲೂ ಶಬ್ದಗಳಿಂದ ತಿಳಿಸುವದಕ್ಕೆ ಆಗುವದಿಲ್ಲ. ಆಗ ಅದರ ಮೇಲೆ ಹುಟ್ಟಿಹಾಕಿರುವ ಧರ್ಮವನ್ನು ಅಲ್ಲಗಳೆಯುವ ಮೂಲಕ 'ಇದಲ್ಲ, ಇದಲ್ಲ' ಎಂದು ತಿಳಿಸುವದೇ ಉಪಾಯವು.

**ವಿವರಣೆ :–** ಶಬ್ದಪ್ರಯೋಗವನ್ನು ಮಾಡುವದು ನಮ್ಮ ನಿತ್ಯವ್ಯವಹಾರದ ವಸ್ತುವನ್ನು ತಿಳಿಸಿಕೊಡುವದಕ್ಕೆ. ವ್ಯವಹಾರದಲ್ಲಿರುವ ಯಾವ ವಸ್ತುಗಳೇ ಆಗಲಿ ಅವು ಸೂಕ್ಷ್ಮವಾಗಿರಲಿ, ಸ್ಥೂಲವಾಗಿರಲಿ, ನಾಮ, ರೂಪ, ಕರ್ಮ – ಎಂಬ ಮೂರರಲ್ಲಿ ಅಡಕವಾಗುವವು; ನಾಮರೂಪಕರ್ಮಾತ್ಮಕವಾಗಿಯೇ ಇರುತ್ತವೆ. ಅವುಗಳನ್ನು ತಿಳಿಸುವದಕ್ಕೆಂದೇ ಏರ್ಪಟ್ಟಿರುವ ಶಬ್ದಗಳು ನಾಮರೂಪಕರ್ಮಗಳಿಲ್ಲದ, ಏತಕ್ಕೂ ವಿಷಯವಲ್ಲದ ಬ್ರಹ್ಮವನ್ನು ಎಂದಿಗೂ ತಿಳಿಸಿಕೊಡಲಾರವೆಂಬುದು ಸ್ಪಷ್ಟವಾಗಿದೆ. ಆದರೂ ಶಾಸ್ತ್ರದಲ್ಲಿ ಈ ಅವಾಚ್ಯವಾದ ಬ್ರಹ್ಮವನ್ನೇ ತಿಳಿಸುವದಕ್ಕೆ ಕೆಲವು ಶಬ್ದಗಳನ್ನು ಬಳಸಿರುತ್ತದೆ. ಸತ್ಯ, ಜ್ಞಾನ, ಆನಂದ, ವಿಜ್ಞಾನಘನ, ಬ್ರಹ್ಮ, ಆತ್ಮ – ಮುಂತಾದ ಶಬ್ದಗಳು ಇಂಥವುಗಳು. ಇವುಗಳು ಪರಮಾರ್ಥವನ್ನು ತಿಳಿಸುವದಕ್ಕೆ ಬಹಳ ಹತ್ತಿರವಿರುವವಾಗಿರುತ್ತವೆ. ಇದು ಹೇಗೆಂಬುದನ್ನು ಮುಂದೆ ವಿಶದಪಡಿಸುವೆವು. ಪರಮಾರ್ಥಸ್ವರೂಪವನ್ನು ಇದ್ದದ್ದು ಇದ್ದಂತೆ ತಿಳಿಸಿಕೊಡುವದಕ್ಕೆ ಇರುವ ಒಂದೇ ಉಪಾಯವೆಂದರೆ ಯಾವ ಯಾವ ಧರ್ಮವನ್ನು ಜನರು ಆ ತತ್ತ್ವದಲ್ಲಿ ಕಲ್ಪಿಸಿಕೊಂಡಿರುವರೋ ಅದೊಂದೂ ಬ್ರಹ್ಮದ್ದಲ್ಲ ಎಂದು ತಿಳಿಸುವದೇ ಆಗಿರುತ್ತದೆ.

**36. ಶೂನ್ಯಮೇವ ತರ್ಹಿ ತತ್ । ನ । ಮಿಥ್ಯಾವಿಕಲ್ಪಸ್ಯ ನಿರ್ನಿಮಿತ್ತತ್ವಾನುಪಪತ್ತೇಃ । ನ ಹಿ ರಜತಸರ್ಪಪುರುಷಮೃಗತೃಷ್ಣಿಕಾದಿವಿಕಲ್ಪಾಃ ಶುಕ್ತಿಕಾರಜ್ಜುಸ್ಥಾಣೂಷರಾದಿವ್ಯತಿರೇಕೇಣ ಅವಸ್ತ್ವಾಸ್ಪದಾಃ ಶಕ್ಯಾಃ ಕಲ್ಪಯಿತುಮ್॥**

**ಮಾಂ.ಭಾ. 7**

**ಭಾವಾರ್ಥ :– (ಶಂಕೆ:) ಹಾಗಾದರೆ ಆ ತತ್ತ್ವವು ಶೂನ್ಯವೆಂದೇ ಆಯಿತಲ್ಲ! (ಪರಿಹಾರ) ಹಾಗಲ್ಲ. ಏಕೆಂದರೆ ಹುಸಿತೋರಿಕೆಯಾಗಿರುವ ವಿಕಲ್ಪಕ್ಕೆ ನಿಮಿತ್ತವಿಲ್ಲವೆಂಬುದು ಯುಕ್ತವಲ್ಲ. ಬೆಳ್ಳಿ, ಹಾವು, ಮನುಷ್ಯ, ಬಿಸಿಲ್ಗುದುರೆ – ಮುಂತಾದ ವಿಕಲ್ಪಗಳು ಕಪ್ಪೆಯಚಿಪ್ಪು, ಹಗ್ಗ, ಮೋಟುಮರ, ಚೌಳುನೆಲ – ಮುಂತಾದ ತಮಗಿಂತ ಬೇರೆಯಾಗಿರುವ ಯಾವದಾದರೊಂದು ವಸ್ತುವು ಆಸ್ಪದವಾಗಿಲ್ಲದೆ ತೋರುವದೆಂದು ಕಲ್ಪಿಸುವದಕ್ಕೆ ಆಗುವದಿಲ್ಲವಷ್ಟೆ ?**

**ವಿವರಣೆ :–** ಪರಮಾರ್ಥಕ್ಕೆ ಯಾವ ವಿಶೇಷವೂ ಇಲ್ಲದ್ದರಿಂದ ಅದನ್ನು ಯಾವ ಶಬ್ದದಿಂದಲೂ ತಿಳಿಸುವದಕ್ಕೆ ಆಗುವದೇ ಇಲ್ಲ – ಎನ್ನುವದಾದರೆ ಹೇಗೂ ಯಾವ ಶಬ್ದದಿಂದಲೂ ತಿಳಿಸುವದಕ್ಕೆ ಆಗದೆ ಇರುವ ಆ ತತ್ತ್ವವೇ

ಇಲ್ಲವೆನ್ನಬಾರದೇಕೆ? ಈ ಜಗತ್ತು ಬರಿಯ ತೋರಿಕೆಯೇ, ನಿಜವಾಗಿಲ್ಲವೇ ಇಲ್ಲ – ಎಂದೇಕೆ ತೀರ್ಮಾನಿಸಬಾರದು? – ಎಂದು ಯಾರಾದರೂ ಶಂಕಿಸಬಹುದು. ಆದರೆ ಈ ಶಂಕೆಯು ಯುಕ್ತವಲ್ಲ. ಏಕೆಂದರೆ ಹುಸಿತೋರಿಕೆಗಳಿಗೆ ಯಾವದಾದರೊಂದು ಆಧಾರವು ಇದ್ದೇಇರಬೇಕು. ಕಪ್ಪೆಯಚಿಪ್ಪೆಂಬ ವಸ್ತುವೇ ಬೆಳ್ಳಿಯಾಗಿ ತೋರುತ್ತದೆ; ಅದಿಲ್ಲದೆ ತೋರುವದಿಲ್ಲ. ಹೀಗೆಯೇ ಹಗ್ಗದ ಹಾವು, ಮರದಲ್ಲಿ ತೋರುವ ಮನುಷ್ಯ, ಮರಳುಗಾಡಿನಲ್ಲಿ ಕಾಣುವ ತೋರಿಕೆಯ ನೀರು – ಇಂಥ ಹುಸಿತೋರಿಕೆಗಳಿಗೆಲ್ಲ ಆಶ್ರಯವಾಗಿ ಒಂದು ನಿಜವಾದ ವಸ್ತುವಿದ್ದೇಇರುತ್ತದೆ; ಹುಸಿತೋರಿಕೆಯನ್ನು ವಿಕಲ್ಪವೆಂದೂ ಅದಕ್ಕೆ ಆಧಾರ ವಾಗಿರುವ ವಸ್ತುವನ್ನು ಆಸ್ಪದವೆಂದೂ ಆಚಾರ್ಯರು ಅಲ್ಲಲ್ಲಿ ಬರೆದಿರುತ್ತಾರೆ; ಈಗಿನ ವೇದಾಂತಗ್ರಂಥಗಳಲ್ಲಿ ಇವನ್ನು 'ಆರೋಪಿತ', 'ಅಧಿಷ್ಠಾನ' ಎಂದು ಕರೆಯುತ್ತಾರೆ.

ಪರಮಾರ್ಥವನ್ನು ಅಧ್ಯಾರೋಪಿತದ ನಿಷೇಧದ ಮೂಲಕವೇ ವರ್ಣಿಸುವದರ ಪ್ರಯೋಜನವನ್ನೂ ಅದರ ವಿಷಯಕ್ಕಿರುವ ಶಂಕಾಸಮಾಧಾನ ವನ್ನೂ ಇನ್ನುಮುಂದೆ ವಿಚಾರಮಾಡೋಣ.

* * * * *

## 5. ಪರತತ್ತ್ವವನ್ನು ನಿಷೇಧಮುಖವಾಗಿ ಉಪದೇಶಿಸುವದು

**37. ರಜ್ಜುರಿವ ಸರ್ಪಾದಿಭಿರ್ವಿಕಲ್ಪ್ಯಮಾನಾ ಸ್ಥಾನತ್ರಯೇಽಪಿ ಆತ್ಮಾ ಏಕ ಏವ ಅನ್ತಃಪ್ರಜ್ಞತ್ವಾದಿತ್ವೇನ ವಿಕಲ್ಪ್ಯತೇ ಯದಾ ತದಾ ಅನ್ತಃಪ್ರಜ್ಞಾದಿತ್ವ ಪ್ರತಿಷೇಧವಿಜ್ಞಾನಪ್ರಮಾಣಸಮಕಾಲಮೇವ ಆತ್ಮನ್ಯನರ್ಥಪ್ರಪಞ್ಚನಿವೃತ್ತಿಲಕ್ಷಣ ಫಲಂ ಪರಿಸಮಾಪ್ತಮಿತಿ ತುರೀಯಾಧಿಗಮೇ ಪ್ರಮಾಣಾನ್ತರಂ ಸಾಧನಾನ್ತರಂ ವಾ ನ ಮೃಗ್ಯಮ್ । ರಜ್ಜುಸರ್ಪವಿವೇಕಸಮಕಾಲೇ ಇವ ರಜ್ಜ್ವಾಂ ಸರ್ಪನಿವೃತ್ತಿಫಲೇ ಸತಿ ರಜ್ಜ್ವಧಿಗಮಸ್ಯ ॥ ಮಾಂ.ಭಾ. 7**

**ಭಾವಾರ್ಥ :–** ಹಾವು ಮುಂತಾದವುಗಳೆಂದು ವಿಕಲ್ಪಿಸುತ್ತಿರುವ ಹಗ್ಗದಂತೆ ಮೂರವಸ್ಥೆಗಳಲ್ಲಿಯೂ ಇರುವ ಆತ್ಮನೊಬ್ಬನೇ ಅಂತಃಪ್ರಜ್ಞನು – ಎಂದು ಮುಂತಾಗಿ

**ವಿಕಲ್ಪಿತನಾಗುತ್ತಿದಾನೆಂದು ಯಾವಾಗ ಆಯಿತೋ, ಆಗ ಅಂತಃಪ್ರಜ್ಞನೇ ಮುಂತಾದ ರೂಪವನ್ನು ಅಲ್ಲಗಳೆಯುವ ಅರಿವೆಂಬ ಪ್ರಮಾಣದ ಸಮಕಾಲದಲ್ಲಿಯೇ ಆತ್ಮನಲ್ಲಿ ಅನರ್ಥರೂಪವಾದ ಪ್ರಪಂಚವು ತೊಲಗುವದೆಂಬ ಫಲವು ಆಗಿಬಿಟ್ಟಿತಾದ್ದರಿಂದ ತುರೀಯನನ್ನು ಅರಿತುಕೊಳ್ಳುವದಕ್ಕೆ ಮತ್ತೊಂದು ಪ್ರಮಾಣವನ್ನಾಗಲಿ ಸಾಧನವನ್ನಾಗಲಿ ಹುಡುಕಬೇಕಾದದ್ದಿರುವದಿಲ್ಲ.**

**ವಿವರಣೆ :–** ಹಗ್ಗವನ್ನೇ ಹಾವು ಮುಂತಾದವುಗಳೆಂದು ಭ್ರಾಂತರು ವಿಕಲ್ಪಿಸುವಂತೆ ಪರಮಾರ್ಥವೊಂದನ್ನೇ ಅಜ್ಞರು ಬಗೆಬಗೆಯಾಗಿ ವಿಕಲ್ಪಿಸಿಕೊಳ್ಳುತ್ತಿರುತ್ತಾರೆ. ಎಚ್ಚರಕನಸುನಿದ್ರೆಗಳೆಂಬ ಮೂರವಸ್ಥೆ ಯನ್ನನುಭವಿಸುವಂತೆ ಕಾಣುವವನು ಒಬ್ಬನೇ ಆತ್ಮನು, ಅವನಲ್ಲಿ ಈ ಯಾವ ಅವಸ್ಥೆಯ ಅನುಭವವೂ ನಿಜವಾಗಿಲ್ಲದಿದ್ದರೂ ಅವಸ್ಥೆಗಳನ್ನು ಅನುಭವಿಸುತ್ತಿರುವನೆಂದು ಲೋಕದ ಜನರು ವಿಕಲ್ಪಿಸುತ್ತಿದ್ದಾರೆ. ಈ ಅನುಭವಗಳು ನಿಜವಾಗಿ ಆತ್ಮನಲ್ಲಿಲ್ಲವೇ ಇಲ್ಲ – ಎಂದು ತಿಳಿಸುವ ಜ್ಞಾನದಿಂದಲೇ ನಿಜವಾದ ಆತ್ಮನನ್ನು ಅರಿತುಕೊಂಡಂತಾಗಿಬಿಡುತ್ತದೆ. ಆದ್ದರಿಂದ ಶ್ರುತಿಯು ಅವಸ್ಥಾವತ್ತ್ವವೇ ಮುಂತಾದ ವಿಕಲ್ಪಗಳು ನಿಜವಾಗಿ **ಆತ್ಮನಲ್ಲಿಲ್ಲವೇ ಇಲ್ಲ – ಎಂಬುದನ್ನು ತಿಳಿಸಿಕೊಟ್ಟಮೇಲೆ ಮತ್ತೆ ಆತ್ಮನನ್ನು ಅರಿತುಕೊಳ್ಳುವದಕ್ಕೆ ಬೇರೊಂದು ಪ್ರಮಾಣದ ಸಹಾಯವು ಬೇಕಿರುವದಿಲ್ಲ. ನಿತ್ಯಸಿದ್ಧನಾಗಿರುವ ಆತ್ಮನ ಸಾಕ್ಷಾತ್ಕಾರಕ್ಕೆ ಮತ್ತೆ ಯಾವ ಸಾಧನವನ್ನೂ ಮಾಡಬೇಕಾದದ್ದಿರುವದಿಲ್ಲ.** ಆತ್ಮನನ್ನು ಅರಿಯುವದಕ್ಕೆ ಯಾವ ಪ್ರಮಾಣವನ್ನಾಗಲಿ ಪಡೆದುಕೊಳ್ಳುವದಕ್ಕೆ ಸಾಧನವನ್ನಾಗಲಿ ಬಯಸುವಂತಿಲ್ಲ; ಏಕೆಂದರೆ ಅವನು ನಿತ್ಯಜ್ಞಾನಸ್ವರೂಪನು, ನಮ್ಮ ಆತ್ಮನೇ ಆಗಿರುವದರಿಂದ ನಿತ್ಯಪ್ರಾಪ್ತನಾಗಿರುತ್ತಾನೆ. ಆದ್ದರಿಂದ ತಪ್ಪುತಿಳಿವಳಿಕೆ ಎಂಬ ಮರೆಯನ್ನು ಕಳೆಯುವ ಜ್ಞಾನವೊಂದೇ ಸಾಕಾಗಿರುತ್ತದೆ.

**38. ಯದ್ಯೇವಂ ದ್ವೈತಾಭವೇ ಶಾಸ್ತ್ರವ್ಯಾಪಾರಃ, ನಾದ್ವೈತೇ ವಿರೋಧಾತ್। ತಥಾ ಚ ಸತಿ ಅದ್ವೈತಸ್ಯ ವಸ್ತುತ್ವೇ ಪ್ರಮಾಣಾಭಾವಾತ್ ಶೂನ್ಯವಾದಪ್ರಸಙ್ಗಃ। ದ್ವೈತಸ್ಯ ಚ ಅಭಾವಾತ್ । ನ । ರಜ್ಜುಸರ್ಪಾದಿಕಲ್ಪನಾಯಾ ನಿರಾಸ್ಪದತ್ವೇ ಅನುಪಪತ್ತಿರಿತಿ ಪ್ರತ್ಯುಕ್ತಮ್ ಏತತ್ ಕಥಮ್ ಉಜ್ಜೀವಯಸೀತಿ? ಆಹ । ರಜ್ಜುರಪಿ ಸರ್ಪವಿಕಲ್ಪನಾಕ್ಷಯೇ ಅವಿಕಲ್ಪಿತಸ್ಯ ಅವಿಕಲ್ಪಿತತ್ವಾದೇವ ಸತ್ತ್ವೋಪಪತ್ತೇಃ ॥ ಗೌ.ಕಾ.ಭಾ. 2–32**

**ಭಾವಾರ್ಥ :– ಹಾಗಾದರೆ ದ್ವೈತವಿಲ್ಲವೆನ್ನುವದಕ್ಕೆ ಶಾಸ್ತ್ರದ ವ್ಯಾಪಾರವೇ ಹೊರತು ಅದ್ವೈತಕ್ಕಲ್ಲವೆಂದಾಯಿತು. ಏಕೆಂದರೆ ಅದ್ವೈತಕ್ಕೆ (ಪ್ರಮಾಣವೆಂದರೆ) ವಿರೋಧವಾಗುತ್ತದೆ. ಹಾಗಾದರೆ ಅದ್ವೈತವು ನಿಜವೆಂಬುದಕ್ಕೆ ಪ್ರಮಾಣವಿಲ್ಲದ್ದರಿಂದ ಶೂನ್ಯವಾದವೇ ಗಂಟುಬೀಳುವದಲ್ಲ! – ಎಂದರೆ ಹಾಗಲ್ಲ. ಹಗ್ಗದ ಹಾವೇ ಮುಂತಾದ ವಿಕಲ್ಪಕ್ಕೆ ಆಸ್ಪದವಿಲ್ಲವೆಂಬುದು ಹೊಂದಲಾರದು ಎಂದು ಇದನ್ನು ತಿರಸ್ಕರಿಸಿದ್ದೇವೆ; ಅದನ್ನು ಮತ್ತೆ ಹೇಗೆ ಎಬ್ಬಿಸುತ್ತೀರಿ? ಇಲ್ಲಿ ಆಕ್ಷೇಪಕನು ಹೇಳುವದೇನೆಂದರೆ; ಹಾವೆಂಬ ವಿಕಲ್ಪಕ್ಕೆ ಆಸ್ಪದವಾಗಿರುವ ಹಗ್ಗವೂ ಕಲ್ಪಿತವೇ; ಆದ್ದರಿಂದ ನಿಮಗೆ ದೃಷ್ಟಾಂತವು ಹೊಂದುವದಿಲ್ಲವಲ್ಲ! ಇದಕ್ಕೆ ನಮ್ಮ ಸಮಾಧಾನವೇನೆಂದರೆ : ವಿಕಲ್ಪನೆಯೆಲ್ಲ ಮುಗಿದರೆ ವಿಕಲ್ಪಿತವಲ್ಲದ್ದು ವಿಕಲ್ಪಿತವಲ್ಲವೆಂಬ ಕಾರಣದಿಂದಲೇ ಇದೆ ಎಂದಾಗುವದು.**

**ವಿವರಣೆ :–** ದ್ವೈತವು ಇಲ್ಲವೆಂದು ಮಾತ್ರ ಶಾಸ್ತ್ರವು ತೋರಿಸಿಕೊಟ್ಟರೆ ಅದ್ವೈತಕ್ಕೆ ಪ್ರಮಾಣವೇನು? ಅದಕ್ಕೂ ಪ್ರಮಾಣವಿದೆ ಎಂದರೆ ಅದ್ವೈತತತ್ತ್ವವೊಂದು, ಅದರ ಪ್ರಮಾಣವೊಂದು – ಹೀಗೆ ಎರಡು ತತ್ತ್ವಗಳಿವೆ ಎಂದಾಗಿ ಅದ್ವೈತವೆಂದು ಅದನ್ನು ಕರೆದದ್ದೇ ತಪ್ಪಾಗುವದಿಲ್ಲವೆ? – ಎಂದು ತರ್ಕದಿಂದ ಯಾರಾದರೂ ಶಂಕಿಸಬಹುದು. 'ದ್ವೈತವು ನಾವು ಕಲ್ಪಿಸಿ ಕೊಂಡಿರುವದಾದ್ದರಿಂದ ಯಾವದರಲ್ಲಿ ದ್ವೈತವನ್ನು ಕಲ್ಪಿಸಿದೇವೋ ಅದೇ ಅದ್ವೈತವೆಂದಾಗುತ್ತದೆ' ಎಂದು ಇದಕ್ಕೆ ತರ್ಕದಿಂದಲೇ ಸಮಾಧಾನವನ್ನು ಹೇಳಬಹುದು.

ಈ ತರ್ಕದಮೇಲೂ ತಾರ್ಕಿಕನೂ ಮತ್ತೊಂದು ಆಕ್ಷೇಪವನ್ನು ತರ್ಕದಿಂದಲೇ ಹಾಕಬಹುದು. ಹಾವು ನಮಗೆ ತೋರುವ ವಿಕಲ್ಪವೇ ಆಗಿರುವಂತೆ ಅದಕ್ಕೆ ಆಧಾರವಾಗಿರುವ ಹಗ್ಗವೂ ಬರಿಯ ತೋರಿಕೆಯ ವಿಕಲ್ಪವೇ ಎಂದೇಕೆ ಹೇಳಬಾರದು? ಈ ಆಕ್ಷೇಪವು ಸರಿಯಿಲ್ಲ; ಏಕೆಂದರೆ 'ವಿಕಲ್ಪಿತವಾದದ್ದು' ಎನ್ನುವಾಗಲೇ ಏತರಲ್ಲಿ ವಿಕಲ್ಪಿತ? – ಎಂಬ ಶಂಕೆ ಏಳುವದು. ಆದ್ದರಿಂದ ಎಲ್ಲಿಯವರೆಗೆ ನಾವು 'ಇದೂ ವಿಕಲ್ಪಿತ' ಎಂದು ಹೇಳುತ್ತಾ ಹೋಗುವೆವೋ ಅಲ್ಲಿಯವರೆಗೂ ವಿಕಲ್ಪಿತವಾದದ್ದನ್ನೆಲ್ಲ ಬಿಡಿರಿ, ಏತರಲ್ಲಿ ಎಲ್ಲವೂ ಕಲ್ಪಿತವಾಗಿರುತ್ತದೆಯೋ ಅದನ್ನೇ ನಾವು ಎಲ್ಲಕ್ಕೂ ಆಸ್ಪದವಾದ ಪರಮಾರ್ಥ ಎನ್ನುತ್ತೇವೆ – ಎಂದು ಪ್ರತಿಸಮಾಧಾನವನ್ನು ಹೇಳಬಹುದಾಗಿದೆ.

**39. ರಜ್ಜುಸರ್ಪವತ್ ಅಸತ್ತ್ವಮ್ ಇತಿ ಚೇತ್ । ನ । ಏಕಾನ್ತೇನ ಅವಿಕಲ್ಪಿತತ್ವಾತ್, ಅವಿಕಲ್ಪಿತರಜ್ಜ್ವಂಶವತ್ ಪ್ರಾಕ್ ಸರ್ಪಾಭಾವವಿಜ್ಞಾನಾತ್।**

**ವಿಕಲ್ಪಯಿತುಶ್ಚ ಪ್ರಾಗ್ ವಿಕಲ್ಪನೋತ್ಪತ್ತೇಃ ಸಿದ್ಧತ್ವಾಭ್ಯುಪಗಮಾದೇವ ಅಸತ್ತ್ವಾನುಪಪತ್ತಿಃ ॥ ಗೌ.ಕಾ.ಭಾ. 2-23**

**ಭಾವಾರ್ಥ** :- (ಆಕ್ಷೇಪ:) ಹಗ್ಗದ ಹಾವಿನಂತೆ ಅದೂ ಇಲ್ಲವೆನ್ನಬಹುದಲ್ಲವೆ? (ಪರಿಹಾರ) ಹಾಗಲ್ಲ. ಏಕೆಂದರೆ ಹೇಗೂ ಕಲ್ಪಿತವಲ್ಲದ ರಜ್ಜುವಿನ ಅಂಶದಂತೆ ಅದು ಸತ್ಯವಾಗಿರಬಹುದಾಗಿದೆ. ವಿಕಲ್ಪವನ್ನು ಮಾಡುವ ಮುಂಚೆಯೂ ವಿಕಲ್ಪವನ್ನು ಮಾಡುವವನು ಇದ್ದೇಇರುತ್ತಾನಾದ್ದರಿಂದ ಅವನನ್ನು ಇಲ್ಲವೆನ್ನುವದಾಗಲಾರದು.

**ವಿವರಣೆ** :- ಪೂರ್ವಪಕ್ಷಿಯು ಬರಿಯ ತರ್ಕದಿಂದ ಎಲ್ಲವೂ ಮಿಥ್ಯೆಯೇ; ಯಾವದು ತೋರುತ್ತದೆಯೋ ಅದು ಹಗ್ಗದ ಹಾವಿನಂತೆ ಹುಸಿ - ಎಂದು ಹಟದಿಂದ ಸಾಧಿಸುವದಕ್ಕೆ ಹೊರಟಿರುತ್ತಾನೆ. ಅವನ ತರ್ಕಕ್ಕೆ ತರ್ಕದಿಂದಲೇ ಉತ್ತರವನ್ನು ಕೊಡುತ್ತಾ ಬಂದಿರುವ ಸಿದ್ಧಾಂತಿ ಹೇಳಿರುವದೇನೆಂದರೆ 'ಇದು ಹಾವಲ್ಲ' ಎನ್ನುವಾಗ 'ಮತ್ತೇನು' ಎಂಬ ಶಂಕೆ ಬರಲು 'ಹಗ್ಗ' ಎಂಬ ಸಮಾಧಾನವು ಸಿಕ್ಕುತ್ತದೆ. ಇದು ಹಗ್ಗವೆಂಬುದೂ ಹಾವಿನಂತೆ ಭ್ರಾಂತಿಯಾಗಿರಬಾರದೇಕೆ ? - ಎಂಬ ಒಣತರ್ಕದಿಂದ ಶಂಕೆಯನ್ನು ತೆಗೆದರೆ 'ಇದು' ಎಂದಾದರೂ ಯಾವಾಗಲೂ ತೋರುತ್ತಲೇ ಇರುವ ಒಂದಂಶವನ್ನು ನೀವೂ ಒಪ್ಪುತ್ತೀರಷ್ಟೆ, ಅದೇ ಪರಮಾರ್ಥವು - ಎಂದು ತರ್ಕದಿಂದ ಪರಿಹಾರವನ್ನು ಹೇಳಲಾಗಿದೆ.

ಅದ್ವೈತವು ತರ್ಕದಿಂದಲೇ ಸಿದ್ಧವಾಗುವದಿಲ್ಲ. ವೇದಾಂತವು ಅನುಭವದ ಆಧಾರದಿಂದಲೇ ಸಿದ್ಧವಾಗತಕ್ಕದ್ದು. ಭ್ರಾಂತಿಯಿಂದಾಗುವದಾಗಲಿ ನಿಶ್ಚಯ ಜ್ಞಾನವಾಗುವದಾಗಲಿ ನಮಗೇ; **ಆ ನಮ್ಮ ಸ್ವರೂಪವನ್ನು ಇಲ್ಲವೆಂದು ತೋರಿಸುವದು ಯಾರಿಂದಲೂ ಆಗಲಾರದು; ಹಾಗೆ ತೋರಿಸುವದಕ್ಕೆ ಹೊರಟರೆ, ಹೊರಟವನೇ ಆತ್ಮನಾಗುವನು; ಅವನ ಸ್ವರೂಪವೇ ನಿಜವಾಗಿ ವಿಕಲ್ಪಗಳಿಗೆಲ್ಲ ಆಧಾರವಾಗಿರುವ ಅದ್ವೈತವಾಗಿರುತ್ತದೆ.** ಆದ್ದರಿಂದ ಸ್ವತಃಸಿದ್ಧನಾಗಿರುವ ಆತ್ಮನು ಇದಾನೆಂಬುದಕ್ಕೆ ಯಾವ ಪ್ರಮಾಣವೂ ಬೇಡ. ಆ ಆತ್ಮನಲ್ಲಿಯೇ ಎಲ್ಲಾ ದ್ವೈತವೂ ಕಲ್ಪಿತವಾಗಿದೆ ಎಂಬುದು ಯಾವ ಆಕ್ಷೇಪವೂ ಇಲ್ಲದೆ ಸಿದ್ಧವಾಗಿರುತ್ತದೆ ಎಂದು ತಿಳಿಯಬೇಕು.

**40. ಕಥಂ ಪುನಃ ಸ್ವರೂಪೇ ವ್ಯಾಪಾರಾಭಾವೇ ಶಾಸ್ತ್ರಸ್ಯ ದ್ವೈತವಿಜ್ಞಾನ ನಿವರ್ತಕತ್ವಮ್ ? ನೈಷ ದೋಷಃ । ರಜ್ಜ್ವಾಂ ಸರ್ಪಾದಿವತ್ ಆತ್ಮನಿ ದ್ವೈತಸ್ಯ ಅವಿದ್ಯಾಧ್ಯಸ್ತತ್ವಾತ್ । ಕಥಮ್ ? ಸುಖ್ಯಹಮ್, ದುಃಖೀ, ಮೂಢೋ, ಜಾತೋ,**

ಮೃತೋ, ಜೀರ್ಣೋ, ದೇಹವಾನ್, ಪಶ್ಯಾಮಿ, ವ್ಯಕ್ತಃ, ಅವ್ಯಕ್ತಃ, ಕರ್ತಾ, ಫಲೀ, ಸಂಯುಕ್ತಃ, ವಿಯುಕ್ತಃ, ಕ್ಷೀಣೋ, ವೃದ್ಧೋಽಹಮ್, ಮಮೈತೇ – ಇತ್ಯೇವಮಾದಯಃ ಸರ್ವೇ ಆತ್ಮನ್ಯಧ್ಯಾರೋಪ್ಯನ್ತೇ । ಆತ್ಮಾ ಏತೇಷು ಅನುಗತಃ, ಸರ್ವತ್ರಾವ್ಯಭಿಚಾರಾತ್ । ಯಥಾ ಸರ್ಪಧಾರಾಧಿಭೇದೇಷು ರಜ್ಜುಃ । ಯದಾ ಚೈವಮ್ ವಿಶೇಷ್ಯಸ್ಯ ಸ್ವರೂಪಪ್ರತ್ಯಯಸ್ಯ ಸಿದ್ಧತ್ವಾತ್ ನ ಕರ್ತವ್ಯತ್ವಂ ಶಾಸ್ತ್ರೇಣ ಅಕೃತಕರ್ತೃ ಚ ಶಾಸ್ತ್ರಮ್, ಕೃತಾನುಕಾರಿತ್ವೇ ಅಪ್ರಮಾಣಮ್ । ಯತಃ ಅವಿದ್ಯಾಧ್ಯಾರೋಪಿತಸುಖಿತ್ವಾದಿವಿಶೇಷಪ್ರತಿಬನ್ಧಾದೇವ ಆತ್ಮನಃ ಸ್ವರೂಪೇಣಾನವಸ್ಥಾನಮ್ । ಸ್ವರೂಪಾವಸ್ಥಾನಂ ಚ ಶ್ರೇಯಃ ಇತಿ ಸುಖಿತ್ವಾದಿನಿವರ್ತಕಂ ಶಾಸ್ತ್ರಮ್ ಆತ್ಮನಿ ಅಸುಖಿತ್ವಾದಿಪ್ರತ್ಯಯಕರಣೇನ । 'ನೇತಿ ನೇತ್ಯಸ್ಥೂಲಾದಿವಾಕ್ಯೈಃ' ॥ ಗೌ.ಕಾ.ಭಾ. 2–32

ಭಾವಾರ್ಥ :– (ಆಕ್ಷೇಪ:) ಹೀಗೆ ಆತ್ಮಸ್ವರೂಪವನ್ನು ತಿಳಿಸಿಕೊಡುವದರಲ್ಲಿ ಶಾಸ್ತ್ರದ ವ್ಯಾಪಾರವೇನೂ ಇಲ್ಲ – ಎನ್ನುವದಾದರೆ ಅದು ದ್ವೈತವನ್ನು ತೊಲಗಿಸುವದೆಂಬುದು ಹೇಗೆ? ಇದೇನೂ ದೋಷವಲ್ಲ. ಏಕೆಂದರೆ ಹಗ್ಗದಲ್ಲಿ ಹಾವೇ ಮುಂತಾದವುಗಳನ್ನು ಹುಟ್ಟುಗಟ್ಟುವಂತೆ ದ್ವೈತವನ್ನು ಭ್ರಾಂತಿಯಿಂದ ಹುಟ್ಟುಗಟ್ಟಿಕೊಂಡಿರುತ್ತಾರೆ. ಹೇಗೆಂದರೆ, 'ನಾನು ಸುಖಿ, ದುಃಖಿ, ಮೂಢ, ಹುಟ್ಟಿದೆನು, ಸತ್ತೆನು; ಮುದುಕನಾದೆನು, ದೇಹವುಳ್ಳವನು; ವಸ್ತುಗಳನ್ನು ನೋಡುತ್ತಿದ್ದೇನೆ; ವ್ಯಕ್ತನಾಗಿದ್ದೇನೆ, ಅವ್ಯಕ್ತನಾಗಿದ್ದೇನೆ; ಕರ್ತೃವು, ಕರ್ಮಫಲವನ್ನು ಅನುಭವಿಸುವೆನು; (ದೇಹಾದಿ) ಸಂಯೋಗವುಳ್ಳವನಾಗಿರುವೆನು, ಅವುಗಳನ್ನಗಲಿದೆನು; ಸೊರಗಿದೆನು, ಬೆಳೆದುಕೊಂಡೆನು, ನಾನು; ಇವರು ನಮ್ಮವರು – ಎಂಬಿವೇ ಮುಂತಾದವುಗಳೆಲ್ಲ ಆತ್ಮನಲ್ಲಿ ಹುಟ್ಟಿಗಟ್ಟಿದವುಗಳಾಗಿರುತ್ತವೆ. ಆತ್ಮನು ಇವುಗಳಲ್ಲೆಲ್ಲ ಸೇರಿಕೊಂಡೇ ಜೊತೆಯಲ್ಲಿರುತ್ತಾನೆ; ಏಕೆಂದರೆ ಹಾವು, ನೀರಿನ ಕೋಡಿ – ಮುಂತಾದ ವಿಕಲ್ಪಗಳಲ್ಲಿ ಹಗ್ಗವು ಅನುಸರಿಸಿಕೊಂಡೇ ಬಂದಿರುವಂತೆ ಅವನ ಸ್ವರೂಪವು (ಎಲ್ಲೆಲ್ಲಿಯೂ ಅನುಸರಿಸಿಕೊಂಡಿರುವದರಿಂದ) ಎಲ್ಲಿಯೂ ಬೇರ್ಪಡುವದಿಲ್ಲ. ಹೀಗಿರುವದರಿಂದ ವಿಶೇಷ್ಯಸ್ವರೂಪದ ಅರಿವು ಮೊದಲೆ ಗೊತ್ತಾಗಿಬಿಟ್ಟಿರುವದರಿಂದ ಅದನ್ನು ಶಾಸ್ತ್ರವೇನೂ ಹೊಸದಾಗಿ ಮಾಡಿಕೊಡಬೇಕಾಗಿಲ್ಲ. ಶಾಸ್ತ್ರವು ಈವರೆಗೆ ಆಗದೆ ಇರುವ ಜ್ಞಾನವನ್ನು ಮಾಡಿಕೊಡುವದಾದ್ದರಿಂದ ಮೊದಲೇ ಆಗಿರುವ ಜ್ಞಾನವನ್ನು ಅನುವಾದಮಾಡಿದರೆ ಆ ವಿಷಯಕ್ಕೆ ಅದು ಪ್ರಮಾಣವಲ್ಲ. ಹೀಗೆ ಭ್ರಾಂತಿಯಿಂದ ಹುಟ್ಟುಗಟ್ಟಿಕೊಂಡಿರುವ ಸುಖಿತ್ವವೇ ಮುಂತಾದ ಅಡ್ಡಿಯಿಂದಲೇ ಆತ್ಮನು ತನ್ನ ಸ್ವರೂಪದಲ್ಲಿ ನೆಲೆನಿಂತಿಲ್ಲ. ಸ್ವರೂಪದಲ್ಲಿ ನೆಲೆನಿಲ್ಲುವದೇ ಪುರುಷಾರ್ಥವಾದ್ದರಿಂದ ಶಾಸ್ತ್ರವು 'ಇದಲ್ಲ, ಇದಲ್ಲ', 'ಸ್ಥೂಲವಲ್ಲ' ಎಂಬಿವೇ

**ಮುಂತಾದ ವಾಕ್ಯಗಳಿಂದ ಸುಖಿಯಲ್ಲ ಎಂದು ಮುಂತಾದ ಅರಿವನ್ನು ಉಂಟು ಮಾಡುವದರ ಮೂಲಕ ಆತ್ಮನಲ್ಲಿರುವ ಸುಖಿತ್ವಾದಿಗಳನ್ನು ಅಲ್ಲಗಳೆಯುತ್ತದೆ.**

**ವಿವರಣೆ :–** ಆತ್ಮನನ್ನು ನೇರಾಗಿ ತಿಳಿಸುವದು ಶಾಸ್ತ್ರದಿಂದಾಗುವ ಹಾಗೆಯೇ ಇಲ್ಲ; ಆತ್ಮನನ್ನು ತಿಳಿಸದೆಯೇ ದ್ವೈತವನ್ನು ಕಳೆಯುವದು ಹೇಗೆ? ಎಂಬುದು ಆಕ್ಷೇಪದ ಸಾರ. ಆತ್ಮನಲ್ಲಿ ದ್ವೈತವು ಅವಿದ್ಯಾಕಲ್ಪಿತವಾಗಿರುತ್ತದೆ. ಈ ದ್ವೈತದಲ್ಲಿ ಯಾವದು ಕಲ್ಪಿತವಾಗಿರುತ್ತದೆಯೋ ಅದನ್ನು ಅಲ್ಲಗಳೆಯುವದಕ್ಕೆ ಅದಕ್ಕೆ ವಿರುದ್ಧವಾದ ಜ್ಞಾನವನ್ನು ಉಂಟುಮಾಡಿದರೆ ಸಾಕಾಗಿದೆ. ಹೇಗೆಂದರೆ 'ನಾನು ಆಗ ದುಃಖಿಯಾಗಿದ್ದೆನು, ಈಗ ಸುಖಿಯಾದೆನು' ಎಂಬೀ ರೀತಿಯಲ್ಲಿ ಯಾವದಾದರೊಂದು ವಿಕಲ್ಪವನ್ನು ಜನರು ತಮ್ಮ ಆತ್ಮನಲ್ಲಿ ಕಲ್ಪಿಸಿಕೊಳ್ಳುತ್ತಲೇ ಇರುವರು. ಶಾಸ್ತ್ರವು ಸುಖಿತ್ವವು ನಿನ್ನ ಸ್ವರೂಪವಲ್ಲ; ಏಕೆಂದರೆ ಅದು ಯಾವಾಗಲೂ ನಿನ್ನ ಸ್ವರೂಪಕ್ಕೆ ಅಂಟಿಕೊಂಡಿರುವದಿಲ್ಲ – ಎಂದು ತಿಳಿಸಿಕೊಡುವದರಿಂದ ಆ ವಿಕಲ್ಪವನ್ನು ತೊಲಗಿಸುತ್ತದೆ; ಹೀಗೆಯೇ ದುಃಖಿತ್ವವೆಂಬ ವಿಕಲ್ಪವನ್ನೂ ಕಳೆಯುತ್ತದೆ. ಹೀಗೆ ಆತ್ಮನಲ್ಲಿ ಯಾವ ವಿಕಲ್ಪವೂ ಇಲ್ಲವೆಂಬುದನ್ನು ತಿಳಿಸಿಕೊಡುವದರಿಂದಲೇ ಶಾಸ್ತ್ರವು ಆತ್ಮನ ವಿಷಯಕ್ಕೆ ಪ್ರಮಾಣವೆನಿಸಿರುತ್ತದೆ. ಆತ್ಮನೆಂಬ ಅರಿವು ಪ್ರತಿಯೊಂದು ಅರಿವಿನಲ್ಲಿಯೂ 'ನಾನು ಸುಖಿ' 'ನಾನು ದುಃಖಿ' ಎಂದಿಂತು ಇದ್ದುಕೊಂಡೇ ಇರುವದರಿಂದ ಆ ಜ್ಞಾನವನ್ನೇನೂ ಶಾಸ್ತ್ರವು ಉಂಟುಮಾಡಬೇಕಾಗಿಲ್ಲ.

**41. ಆತ್ಮಸ್ವರೂಪವತ್ ಅಸುಖಿತ್ವಾದ್ಯಪಿ ಸುಖಿತ್ವಾದಿಭೇದೇಷು ನಾನುವೃತ್ತೋಽಸ್ತಿ ಧರ್ಮಃ । ಯದ್ಯನುವೃತ್ತಃ ಸ್ಯಾತ್, ನಾಧ್ಯಾರೋಪಿತ ಸುಖಿತ್ವಾದಿಲಕ್ಷಣೋ ವಿಶೇಷಃ । ಯಥಾ ಉಷ್ಣತ್ವಗುಣವಿಶೇಷವತ್ಯಗ್ನೌ ಶೀತತಾ । ತಸ್ಮಾತ್ ನಿರ್ವಿಶೇಷೇ ಏವ ಆತ್ಮನಿ ಸುಖಿತ್ವಾದಯೋ ವಿಶೇಷಾಃ ಕಲ್ಪಿತಾಃ । ಯತ್ತು ಅಸುಖಿತ್ವಾದಿಶಾಸ್ತ್ರಮ್ ಆತ್ಮನಃ, ತತ್ತು ಅಸುಖಿತ್ವಾದಿವಿಶೇಷ ನಿವೃತ್ತ್ಯರ್ಥಮೇವೇತಿ ಸಿದ್ಧಮ್ ॥ ಗೌ.ಕಾ.ಭಾ. 2–31**

ಭಾವಾರ್ಥ :– ಅಸುಖಿತ್ವಾದಿಧರ್ಮವೂ ಆತ್ಮಸ್ವರೂಪದಂತೆ ಎಲ್ಲೆಲ್ಲಿಯೂ ಇದ್ದುಕೊಂಡೇಇರುವದಿಲ್ಲ. ಹಾಗಿದ್ದರೆ, ಕಲ್ಪಿತವಾದ ಸುಖಿತ್ವವೇ ಮುಂತಾದ ವಿಶೇಷವಿರುತ್ತಿರಲಿಲ್ಲ. ಬಿಸಿ ಎಂಬ ಗುಣವುಳ್ಳ ಬೆಂಕಿಯಲ್ಲಿ ತಂಪು ಹೇಗೆ ಇರುವದಿಲ್ಲವೋ ಹಾಗೆ; ಆದ್ದರಿಂದ ನಿರ್ವಿಶೇಷನೇ ಆಗಿರುವ ಆತ್ಮನಲ್ಲಿ ಸುಖಿತ್ವವೇ ಮುಂತಾದ ವಿಶೇಷಗಳು

ಕಲ್ಪಿತವಾಗಿವೆ. ಅಸುಖಿತ್ವವೇ ಮುಂತಾದವನ್ನು ತಿಳಿಸುವ ಶಾಸ್ತ್ರವಾದರೋ ಸುಖಿತ್ವಾದಿವಿಶೇಷವನ್ನು ಅಲ್ಲಗಳೆಯುವದಕ್ಕೆ ಎಂದು ಏರ್ಪಡುತ್ತದೆ.

**ವಿವರಣೆ :–** ಸುಖಿ ಎಂಬ ವಿಕಲ್ಪವನ್ನು ಅಲ್ಲಗಳೆಯುವದಕ್ಕೆ ಮಾತ್ರ ನೀನು ಸುಖಿಯಲ್ಲ ಎಂದಿದೆಯೇ ಹೊರತು, ಅಸುಖಿತ್ವವೆಂಬ ಧರ್ಮವಿದೆ ಎಂದು ಹೇಳುವದಕ್ಕಲ್ಲ. ಏಕೆಂದರೆ ಆ ಧರ್ಮವೂ ಆತ್ಮನಲ್ಲಿ ಯಾವಾಗಲೂ ಇರುವದಿಲ್ಲ. ಆತ್ಮನಲ್ಲಿ ಯಾವ ವಿಕಲ್ಪವೂ ಇರುವದಿಲ್ಲವೆಂಬುದೇ ಸಿದ್ಧಾಂತ.

* * * * *

## 6. ಶಾಸ್ತ್ರ, ಅನುಭವ, ತರ್ಕ

**42. ಜ್ಞಾತುಮಿಚ್ಛಾ ಜಿಜ್ಞಾಸಾ । ಅವಗತಿಪರ್ಯನ್ತಂ ಜ್ಞಾನಂ ಸನ್ವಾಚ್ಯಾಯಾಃ ಇಚ್ಛಾಯಾಃ ಕರ್ಮ । ಫಲವಿಷಯತ್ವಾತ್ ಇಚ್ಛಾಯಾಃ ಜ್ಞಾನೇನ ಹಿ ಪ್ರಮಾಣೇನ ಅವಗನ್ತುಮ್ ಇಷ್ಟಂ ಬ್ರಹ್ಮ । ಬ್ರಹ್ಮಾವಗತಿರ್ಹಿ ಪುರುಷಾರ್ಥಃ ನಿಃಶೇಷಸಂಸಾರಬೀಜಾವಿದ್ಯಾದ್ಯನರ್ಥನಿಬರ್ಹಣಾತ್ ॥ ಸೂ.ಭಾ. 1–1–1**

ಭಾವಾರ್ಥ :– ಜಿಜ್ಞಾಸೆ ಎಂದರೆ ಅರಿತುಕೊಳ್ಳಬೇಕೆಂಬ ಇಚ್ಛೆ. ಇಲ್ಲಿ ಇಚ್ಛೆಗೆ ವಿಷಯವಾದದ್ದು, ಅನುಭವದಲ್ಲಿ ಕೊನೆಗಾಣುವ ಜ್ಞಾನವು; ಏಕೆಂದರೆ ಇಚ್ಛೆಗೆ ಫಲವೇ ವಿಷಯವಾಗಿರುತ್ತದೆ. ಜ್ಞಾನವೆಂಬ ಪ್ರಮಾಣದಿಂದಲ್ಲವೆ, ಬ್ರಹ್ಮವನ್ನು ಅರಿತು ಕೊಳ್ಳಲಿಚ್ಛಿಸುವದು? ಬ್ರಹ್ಮದ ಅನುಭವವೇ ಪುರುಷಾರ್ಥವು; ಏಕೆಂದರೆ ಸಂಸಾರದ ಕಾರಣವಾದ ಅವಿದ್ಯೆಯೇ ಮುಂತಾದ ಅನರ್ಥವನ್ನೆಲ್ಲ ಅದು ಸ್ವಲ್ಪವೂ ಉಳಿಯದಂತೆ ನಾಶಗೊಳಿಸುತ್ತದೆ.

**ವಿವರಣೆ :–** ಈ ವಾಕ್ಯದಲ್ಲಿರುವ 'ಅವಗತಿ' ಎಂಬ ಮಾತಿಗೆ ಅನುಭವ ಎಂದು ಅರ್ಥ. ಇದನ್ನು 'ವಿಜ್ಞಾನ'ವೆಂದೂ ಕರೆಯುತ್ತಾರೆ. 'ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು' ಎಂಬ ಮೊದಲನೆಯ ವೇದಾಂತಸೂತ್ರಕ್ಕೆ ಈ ಅನುಭವವನ್ನು ಜ್ಞಾನಸಾಧನದಿಂದ ತಂದುಕೊಳ್ಳಬೇಕು ಎಂಬುದೇ ಅಭಿಪ್ರಾಯ. ಅನುಭವ ವುಂಟಾದರೆ ಅವಿದ್ಯೆ, ಕಾಮ, ಕರ್ಮ – ಎಂಬ ಸಂಸಾರಕಾರಣವಾದ ದೋಷಗಳೆಲ್ಲವೂ ತೊಲಗುವವು. ಬರಿಯ ಶಾಸ್ತ್ರಜ್ಞಾನದಿಂದ ಈ ಫಲವು ದೊರಕಲಾರದು.

**43. ಬ್ರಹ್ಮಜಿಜ್ಞಾಸೋಪನ್ಯಾಸಮುಖೇನ ವೇದಾನ್ತವಾಕ್ಯಮೀಮಾಂಸಾ ತದವಿರೋಧಿತರ್ಕೋಪಕರಣಾ ನಿಃಶ್ರೇಯಸಪ್ರಯೋಜನಾ ಪ್ರಸ್ತೂಯತೇ ॥**

**ಸೂ.ಭಾ. 1–1–1**

ಭಾವಾರ್ಥ :– ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು – ಎಂದು ಹೇಳುವ ಮೂಲಕ ವೇದಾಂತವಾಕ್ಯಮೀಮಾಂಸೆಯನ್ನು ಪ್ರಾರಂಭಮಾಡಿದೆ. ಅದಕ್ಕೆ ವಿರುದ್ಧವಲ್ಲದ ತರ್ಕವು ಉಪಕರಣವು ; ಮೊಕ್ಷವು ಫಲವು.

**ವಿವರಣೆ** :– "ಜಿಜ್ಞಾಸೆ" ಎಂದರೆ ಬ್ರಹ್ಮಾನುಭವಕ್ಕಾಗಿ ವಿಚಾರ ಮಾಡುವದು. ಜಿಜ್ಞಾಸೆಯನ್ನು ಮಾಡಬೇಕು ಎಂದು ಬಾದರಾಯಣರು ಹೇಳಿದ್ದರೂ ಈ ವಾಕ್ಯಕ್ಕೆ 'ವೇದಾಂತವಾಕ್ಯಗಳ ಮೀಮಾಂಸೆ(ವಿಚಾರ)ದ ಶಾಸ್ತ್ರವನ್ನು ಪ್ರಾರಂಭಿಸುತ್ತೇವೆ; ಇದನ್ನು ಕೇಳಬೇಕು. ಇಲ್ಲಿ ವೇದಾಂತವಾಕ್ಯಕ್ಕೆ ವಿರುದ್ಧವಲ್ಲದ ತರ್ಕವನ್ನೂ ಉಪಕರಣವಾಗಿ ಉಪಯೋಗಿಸುತ್ತೇವೆ' ಎಂಬುದು ಅರ್ಥ. ವೇದಾಂತವಾಕ್ಯದ ಅಭಿಪ್ರಾಯವನ್ನು ತರ್ಕಕ್ಕೂ ಹೊಂದಿಸಿ ವಿಚಾರಮಾಡಿ ಅನುಭವಕ್ಕೆ ತಂದುಕೊಂಡರೇ ಸಂಸಾರದ ಬಂಧದಿಂದ ಬಿಡುಗಡೆಯಾಗುತ್ತದೆ – ಎಂಬುದು ಸೂತ್ರದ ಒಟ್ಟು ಅಭಿಪ್ರಾಯ. ಅವಿರುದ್ಧತರ್ಕವೆಂದರೇನೆಂಬುದು ಮುಂದೆ ಗೊತ್ತಾಗುವದು.

**44. ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್, ಕಿಂ ತು ಶ್ರುತ್ಯಾದಯಃ, ಅನುಭವಾದಯಶ್ಚ ಯಥಾಸಂಭವಮ್ ಇಹ ಪ್ರಮಾಣಮ್ । ಅನುಭವಾವಸಾನತ್ವಾತ್ ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ ॥** **ಸೂ.ಭಾ. 1–1–1**

ಭಾವಾರ್ಥ :– ಧರ್ಮಜಿಜ್ಞಾಸೆಯಲ್ಲಿರುವಂತೆ ಬ್ರಹ್ಮಜಿಜ್ಞಾಸೆಯಲ್ಲಿ ಕೇವಲ ಶ್ರುತ್ಯಾದಿಗಳೇ ಪ್ರಮಾಣವಲ್ಲ; ಶ್ರುತ್ಯಾದಿಗಳೂ ಅನುಭವಾದಿಗಳೂ ಸಂಭವಿಸುವಷ್ಟು ಮಟ್ಟಿಗೂ ಪ್ರಮಾಣವು. ಏಕೆಂದರೆ ಬ್ರಹ್ಮಜ್ಞಾನವು ಅನುಭವದಲ್ಲಿ ಕೊನೆಗಾಣಬೇಕಾಗಿರುತ್ತದೆ, ಅದರ ವಿಷಯವು ಭೂತವಸ್ತುವಾಗಿಯೂ ಇರುತ್ತದೆ.

**ವಿವರಣೆ** :– ವೇದಾಂತದಲ್ಲಿ ಶ್ರುತಿಯು ಎಷ್ಟರಮಟ್ಟಿಗೆ ಪ್ರಮಾಣವೆಂಬುದರ ಅಭಿಪ್ರಾಯವು ಈ ವಾಕ್ಯದಿಂದ ಸ್ಪಷ್ಟವಾಗಬೇಕಾಗಿದೆ. ಕರ್ಮಗಳ ವಿಚಾರದ

ವೇದವಾಕ್ಯಗಳು ಪರೋಕ್ಷವಾಗಿರುವ – ಸತ್ತಮೇಲೆ ಸಿಕ್ಕುವ – ಫಲವನ್ನು ಕೊಡುವ ಕರ್ಮವನ್ನು ಹೇಳುತ್ತವೆ. ಕರ್ಮವನ್ನು ಮಾಡಿ ಫಲವನ್ನು ಉಂಟು ಮಾಡಿಕೊಳ್ಳಬೇಕು; ಬ್ರಹ್ಮವೆಂಬುದು ಹಾಗಲ್ಲ, ಈಗಲೆ ಇದ್ದುಕೊಂಡಿರುವ ತತ್ತ್ವವದು. ಆದ್ದರಿಂದ ಅದನ್ನು ಬರಿಯ ವಾಕ್ಯದಿಂದ ನಂಬಿದರೆ ಸಾಲದು. ಅದರ ಅನುಭವವನ್ನೂ ಮಾಡಿಕೊಳ್ಳಬೇಕು. ಆದ್ದರಿಂದಲೇ ವೇದಾಧಿಕಾರವಿಲ್ಲದವರೂ ಇತಿಹಾಸಪುರಾಣಾದಿಗಳಿಂದ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದಾಗಿರುತ್ತದೆ.

ಇನ್ನೊಂದು ಮಾತು : ಇಲ್ಲಿ ಅನುಭವವು ಪ್ರಮಾಣವೆಂದೂ, ಬ್ರಹ್ಮಜ್ಞಾನವು ಅನುಭವದಲ್ಲಿ ಕೊನೆಗಾಣತಕ್ಕದ್ದೆಂದೂ ಹೇಳಿರುವದರ ಅಭಿಪ್ರಾಯವನ್ನು ಗೊತ್ತುಮಾಡಿಕೊಳ್ಳಬೇಕಾದದ್ದು ಅವಶ್ಯವಾಗಿರುತ್ತದೆ. ವೇದಾಂತ ಶಾಸ್ತ್ರದಲ್ಲಿ ಮಾಡುವ ವಿಚಾರವೂ ಅನುಭವದ ಆಧಾರದಮೇಲೆಯೇ ಸಾಗಬೇಕಾಗಿರುತ್ತದೆ; ಆ ಅನುಭವವು **ಪ್ರಮಾಣವು**. ಕೊನೆಯಲ್ಲಿ 'ಬ್ರಹ್ಮವೇ ನನ್ನ ಆತ್ಮನು' ಎಂಬ ಅನುಭವವು ಬಂದು ವಿಚಾರವು ಮುಗಿಯಬೇಕಾಗಿರುತ್ತದೆ; ಆ ಅನುಭವವು **ಫಲವು**. ಆದ್ದರಿಂದ ಅನುಭವಕ್ಕೆ ವಿರುದ್ಧವಾಗಿ ಶ್ರುತಿಯ ವಾಕ್ಯಗಳನ್ನು ಉದಾಹರಿಸಿ ಅರ್ಥವನ್ನು ಮಾಡುವದೂ, ಅನುಭವದ ತಳಹದಿಯಿಲ್ಲದೆ ಕುರುಡುನಂಬಿಕೆಯಿಂದ ವಿಚಾರವನ್ನು ಸಾಗಿಸುವದೂ, ಬ್ರಹ್ಮವಿಷಯದ ವಿಚಾರದಲ್ಲಿ ಎಂದಿಗೂ ಫಲಕಾರಿಯಾಗಲಾರದು.

**45. ಸತ್ಸು ತು ವೇದಾನ್ತವಾಕ್ಯೇಷು.... ತದರ್ಥಗ್ರಹಣದಾರ್ಢ್ಯಾಯ ಅನುಮಾನಮಪಿ ವೇದಾನ್ತವಾಕ್ಯಾವಿರೋಧಿಪ್ರಮಾಣಂ ಭವನ್ನನಿವಾರ್ಯತೇ। ಶ್ರುತ್ಯೈವ ಚ ಸಹಾಯತ್ವೇನ ತರ್ಕಸ್ಯಾಭ್ಯುಪೇತತ್ವಾತ್॥ ಸೂ.ಭಾ. 1–1–2**

ಭಾವಾರ್ಥ :– ವೇದಾಂತವಾಕ್ಯಗಳಲ್ಲಿರುವ ಅವುಗಳ ಅರ್ಥವನ್ನು ಗಟ್ಟಿಗೊಳಿಸುವದಕ್ಕಾಗಿ ವೇದಾಂತವಾಕ್ಯಕ್ಕೆ ವಿರೋಧವಾಗದ ಅನುಮಾನವೂ ಪ್ರಮಾಣವೆಂದಾಗುವದಾದರೆ ಅದನ್ನು ನಾವು ಅಲ್ಲವೆನ್ನುವದಿಲ್ಲ; ಏಕೆಂದರೆ ಶ್ರುತಿಯೇ ತರ್ಕವನ್ನು ತನಗೆ ಸಹಾಯವಾಗಬಹುದೆಂದು ಒಪ್ಪಿರುತ್ತದೆ.

**ವಿವರಣೆ** :– ಇಲ್ಲಿ ವೇದಾಂತವಾಕ್ಯಗಳರ್ಥವು ಗಟ್ಟಿಯಾಗುವದಕ್ಕೆ ಅನುಮಾನವೂ ಆಗಬಹುದೆಂದು ಹೇಳಿರುವದನ್ನು ತಪ್ಪಾಗಿತಿಳಿದುಕೊಳ್ಳುವ ಸಂಭವವಿದೆ. ವೇದಾಂತವಾಕ್ಯಗಳು ಸ್ಪಷ್ಟವಾಗದಿರುವಂಥ ಅಭಿಪ್ರಾಯವನ್ನು

ತಿಳಿಸುವವೆಂದೂ ಆದ್ದರಿಂದ ಅವಕ್ಕೆ ಅನುಮಾನಪ್ರಮಾಣದ ಸಹಾಯವು ಬೇಕೆಂದೂ ಇದರ ಅಭಿಪ್ರಾಯವಲ್ಲ. ವೇದಾಂತವಾಕ್ಯದಲ್ಲಿ ಹೇಳಿರುವಷ್ಟರಿಂದಲೇ ಸಾಧಾರಣ ಜಿಜ್ಞಾಸುಗಳಿಗೆ ಅಭಿಪ್ರಾಯವು ಸ್ಪಷ್ಟವಾಗಿ ಮನದಟ್ಟಾಗದೆ ಇರುವಾಗ ತರ್ಕವನ್ನು ಉಪಯೋಗಿಸಿಕೊಂಡು ಅನುಭವಕ್ಕೆ ತಂದುಕೊಳ್ಳುವದಕ್ಕೆ ಪ್ರಯತ್ನಿಸಬೇಕು ಎಂಬುದೇ ಇಲ್ಲಿ ಆಚಾರ್ಯರ ಆಶಯ. ಅನುಮಾನವೆಂಬ ಶಬ್ದವನ್ನು ಅನುಮಾನಪ್ರಮಾಣವೆಂಬ ಅರ್ಥದಲ್ಲಿ ಇಲ್ಲಿ ಬಳಸಿರುವದಿಲ್ಲ. ಏಕೆಂದರೆ ಬ್ರಹ್ಮವು ಪ್ರತ್ಯಕ್ಷಾದಿಪ್ರಮಾಣಗಳಿಗೆ ವಿಷಯವಲ್ಲವೆಂದು ಆಗಲೇ ತಿಳಿಸಿ ಕೊಟ್ಟದ್ದಾಗಿರುತ್ತದೆ.

**46. ಯದಪಿ ಶ್ರವಣವ್ಯತಿರೇಕೇಣ ಮನನಂ ವಿದಧತ್ ಶಬ್ದ ಏವ ತರ್ಕಮಪಿ ಆದರ್ತವ್ಯಂ ದರ್ಶಯತಿ ಇತ್ಯುಕ್ತಮ್, ನಾನೇನ ಮಿಷೇಣ ಶುಷ್ಕತರ್ಕಸ್ಯ ಅತ್ರ ಆತ್ಮಲಾಭಃ ಸಂಭವತಿ । ಶ್ರುತ್ಯನುಗೃಹೀತ ಏವ ಹಿ ಅತ್ರ ತರ್ಕಃ ಅನುಭವಾಙ್ಗತ್ವೇನ ಆಶ್ರೀಯತೇ ॥ ಸೂ.ಭಾ. 2–1–6**

ಭಾವಾರ್ಥ :– ಶ್ರವಣವಲ್ಲದೆ ಮನನವನ್ನು ವಿಧಿಸಿರುವ ಶಾಸ್ತ್ರವೇ ತರ್ಕವನ್ನೂ ಸ್ವೀಕರಿಸಬೇಕೆಂದು ತಿಳಿಸುತ್ತಿದೆ ಎಂದಿರಲ್ಲ, ಈ ನೆಪದಿಂದ ಒಣತರ್ಕಕ್ಕೆ ಇಲ್ಲಿ ಅವಕಾಶವು ಸಿಕ್ಕಲಾರದು. ಶ್ರುತಿಯಿಂದ ಅನುಗೃಹೀತವಾಗಿರುವ ತರ್ಕವನ್ನೇ ಇಲ್ಲಿ ಅನುಭವಕ್ಕೆ ಅಂಗವಾಗಿ ಆಶ್ರಯಿಸಿರುತ್ತದೆ.

**ವಿವರಣೆ** :– ಶ್ರುತಿಯಿಂದ ಅನುಭವವೇ ಆಗಬೇಕಾಗಿರುವದರಿಂದ ಒಣತರ್ಕವನ್ನು ಇಲ್ಲಿ ಒಪ್ಪಿಲ್ಲ. ಶ್ರುತಿಯೇ ಅನುಭವಕ್ಕೆ ಅಂಗವಾಗುವ ತರ್ಕವನ್ನು ಇಲ್ಲಿ ಹೇಳಿರುತ್ತದೆ. ಆದ್ದರಿಂದ ಇಲ್ಲಿ ಯಾವಯಾವ ತರ್ಕವನ್ನು ಹೇಗೆಹೇಗೆ ಉಪಯೋಗಿಸಿಕೊಳ್ಳಬೇಕೆಂದರೆ : (1) **ಶ್ರುತ್ಯನುಗೃಹೀತತರ್ಕ**. ಇದು ಶ್ರುತಿಯಲ್ಲಿಯೇ ತಿಳಿಸಿರುವ ಸತ್ತರ್ಕ. ಇದು ಅನುಭವಕ್ಕೆ ಅಂಗವಾಗಿರುತ್ತದೆ. (2) **ಶ್ರುತ್ಯವಿರೋಧಿತರ್ಕ**. ಇದು ಶ್ರುತಿಯು ಹೇಳಿರುವ ವಾಕ್ಯವು ಅನುಭವಕ್ಕೆ ಹೊಂದುವಂತೆ ಇದೆ ಎಂಬುದನ್ನು ವಿಶದಪಡಿಸುವದಕ್ಕೆ ಉಪಯೋಗಿಸುವ ಲೌಕಿಕತರ್ಕ. ಇದೂ ಅನುಭವಕ್ಕೆ ಹೊಂದಿಕೆಯಾಗಿರಬೇಕು. (3) **ಕೇವಲತರ್ಕ**. ತರ್ಕಪ್ರಧಾನವಾಗಿದ್ದು ಶ್ರುತಿಯನ್ನು ಪ್ರಮಾಣವೆಂದು ಹಿಡಿಯುದವರ ತರ್ಕವಿದು. ಅದು ಅನುಭವಾನುಸಾರಿಯಲ್ಲವೆಂಬುದನ್ನು ಪ್ರತಿವಾದಿಯು ಒಪ್ಪಿರುವ ಅಭಿಪ್ರಾಯಗಳು ಪೂರ್ವಾಪರವಿರುದ್ಧವೆಂದು ತಿಳಿಸುವದಕ್ಕೆ ಇದನ್ನೂ ಬಳಸಬಹುದು.

* * * * *

# 7. ಅಧ್ಯಾರೋಪಾಪವಾದ

47. ಕ್ಷೇತ್ರೋಪಾಧಿಭೇದಕೃತಂ ವಿಶೇಷಜಾತಂ ಮಿಥ್ಯೈವ ಕ್ಷೇತ್ರಜ್ಞಸ್ಯ– ಇತಿ ತದಪನಯನೇನ ಜ್ಞೇಯತ್ವಮುಕ್ತಮ್ "ನ ಸತ್ತನ್ನಾಸದುಚ್ಯತೇ" ಇತಿ । ಉಪಾಧಿಕೃತಂ ಮಿಥ್ಯಾರೂಪಮಪಿ ಅಸ್ತಿತ್ವಾಧಿಗಮಾಯ ಜ್ಞೇಯಧರ್ಮವತ್ ಪರಿಕಲ್ಪ್ಯ ಉಚ್ಯತೇ "ಸರ್ವತಃ ಪಾಣಿಪಾದಮ್" ಇತ್ಯಾದಿ । ತಥಾ ಹಿ ಸಮ್ಪ್ರದಾಯವಿದಾಂ ವಚನಮ್ "ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚಂ ಪ್ರಪಞ್ಚ್ಯತೇ" ಇತಿ ॥ ಗೀ.ಭಾ. 13–13

ಭಾವಾರ್ಥ :– ಕ್ಷೇತ್ರವೆಂಬ ಬೇರೆಬೇರೆಯ ಉಪಾಧಿಗಳಿಂದ ಆಗಿರುವ ವಿಶೇಷಗಳು ಆತ್ಮನಲ್ಲಿರುವಂತೆ ಕಾಣುವ ಹುಸಿತೋರಿಕೆಯೇ ಆಗಿರುವದರಿಂದ ಅವನ್ನು ಅಲ್ಲಗಳೆದೇ ಆತ್ಮನನ್ನು ಅರಿತುಕೊಳ್ಳಬೇಕೆಂದು 'ಅದು ಸತ್ತಲ್ಲ, ಅಸತ್ತೂ ಅಲ್ಲ' ಎಂದು ತಿಳಿಸಿದ್ದಾಯಿತು. ಆ ಜ್ಞೇಯವು ಇದೆಯೆಂದು ತಿಳಿಸುವದಕ್ಕಾಗಿ ಉಪಾಧಿಕೃತವಾದ ಮಿಥ್ಯಾರೂಪವನ್ನು ಕೂಡ ಜ್ಞೇಯದ ಧರ್ಮವೆಂಬಂತೆ ಕಲ್ಪಿಸಿಕೊಂಡು "ಅದಕ್ಕೆ ಎಲ್ಲಾ ಕಡೆಯಲ್ಲಿಯೂ ಕೈಕಾಲುಗಳಿರುವವು" ಎಂದು ಮುಂತಾಗಿ ಇಲ್ಲಿ ಹೇಳಿರುತ್ತದೆ. ಇದಕ್ಕನುಗುಣವಾಗಿಯೇ ಸಂಪ್ರದಾಯವನ್ನು ಬಲ್ಲವರ ಒಂದು ವಚನವಿದೆ; "ಅಧ್ಯಾರೋಪಾಪವಾದಗಳಿಂದ ನಿಷ್ಪ್ರಪಂಚವಾದದ್ದನ್ನು ವಿವರಿಸಿ ತೋರಿಸಲಾಗುತ್ತದೆ" ಎಂಬುದೇ ಆ ವಚನ.

**ವಿವರಣೆ** :– ತತ್ತ್ವವನ್ನು ಕುರಿತು ಈವರೆಗೆ ಮಾಡಿರುವ ವಿಚಾರದಿಂದ ಇಷ್ಟು ತಿಳಿಯಬಂದಿರುತ್ತದೆ : ಇಂದ್ರಿಯಗಳು ಹೊರಗಿನ ವಿಷಯವನ್ನು ಮಾತ್ರ ತಿಳಿಯಿಸಬಲ್ಲವಾದ್ದರಿಂದ ಅವುಗಳ ಸಹಾಯದಿಂದ ಆತ್ಮತತ್ತ್ವವನ್ನು ತಿಳಿಸುವದು ಆಗಲಾರದು. ವಾಙ್ಮನಸ್ಸುಗಳಿಗೂ ಅದು ವಿಷಯವಲ್ಲವಾದ್ದರಿಂದ ಅವುಗಳೂ ಆತ್ಮತತ್ತ್ವವು 'ಇದು', 'ಇಂಥದ್ದು' ಎಂದು ಬಣ್ಣಿಸಿ ತಿಳಿಸಲಾರವು. ಆದರೆ ಇಂದ್ರಿಯಗಳು, ಮನಸ್ಸು, – ಇವೆರಡಕ್ಕಿಂತಲೂ ವಿಲಕ್ಷಣವಾಗಿರುವ ಅನುಭವ, ಅನುಭವಾನುಗುಣವಾದ ತರ್ಕ – ಇವುಗಳಿಂದಲೇ ಅದನ್ನು ಅರಿತುಕೊಳ್ಳಬಹುದು; ಆ ಸಾಧನಗಳಿಂದಲೇ ಮತ್ತೊಬ್ಬನಿಗೂ ತಿಳಿಯಿಸಿಕೊಡಬೇಕಾಗಿರುತ್ತದೆ.

ಶಾಸ್ತ್ರವಾಗಲಿ ಗುರುವಾಗಲಿ ಮಾತಿಗೆ ವಿಷಯವಲ್ಲದ್ದನ್ನು ಮಾತಿನಿಂದ ತಿಳಿಸಿಕೊಡುವದಾದರೂ ಹೇಗೆ? ಮನಸ್ಸಿಗೆ ವಿಷಯವಲ್ಲದ ಅದನ್ನು ಶಿಷ್ಯನು

ಮನಸ್ಸಿನಿಂದ ಅರಿತುಕೊಳ್ಳುವದಾದರೂ ಹೇಗೆ? – ಎಂಬ ಶಂಕೆಗೆ ಈವರೆಗೆ ಕೊಟ್ಟಿರುವ ಉತ್ತರವೇನೆಂದರೆ, ಪರಮಾರ್ಥತತ್ತ್ವವು ಜಿಜ್ಞಾಸುವಿನ ಆತ್ಮನೇ ಆಗಿರುವದರಿಂದಲೂ ಅಪರೋಕ್ಷವಾದ ಚೈತನ್ಯಸ್ವರೂಪವೇ ಆಗಿರುವದರಿಂದಲೂ ಅದನ್ನು ಅರಿಯುವದಕ್ಕೆ ಯಾವ ಪ್ರಮಾಣವೂ ಬೇಕಿರುವದಿಲ್ಲ. ಅದು ಸ್ವತಃಸಿದ್ಧವೇ ಆಗಿರುತ್ತದೆ. ಹೀಗಿದ್ದರೂ ಶ್ರುತಿಯು ಆತ್ಮನಲ್ಲಿ ಹುಟ್ಟುಗಟ್ಟಲಾಗಿರುವ ಭೇದವನ್ನು ಅಲ್ಲಗಳೆಯುವದರಿಂದಲೇ ಅದನ್ನು ತಿಳಿಸಿಕೊಡುತ್ತದೆ; ಅಷ್ಟರಿಂದಲೇ ಅದು ಪ್ರಮಾಣವೆನಿಸಿರುತ್ತದೆ. ಆತ್ಮನಲ್ಲಿ ಯಾವಯಾವ ಅನಾತ್ಮರೂಪವಾದ ವಿಕಲ್ಪವು ಅಜ್ಞಾನದಿಂದ ಆರೋಪಿತವಾಗಿದೆಯೋ ಆ ವಿಕಲ್ಪವನ್ನೆಲ್ಲ ಅಲ್ಲಗಳೆಯುವದೇ ಆತ್ಮನನ್ನು ತಿಳಿಸುವದಕ್ಕೆ ಮಾರ್ಗ. ಆತ್ಮನು ನಮ್ಮ ಸ್ವರೂಪವೇ ಆಗಿರುವದರಿಂದ ಅವನಲ್ಲಿ ಹುಟ್ಟುಗಟ್ಟಿರುವ ಅನಾತ್ಮಾಂಶವನ್ನು ನಮ್ಮ ಆತ್ಮನಲ್ಲವೆಂದು ನಿಶ್ಚಯಿಸಿಕೊಳ್ಳುವದರಿಂದಲೇ ಅವನ ಯಥಾರ್ಥಜ್ಞಾನವನ್ನು ಮಾಡಿಕೊಳ್ಳಬೇಕು. ಹೀಗೆ ಆಗುವ ಆತ್ಮನ ಅನುಭವವೇ ಮುಖ್ಯಾರ್ಥದಲ್ಲಿ ಆತ್ಮಜ್ಞಾನವೆನಿಸುವದು. ಬುದ್ಧಿಪ್ರತ್ಯಯದ ರೂಪಕ್ಕೆ ಅದನ್ನು ತಿರುಗಿಸಿಕೊಳ್ಳುವದು ಅದನ್ನು ವ್ಯವಹಾರದಲ್ಲಿ ಬಳಸುವದಕ್ಕೆ ಮಾತ್ರವೇ ಆಗಿದೆ.

ಶಾಸ್ತ್ರವಾಗಲಿ ಗುರುಗಳಾಗಲಿ ಬ್ರಹ್ಮತತ್ತ್ವವನ್ನು ತಿಳಿಸಿಕೊಡುವದಕ್ಕೆ ಬಳಸುತ್ತಿರುವ ಒಂದಾನೊಂದು ಪ್ರಕ್ರಿಯೆಯನ್ನು ಇಲ್ಲಿ ತಿಳಿಸಲಾಗಿದೆ. ನಿಜವಾಗಿ ಆತ್ಮತತ್ತ್ವವು ನಿರ್ವಿಶೇಷಬ್ರಹ್ಮವೇ ಆಗಿರುವದರಿಂದ ಅದನ್ನು ಯಾವ ಮಾತೂ ಹೇಗೂ ವಿಷಯವಾಗಿ ಮಾಡಿಕೊಂಡು 'ಇದು' ಎಂದು ತಿಳಿಸಲಾರದೆಂಬುದು ನಿಜವಾದರೂ ಅದನ್ನು ತಿಳಿಸಿಕೊಡುವದಕ್ಕೆ ಶಾಸ್ತ್ರದಲ್ಲಿ ಒಂದಾನೊಂದು ಪ್ರಕಾರವನ್ನು ಬಳಸಿರುತ್ತದೆ. ಅದಕ್ಕೆ **'ಅಧ್ಯಾರೋಪಾಪವಾದಪ್ರಕ್ರಿಯೆ'** ಎಂದು ಹೆಸರು. ಆತ್ಮತತ್ತ್ವವು ಅತ್ಯಂತವಾಗಿ ಯಾವ ಧರ್ಮವೂ ಇಲ್ಲದ ನಿರ್ವಿಶೇಷವಸ್ತುವೇ ಆದರೂ ಅದರಲ್ಲಿಯೇ ಎಲ್ಲವೂ ಕಲ್ಪಿತವಾಗಿರುವದರಿಂದ ಅವುಗಳಲ್ಲಿ ಕೆಲಕೆಲವನ್ನು ಅದಕ್ಕೆ ಸೇರಿರುವಂತೆ ಕಲ್ಪಿಸಿಕೊಂಡು ಮತ್ತೆ ಕೆಲವನ್ನು ಅಲ್ಲಗಳೆಯುವದರಿಂದ ಆತ್ಮಸ್ವರೂಪದ ಜ್ಞಾನಕ್ಕೆ ಬಹಳ ಹತ್ತಿರವಾದ ಅರಿವು ಏರ್ಪಡುತ್ತದೆ; ಆ ಅರಿವು ಉಂಟಾದಬಳಿಕ ಮೊದಲು ಕಲ್ಪಿಸಿಕೊಂಡ ಧರ್ಮವನ್ನೂ ನಿಜವಾಗಿ ಆತ್ಮನದಲ್ಲವೆಂದು ತೋರಿಸಿಕೊಟ್ಟರೆ ಆತ್ಮಸ್ವರೂಪದ ಅನುಭವವು ಸುಲಭವಾಗಿ ಆಗಿಬಿಡುತ್ತದೆ. ಈ

ಉಪಾಯವನ್ನು ವೇದಾಂತಾರ್ಥಸಂಪ್ರದಾಯವನ್ನು ಬಲ್ಲ ಆಚಾರ್ಯರುಗಳೆಲ್ಲರೂ ಬಳಸಿಕೊಂಡೇ ಬೋಧಿಸುತ್ತಿರುತ್ತಾರೆ.

ಇದರ ಸ್ವರೂಪವನ್ನು ಪ್ರಕೃತಗೀತಾವಾಕ್ಯದ ವ್ಯಾಖ್ಯಾನದಿಂದಲೇ ತಿಳಿಸುವೆವು. ಬ್ರಹ್ಮವು ಅತೀಂದ್ರಿಯವಾಗಿರುವದರಿಂದ 'ಇದೆ' 'ಇಲ್ಲ' – ಎಂಬ ಪ್ರತ್ಯಯಗಳಿಗೆ ವಿಷಯವಾಗಲಾರದು ಎಂದು ಹಿಂದೆ (ಶ್ಲೋಕ 12ರಲ್ಲಿ) ಹೇಳಿದೆ. ಇದೇ ಅದರ ಪರಮಾರ್ಥಸ್ವರೂಪವಾದರೂ ಇದೆಯೆಂದಾಗಲಿ ಇಲ್ಲವೆಂದಾಗಲಿ ಹೇಳುವದಕ್ಕೆ ಬಾರದ ವಸ್ತುವೊಂದಿರಲಾರದು – ಎಂಬ ಶಂಕೆಯನ್ನು ತಳ್ಳಿಹಾಕುವದಕ್ಕಾಗಿ ದೇಹವೆಂಬ ಕ್ಷೇತ್ರಧರ್ಮವಾಗಿರುವ ಕೈ, ಕಾಲು – ಮುಂತಾದ ಅವಯವಗಳು ಅದರ ಸಂನಿಧಿಯಿಂದಲೇ ತಮ್ಮತಮ್ಮ ಕಾರ್ಯವನ್ನುಮಾಡುವದಕ್ಕೆ ಶಕ್ತವಾಗಿರುವದರಿಂದ ಜ್ಞೇಯದ ಧರ್ಮಗಳೇ ಎಂದು ಕಲ್ಪಿಸಿರುತ್ತದೆ; ಇದು. **'ಅಧ್ಯಾರೋಪ'**. ಆದರೆ ಈ ಪಾಣಿಪಾದಾದೀಂದ್ರಿಯಗಳು ನಿಜವಾಗಿಯೂ ಆತ್ಮತತ್ತ್ವಕ್ಕೇ ಸೇರಿರುತ್ತವೆ ಎಂದು ಯಾರಾದರೂ ಭಾವಿಸಿ ಕೊಂಡಾರೆಂದು **'ಸರ್ವೇಂದ್ರಿಯ ವಿವರ್ಜಿತಮ್'** ಇಂದ್ರಿಯಗಳ ವ್ಯಾಪಾರವುಳ್ಳದ್ದರಂತೆ ಕಂಡರೂ ನಿಜವಾಗಿ ಅದಕ್ಕೆ ಯಾವ ಇಂದ್ರಿಯಗಳೂ ಇಲ್ಲ – ಎಂದು (ಮೊದಲು ಹೇಳಿದ್ದನ್ನು) ಸ್ಪಷ್ಟವಾಗಿ ಅಲ್ಲಗಳೆದಿದೆ; ಇದು **'ಅಪವಾದ'**. ಹೀಗೆ ಹೇಳಿದ್ದರಿಂದ ಇಂದ್ರಿಯಗಳ ಸಂಪರ್ಕವಿಲ್ಲದ ಆತ್ಮತತ್ತ್ವದ ಅರಿವು ಶ್ರೋತೃವಿಗೆ ಆಗುತ್ತದೆ.

ಇಲ್ಲಿ 'ಅಧ್ಯಾರೋಪ'ವೆಂಬ ಶಬ್ದದ ಕೃತ್ಯವನ್ನು ಸ್ವಲ್ಪ ವಿಮರ್ಶ ಪೂರ್ವಕವಾಗಿ ತಿಳಿದುಕೊಳ್ಳತಕ್ಕದ್ದಿದೆ. ಏಕೆಂದರೆ 'ಅಧ್ಯಾರೋಪ'ವೆಂದರೆ ಸಾಮಾನ್ಯವಾಗಿ ಅದರ ಧರ್ಮವಲ್ಲದ್ದನ್ನು ಅದರ ಧರ್ಮವೆಂದು ಕಲ್ಪಿಸಿ ತಿಳಿಯುವದು – ಎಂದರ್ಥ. ದೂರದಲ್ಲಿರುವ ಹಗ್ಗವನ್ನು ಹಾವೆಂದು ತಿಳಿಯುವಾಗ ಹಗ್ಗದಲ್ಲಿ ಸರ್ಪತ್ವವನ್ನು 'ಅಧ್ಯಾರೋಪಿಸಲಾಗಿದೆ' ಎನ್ನುತ್ತಾರೆ. ಹಗ್ಗವು ಹಾವಲ್ಲದಿದ್ದರೂ ಭ್ರಾಂತಿಯಿಂದ ಅದನ್ನು ಹಾವೆಂದು ಭಾವಿಸಿಕೊಳ್ಳುವದನ್ನೇ ಅಧ್ಯಾರೋಪವೆನ್ನುವರು. ಆದರೆ ಶಾಸ್ತ್ರಕ್ಕಾಗಲಿ ತತ್ತ್ವಜ್ಞಾನಿಯಾದ ಗುರುವಿಗಾಗಲಿ ಭ್ರಾಂತಿಯಾಗುವ ಸಂಭವವೇನೂ ಇಲ್ಲ. ಆದ್ದರಿಂದ ತತ್ತ್ವವನ್ನು ಮನದಟ್ಟುಮಾಡಿಕೊಡುವದಕ್ಕಾಗಿ ಅದರಲ್ಲಿಲ್ಲದ ಕೆಲವು ಧರ್ಮಗಳನ್ನು ಅದಕ್ಕೆ

ಸೇರಿರುವಂತೆ ಕಲ್ಪಿಸಿಕೊಂಡು ಶಾಸ್ತ್ರವೂ ಗುರುವೂ ಬೋಧಿಸುತ್ತಾರೆ. ಅದು ತತ್ತ್ವವನ್ನು ತಿಳಿಸಿಕೊಡುವದಕ್ಕೆ ಉಪಾಯವೇ ಹೊರತು ಬೇರೆಯಲ್ಲ.

ಲೌಕಿಕವಿದ್ಯೆಯನ್ನು ಬೋಧಿಸುವ ಗುರುಗಳೂ ಈ ಪ್ರಕ್ರಿಯೆಯನ್ನು ಉಪಯೋಗಿಸುತ್ತಿರುತ್ತಾರೆ. ಇದು ಹೇಗೆಂಬುದನ್ನು ಬೃಹದಾರಣ್ಯಕದಲ್ಲಿ ಹೀಗೆಂದು ವಿವರಿಸಿದೆ :

"ಹೇಗೆ ಒಂದರಿಂದ ಪರಾರ್ಧದವರೆಗಿನ ಸಂಖ್ಯೆಯ ಸ್ವರೂಪವನ್ನು ತಿಳಿಸುವದಕ್ಕಾಗಿ ಗೆರೆಯನ್ನು ಅಧ್ಯಾರೋಪಣೆಮಾಡಿ 'ಇದು ಒಂದು ಗೆರೆ', 'ಇದು ಹತ್ತು, ಇದು ನೂರು', 'ಇದು ಸಾವಿರ' ಎಂದು ತಿಳಿಸಿ ಸಂಖ್ಯೆಯ ಸ್ವರೂಪವನ್ನು ತಿಳಿಸುತ್ತಾರೋ, ಸಂಖ್ಯೆ ಎಂದರೆ ಗೆರೆಯೆಂದೇ ಹೇಗೆ ತಿಳಿಸುವದಿಲ್ಲವೋ, ಅಥವಾ ಹೇಗೆ ಅಕಾರವೇ ಮುಂತಾದ ಅಕ್ಷರಗಳನ್ನು ತಿಳಿಸಿಕೊಡುವವರು ಕಾಗದ, ಮಷಿಯಗೆರೆ – ಮುಂತಾದವುಗಳ ಸಂಯೋಗವೆಂಬ ಉಪಾಯವನ್ನು ಇಟ್ಟುಕೊಂಡು ವರ್ಣಗಳ ತತ್ತ್ವವನ್ನು ಮಾತ್ರ ತಿಳಿಸಿಕೊಡುತ್ತಾರೋ, ಅಕ್ಷರಗಳಿಗೆ ಕಾಗದ, ಮಷಿ – ಇವೇ ಎಂದು ಹೇಳುವದಿಲ್ಲವೋ ಹಾಗೆಯೇ ಇಲ್ಲಿ ಸೃಷ್ಟಿಯೇ ಮುಂತಾದ ಅನೇಕೋಪಾಯಗಳನ್ನು ಇಟ್ಟುಕೊಂಡು ಬ್ರಹ್ಮತತ್ತ್ವವೊಂದನ್ನೇ ಹೇಳಲಾಗಿದೆ. ಆಮೇಲೆ ಕಲ್ಪಿತವಾದ ಆ ಉಪಾಯವನ್ನು ಕಳೆದುಹಾಕುವದಕ್ಕಾಗಿ 'ಇದಲ್ಲ', 'ಅದಲ್ಲ' ಎಂದು ತತ್ತ್ವವನ್ನೇ ಉಪಸಂಹಾರ ಮಾಡುತ್ತದೆ." ಬೃ. ಭಾ. 4–5–25.

ಅದ್ವೈತತತ್ತ್ವವು ತನಗೆರಡನೆಯದಿಲ್ಲದ ಒಂದೇ ತತ್ತ್ವವಾಗಿದ್ದರೂ ಅದರಲ್ಲಿ 'ಗುರು', 'ಶಾಸ್ತ್ರ', 'ಶಿಷ್ಯ' – ಎಂಬ ಭೇದವನ್ನು ಕಲ್ಪಿಸಿಕೊಂಡು ತತ್ತ್ವವನ್ನು ತಿಳಿಸಿಕೊಡಲಾಗುತ್ತದೆ. ಹಗ್ಗವನ್ನು ಹಾವೆಂದು ವಿಕಲ್ಪಿಸುವಾಗ ಆ ಹಾವಿಗೆ ಹೆಡೆ, ಕಣ್ಣು, ಬಾಲ – ಮುಂತಾದ ವಿಕಲ್ಪಗಳೂ ಇರುವಂತೆ ತೋರಿದರೂ ಅವು ನಿಜವಾಗಿರುವದಿಲ್ಲವಲ್ಲವೆ? ಹಾಗೆಯೇ ಪರಮಾರ್ಥದೃಷ್ಟಿಯಿಂದ ನೋಡುವಾಗ ಗುರುಶಾಸ್ತ್ರಾದಿವಿಕಲ್ಪವೆಲ್ಲವೂ ಒಂದೇ ಆತ್ಮತತ್ತ್ವವಾಗಿರುತ್ತದೆ. ಆ ತತ್ತ್ವದಲ್ಲಿ 'ತಿಳಿಯಬೇಕಾದ ತತ್ತ್ವ', 'ತಿಳಿಯುವವನಾಗಿರುವ ಅಜ್ಞಾನಿಯಾದ ಶಿಷ್ಯ', "ತತ್ತ್ವದ ತಿಳಿವು" ಎಂಬೀ ಭೇದವೇನೂ ನಿಜವಾಗಿ ಇರುವದಿಲ್ಲ; 'ತತ್ತ್ವವನ್ನು ತಿಳಿಸಿಕೊಡುವ ಗುರು', ಅದನ್ನು 'ತಿಳಿಯಲಿರುವ ಶಿಷ್ಯ', ತಿಳಿಸುವದಕ್ಕೆ

ಸಾಧನವಾಗಿರುವ ಶಾಸ್ತ್ರ' ಎಂಬ ಭೇದವೂ ಇರುವದಿಲ್ಲ. ಅದೆಲ್ಲವೂ ತನಗೆರಡನೆಯದಿಲ್ಲದ ಅದ್ವೈತವೇ ಆಗಿರುತ್ತದೆ. ಆದರೂ ವ್ಯವಹಾರದೃಷ್ಟಿಯಿಂದ ತತ್ತ್ವವನ್ನು ತಿಳಿಸಿಕೊಡುವದಕ್ಕೆ ಉಪಾಯವಾಗಿ ಈ ದ್ವೈತವು ನಿಜವಾಗಿರುವಂತೆ ಇಟ್ಟುಕೊಂಡೇ ಶಾಸ್ತ್ರವೂ ಗುರುವೂ ಬೋಧಿಸುತ್ತಾರೆ. ಉಪದೇಶಾವಸ್ಥೆಯಲ್ಲಿ ಕಾಣಬರುವ ಶಾಸ್ತ್ರಶಿಷ್ಯಾದಿಭೇದವು ಸತ್ಯವೆಂದೇ ಶಿಷ್ಯನು ಬಗೆಯುತ್ತಾನೆ; ಆದರೆ ಇದೆಲ್ಲ ಉಪದೇಶಕ್ಕಾಗಿ ಕಲ್ಪಿಸಿಕೊಂಡದ್ದು ಎಂಬುದು ಶಾಸ್ತ್ರಕ್ಕೂ ಗುರುವಿಗೂ ಸಂಮತವಾಗಿರುತ್ತದೆ. ಶಿಷ್ಯನಿಗೆ ತತ್ತ್ವವು ತಿಳಿದಬಳಿಕ ಅವನಿಗೂ ಈ ದ್ವೈತವಿರುವದಿಲ್ಲವೆಂಬುದು ಮನದಟ್ಟಾಗುವದು. **"ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ"** (ಗೌ. ಕಾ. 1–18) ಎಂಬ ಕಾರಿಕಾಭಾಗಕ್ಕೆ ಇದೇ ಅರ್ಥ.

**48. ಕೇಚಿತ್ತು ಪಣ್ಡಿತಂಮನ್ಯಾ ನಿರಾಕಾರತ್ವಾತ್ ಆತ್ಮವಸ್ತುನೋಽಪೈತಿ ಬುದ್ಧಿಃ, ಅತೋ ದುಃಸಾಧ್ಯಾ ಸಮ್ಯಗ್ಜ್ಞಾನನಿಷ್ಠಾ – ಇತ್ಯಾಹುಃ । ಸತ್ಯಮೇವಮ್, ಗುರುಸಂಪ್ರದಾಯರಹಿತಾನಾಮ್ ಅಶ್ರುತವೇದಾನ್ತಾನಾಮ್ ಅತ್ಯನ್ತ ಬಹಿರ್ವಿಷಯಾಸಕ್ತಬುದ್ಧೀನಾಂ ಸಮ್ಯಕ್ಪ್ರಮಾಣೇಷು ಅಕೃತಶ್ರಮಾಣಾಮ್ । ತದ್ವಿಪರೀತಾನಾಂ ತು ಲೌಕಿಕಗ್ರಾಹ್ಯಗ್ರಾಹಕದ್ವೈತವಸ್ತುನಿ ಸದ್ಬುದ್ಧಿರ್ನಿತರಾಂ ದುಃಸಂಪಾದ್ಯಾ, ಆತ್ಮಚೈತನ್ಯವ್ಯತಿರೇಕೇಣ ವಸ್ತ್ವನ್ತರಸ್ಯ ಅನುಪಲಬ್ಧೇಃ ॥**

**ಗೀ.ಭಾ. 18–50.**

ಭಾವಾರ್ಥ :– ತಾವು ಪಂಡಿತರೆಂದು ತಿಳಿದುಕೊಂಡಿರುವ ಕೆಲವರು ವಾದಿಗಳು 'ನಿರಾಕಾರವಾಗಿರುವದರಿಂದ ಆತ್ಮವಸ್ತುವನ್ನು ಬುದ್ಧಿಯು ಅರಿಯಲಾರದು. ಆದ್ದರಿಂದ ಜ್ಞಾನನಿಷ್ಠೆಯು ಸಾಧ್ಯವಲ್ಲ' ಎನ್ನುತ್ತಿರುವರು. ನಿಜ, ಗುರುಸಂಪ್ರದಾಯರಹಿತರೂ ವೇದಾಂತಶ್ರವಣವಿಲ್ಲದವರೂ ಅತ್ಯಂತವಾಗಿ ಹೊರಗಿನ ವಿಷಯಗಳಲ್ಲಿಯೇ ಆಸಕ್ತಿಯಿರುವ ಬುದ್ಧಿಯವರೂ ಆಗಿ ಪ್ರಮಾಣಗಳ ವಿಷಯವನ್ನು ಚೆನ್ನಾಗಿ ಅರಿತುಕೊಳ್ಳದೆ ಇರುವವರಿಗೆ ಹಾಗೆಯೇ ಸರಿ. ಅದಕ್ಕೆ ವಿರುದ್ಧವಾಗಿರುವವರಿಗಾದರೋ ಗ್ರಾಹ್ಯಗ್ರಾಹಕರೂಪವಾಗಿರುವ ದ್ವೈತವಸ್ತು ಇದೆ ಎಂಬ ತಿಳಿವಳಿಕೆಯೇ ಆಗುವದು ಕಷ್ಟ. ಏಕೆಂದರೆ ಆತ್ಮಚೈತನ್ಯಕ್ಕಿಂತ ಬೇರೆಯ ವಸ್ತುವೇ ಅವರಿಗೆ ಕಾಣುವದಿಲ್ಲ.

**ವಿವರಣೆ :–** ಆದ್ದರಿಂದ ಜ್ಞಾನಿಯ ದೃಷ್ಟಿಯಲ್ಲಿ ದ್ವೈತವು ಇಲ್ಲವೇ ಇಲ್ಲ. ಅದನ್ನು ಅರಿಯುವದೆಂಬ ಮಾತಿಗೂ ಅರ್ಥವೇ ಇಲ್ಲ. ಆದರೆ ಲೋಕದ ಜನರಿಗೆ ಯಾವದಾದರೊಂದು ವಸ್ತುವನ್ನು ಅರಿಯಬೇಕಾದರೆ ಆ ಜ್ಞೇಯವಾದ ವಸ್ತುವು "ಇಂಥದ್ದು" ಎಂದು ತಿಳಿಯುವದಕ್ಕೆ ಅನುಕೂಲವಾಗುವಂತೆ ಅದಕ್ಕೆ ನಾಮರೂಪಗಳು ಇರಬೇಕು. ಆಗ ಬುದ್ಧಿಯು ಆ ವಸ್ತುವನ್ನು ಇಂಥದ್ದೆಂದು ತಿಳಿಯುತ್ತದೆ. ಆದರೆ ಆತ್ಮನಿಗೆ "ಇಂಥವನು" ಎಂಬ ಆಕಾರವಿಲ್ಲ. ಬುದ್ಧಿಗೂ ಆಕಾರವಿಲ್ಲವಲ್ಲ ! – ಎಂದು ಅವರಿಗೆ ಸಂಶಯವಾಗುವದು ಸ್ವಾಭಾವಿಕವಾಗಿದೆ. ಈ ಸಂಶಯವು ಕೆಲವರು ವಾದಿಗಳನ್ನೂ ಕಾಡುತ್ತಿರುತ್ತದೆ; ಅಂಥವರನ್ನು 'ಪಂಡಿತ ಮನ್ಯರು' ಎಂದು ಆಚಾರ್ಯರು ಇಲ್ಲಿ ಹಾಸ್ಯಮಾಡಿರುತ್ತಾರೆ.

**49. ಅವಿದ್ಯಾಕಲ್ಪಿತನಾಮರೂಪವಿಶೇಷಾಕಾರಾಪಹೃತಬುದ್ಧೀನಾಮ್ ಅತ್ಯನ್ತಪ್ರಸಿದ್ಧಂ ಸುವಿಜ್ಞೇಯಂ ಆಸನ್ನತರಮ್ ಆತ್ಮಭೂತಮಪಿ ಅಪ್ರಸಿದ್ಧಮ್, ದುರ್ವಿಜ್ಞೇಯಮ್ ಅತಿದೂರಮ್ ಅನ್ಯದಿವ ಚ ಪ್ರತಿಭಾತ್ಯವಿವೇಕಿನಾಮ್ । ಬಾಹ್ಯಾಕರನಿವೃತ್ತ ಬುದ್ಧೀನಾಂ ತು ಲಬ್ಧ ಗುರ್ವಾತ್ಮಪ್ರಸಾದಾನಾಂ ನಾತಃಪರಂ ಸುಖಂ ಸುಪ್ರಸಿದ್ಧಂ ಸುವಿಜ್ಞೇಯಂ ಸ್ವಾಸನ್ನತರಮಸ್ತಿ ॥ ಗೀ. ಭಾ. 18–50.**

ಭಾವಾರ್ಥ :– ಅತ್ಯಂತಪ್ರಸಿದ್ಧವೂ, ತಿಳಿಯುವದಕ್ಕೆ ಬಹುಸುಲಭವೂ, ತೀರ ಹತ್ತಿರವೂ ತಮ್ಮ ಸ್ವರೂಪವೇ ಆಗಿರುವದೂ ಆಗಿದ್ದರೂ ಅವಿದ್ಯಾಕಲ್ಪಿತವಾದ ನಾಮರೂಪ ಗಳೆಂಬ ಬೇರೆಬೇರೆಯ ಆಕಾರಗಳನ್ನು ನೋಡುವದರಿಂದ ಬುದ್ಧಿಯನ್ನು ಕಳೆದುಕೊಂಡ ಅವಿವೇಕಿಗಳಿಗೆ ತತ್ತ್ವವು ಅಪ್ರಸಿದ್ಧ, ತಿಳಿಯುವದಕ್ಕಾಗದ್ದು, ಅತಿದೂರದಲ್ಲಿರುವದು, ತಮಗಿಂತ ಬೇರೆಯಾದದ್ದು – ಎಂದು ಕಾಣುತ್ತಿರುತ್ತದೆ. ಹೊರಗಿನ ಆಕಾರಗಳಿಂದ ಹಿಂದಿರುಗಿದ ಬುದ್ಧಿಯುಳ್ಳವರಾಗಿ ಗುರು, ಪರಮಾತ್ಮ – ಇವರ ಪ್ರಸಾದವನ್ನು ಪಡೆದುಕೊಂಡಿರು ವವರಿಗಾದರೆ ಆತ್ಮನಿಗಿಂತ ಸುಲಭವೂ ಸುಪ್ರಸಿದ್ಧವೂ ಸುವಿಜ್ಞೇಯವೂ ಅತ್ಯಂತ ಸಮೀಪದಲ್ಲಿರುವದೂ ಮತ್ತೆಯಾವದೂ ಇರುವದಿಲ್ಲ.

**ವಿವರಣೆ :–** ಹಿಂದಿನ ವಾಕ್ಯಕ್ಕೆ ನಾವು ಬರೆದಿರುವ ವಿವರಣೆಯಿಂದಲೇ ಈ ಎರಡು ವಾಕ್ಯಗಳ ಅಭಿಪ್ರಾಯವು ಸ್ಪಷ್ಟವಾಗಿ ತಿಳಿಯುವಂತಿದೆ.

* * * * *

# 8. ಅಧ್ಯಾಸವೂ ಅಧ್ಯಾರೋಪಾಪವಾದನ್ಯಾಯವೂ

**50. ತಮೇತಮ್ ಏವಂಲಕ್ಷಣಮ್ ಅಧ್ಯಾಸಂ ಪಣ್ಡಿತಾ "ಅವಿದ್ಯಾ" ಇತಿ ಮನ್ಯನ್ತೇ; ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಮಾಹುಃ॥**

**ಅಧ್ಯಾ. ಭಾ.**

**ಭಾವಾರ್ಥ :– ಈವರೆಗೆ ಹೇಳಿರುವ ಈ ಲಕ್ಷಣದ ಅಧ್ಯಾಸವನ್ನು ಪಂಡಿತರು 'ಅವಿದ್ಯೆ' ಎಂದು ತಿಳಿಯುತ್ತಾರೆ; ಅದನ್ನು ವಿವೇಚಿಸಿ ವಸ್ತುವಿನ ಸ್ವರೂಪವನ್ನು ಹೀಗೇ ಎಂದು ಗೊತ್ತುಪಡಿಸಿಕೊಳ್ಳುವದನ್ನು 'ವಿದ್ಯೆ' ಎಂದು ಕರೆಯುತ್ತಾರೆ.**

**ವಿವರಣೆ :–** ಆತ್ಮನು **ಪರಮಾರ್ಥಸತ್ಯವು,** ಅನಾತ್ಮವು ಅನೃತ, ಮಿಥ್ಯೆ ಬರಿಯ ಹುಸಿತೋರಿಕೆ. ಆತ್ಮನು ಹುಸಿತೋರಿಕೆಗಳನ್ನೆಲ್ಲ ತನ್ನ ಸ್ವರೂಪವಾದ ಚೈತನ್ಯದಿಂದ ಬೆಳಗುವ **ವಿಷಯಿ** ; ಅನಾತ್ಮವೆಲ್ಲವೂ ಆತ್ಮಚೈತನ್ಯದಿಂದಲೇ ತೋರಿಕೊಂಡು ವ್ಯವಹಾರಕಾಲಕ್ಕೆ ಇದೆಯೆನ್ನಿಸಿಕೊಳ್ಳುವ **ವಿಷಯ**. ಆತ್ಮನು ಎಲ್ಲಕ್ಕೂ ಸಾಕ್ಷಿಯಾಗಿದ್ದರೂ ವ್ಯವಹಾರದಲ್ಲಿ ಅವನನ್ನು 'ನಾನು' ಎಂದೇ ಮನದಂದುಕೊಳ್ಳಬೇಕಾಗಿರುತ್ತದೆ, ಅವನನ್ನು 'ಇದು' ಎಂದು ಜ್ಞಾನಕ್ಕೆ ವಿಷಯವಾಗಿ ಮಾಡಿಕೊಳ್ಳುವದಕ್ಕೆ ಎಂದಿಗೂ ಆಗುವದಿಲ್ಲ; ಅನಾತ್ಮವು 'ಇದು' ಎನ್ನಿಸಿಕೊಳ್ಳುವದಕ್ಕೇ ತಕ್ಕದ್ದಾಗಿರುತ್ತದೆ. ಹೀಗೆ ಇವು ಒಂದಕ್ಕೊಂದು ಅತ್ಯಂತ ವಿರುದ್ಧವಾಗಿರುವ ಸ್ವಭಾವವುಳ್ಳವಾದರೂ ವಿಷಯವಾದ ಅನಾತ್ಮವನ್ನು 'ನಾನು' 'ನನ್ನದು' ಎನ್ನುವದು ಲೋಕದ ಜನರ ಸ್ವಭಾವವು. ಈ ತಪ್ಪುತಿಳಿವಳಿಕೆಯೇ **ಅವಿದ್ಯೆ**. ಇದನ್ನು ಮಿಥ್ಯಾಜ್ಞಾನ ಭ್ರಾಂತಿ – ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಈ ವಿಷಯವನ್ನು ಹಿಂದೆ (ಖಂ. 24ರಲ್ಲಿ) ಪ್ರಾಸಂಗಿಕವಾಗಿ ಹೇಳಿರುತ್ತದೆ.

ಇದು 'ಅವಿದ್ಯೆ' (ತಪ್ಪುತಿಳಿವಳಿಕೆ) ಎಂದು ವೇದಾಂತವಿಜ್ಞಾನವಿರುವ ಪಂಡಿತರಿಗೆ ಮಾತ್ರ ತಿಳಿದಿರುತ್ತದೆ. ಮಿಕ್ಕವರೆಲ್ಲರೂ ಚಿನ್ಮಾತ್ರನಾಗಿರುವ ಸಾಕ್ಷಿ ರೂಪನಾದ ಆತ್ಮ, ಅಂತಃಕರಣದಲ್ಲಿ ಆಗುವ ನಾನು ಎಂಬ ವೃತ್ತಿ – ಇವೆರಡನ್ನೂ ಕಲೆಬೆರಕೆಮಾಡಿಕೊಂಡು 'ನಾನು' ಎಂಬುದೇ ಆತ್ಮನು ಎಂದು ಬಗೆಯುತ್ತಾರೆ. ನಿಜವಾಗಿ ನೋಡಿದರೆ **ಈ ನಾನು ಎಂಬುದು ಅಹಂಪ್ರತ್ಯಯಕ್ಕೆ ವಿಷಯವಾಗಿರುವ ಕರ್ತೃಭೋಕ್ತೃರೂಪ; ಸಾಕ್ಷಿಯು ಇದಕ್ಕಿಂತ ಬೇರೆಯಾಗಿರುತ್ತದೆ.** ಸಾಕ್ಷಿಯು

ಸ್ವತಂತ್ರವಾಗಿರುವ ಸತ್ಯವಸ್ತುವೆಂದೂ ನಾನು ಎಂಬ ಕರ್ತೃರೂಪವು ಅದರಲ್ಲಿ **ಅಧ್ಯಾರೋಪಿತ,** ಹುಟ್ಟುಗಟ್ಟಿದ್ದು – ಎಂದೂ ತೋರಿಸಿ ಕೊಡುವದಕ್ಕೆಂದೇ ವೇದಾಂತಶಾಸ್ತ್ರವು ಬಂದಿರುತ್ತದೆ. ಇದನ್ನೂ ಹಿಂದೆ (ಖಂ. 10ರಲ್ಲಿ) ತಿಳಿಸಿ ಕೊಟ್ಟಿದೆ.

[ಮೇಲೆ ವರ್ಣಿಸಿರುವಂತೆ ಆತ್ಮಾನಾತ್ಮರ ಪರಸ್ಪರಾಧ್ಯಾಸವೇ ಶಾಂಕರಸಿದ್ಧಾಂತದಲ್ಲಿ ಅವಿದ್ಯೆ; ಆದರೆ ವ್ಯಾಖ್ಯಾನಕಾರರು ಅವಿದ್ಯೆ ಎಂಬ ಹೆಸರನ್ನು ಅವಿದ್ಯೆಯಿಂದ ತೋರುವ ನಾಮರೂಪಗಳ ಸೂಕ್ಷ್ಮಾವಸ್ಥೆಯಾದ **"ಅವ್ಯಾಕೃತ"** ಎಂಬರ್ಥದಲ್ಲಿ ಬಳಸಿರುತ್ತಾರೆ. ಇದಕ್ಕೆ ಭಾಷ್ಯದಲ್ಲಿ ಯಾವ ಆಧಾರವೂ ಇಲ್ಲ. ಇದನ್ನು ಮುಂದೆ ಬರೆದಿರುವ ಗೀತಾಭಾಷ್ಯ ವಾಕ್ಯಗಳಲ್ಲಿ ಸ್ಫುಟಗೊಳಿಸಲಾಗಿದೆ.]

**51. ಕ್ಷೇತ್ರಕ್ಷೇತ್ರಜ್ಞಯೋಃ, ವಿಷಯವಿಷಯಿಣೋಃ, ಭಿನ್ನಸ್ವಭಾವಯೋಃ, ಇತರೇತರತದ್ಧರ್ಮಾಧ್ಯಾಸಲಕ್ಷಣಃ, ಸಂಯೋಗಃ, ಕ್ಷೇತ್ರಕ್ಷೇತ್ರಜ್ಞಸ್ವರೂಪ ವಿವೇಕಾಭಾವನಿಬನ್ಧನಃ ರಜ್ಜುಶುಕ್ತಿಕಾದೀನಾಂ ತದ್ವಿವೇಕಜ್ಞಾನಾಭಾವಾತ್ ಅಧ್ಯಾರೋಪಿತಸರ್ಪರಜತಾದಿಸಂಯೋಗವತ್ । ಸೋಽಯಮ್ ಅಧ್ಯಾಸ ಸ್ವರೂಪಃ ಕ್ಷೇತ್ರಕ್ಷೇತ್ರಜ್ಞಸಂಯೋಗಃ ಮಿಥ್ಯಾಜ್ಞಾನಲಕ್ಷಣಃ ॥**

**ಗೀ.ಭಾ. 13–26.**

ಭಾವಾರ್ಥ :– ಕ್ಷೇತ್ರ (ದೇಹೇಂದ್ರಿಯಮನೋರೂಪವಾದ ಅನಾತ್ಮ), ಕ್ಷೇತ್ರಜ್ಞ (ಅದನ್ನು ಅರಿಯುವ ಆತ್ಮ) – ಎಂಬ ವಿಷಯವಿಷಯಿಗಳನ್ನು ಬೇರೆಬೇರೆಯ ಸ್ವಭಾವದವಾಗಿದ್ದರೂ ಒಂದರಲ್ಲೊಂದನ್ನೂ ಒಂದರಲ್ಲೊಂದರ ಧರ್ಮಗಳನ್ನೂ ಅಧ್ಯಾಸಮಾಡುವದೇ ಇವೆರಡರ ಸಂಯೋಗವು. ಇದಕ್ಕೆ ಕ್ಷೇತ್ರ, ಕ್ಷೇತ್ರಜ್ಞರ ಸ್ವರೂಪವನ್ನು ವಿಂಗಡಿಸಿ ಅರಿತುಕೊಳ್ಳದೆ ಇರುವದೇ ನಿಮಿತ್ತವು. ಹಗ್ಗ, ಕಪ್ಪೆಯ ಚಿಪ್ಪು – ಮುಂತಾದವುಗಳನ್ನು ವಿಂಗಡಿಸಿ ಅರಿತುಕೊಳ್ಳದೆ ಇರುವದರಿಂದ ಅವುಗಳಲ್ಲಿ ಅಧ್ಯಾರೋಪಿತವಾಗಿರುವ ಹಾವು, ಬೆಳ್ಳಿ – ಮುಂತಾದವುಗಳ ಸಂಯೋಗದಂತೆಯೇ ಇದು; ಈ ಕ್ಷೇತ್ರಕ್ಷೇತ್ರಜ್ಞರ ಪರಸ್ಪರಾಧ್ಯಾಸರೂಪವಾದ ಕ್ಷೇತ್ರಕ್ಷೇತ್ರಜ್ಞಸಂಯೋಗವು ಮಿಥ್ಯಾಜ್ಞಾನದ ಲಕ್ಷಣವುಳ್ಳದ್ದು.

**52. ಯಥೋಕ್ತಲಕ್ಷಣಂ ಕ್ಷೇತ್ರಜ್ಞಂ ಪ್ರವಿಭಜ್ಯ ನ ಸತ್ತನ್ನಾಸದುಚ್ಯತೇ ಇತ್ಯನೇನ ನಿರಸ್ತಸರ್ವೋಪಾಧಿವಿಶೇಷಂ ಜ್ಞೇಯಂ ಬ್ರಹ್ಮ ಸ್ವರೂಪೇಣ ಯಃ**

**ಪಶ್ಯತಿ, ಕ್ಷೇತ್ರಂ ಚ ಮಾಯಾನಿರ್ಮಿತಹಸ್ತಿಸ್ವಪ್ನದೃಷ್ಟವಸ್ತುಗನ್ಧರ್ವನಗರಾದಿವತ್ ಅಸದೇವ ಸದಿವಾವಭಾಸತೇ ಇತ್ಯೇವಂನಿಶ್ಚಿತವಿಜ್ಞಾನೋ ಯಃ, ತಸ್ಯ ಯಥೋಕ್ತಸಮ್ಯಗ್ದರ್ಶನವಿರೋಧಾತ್ ಅಪಗಚ್ಛತಿ ಮಿಥ್ಯಾಜ್ಞಾನಮ್ ॥**

**ಗೀ.ಭಾ. 13–26.**

ಭಾವಾರ್ಥ :– ಹಿಂದೆ ಹೇಳಿರುವ ಲಕ್ಷಣವುಳ್ಳ ಕ್ಷೇತ್ರಜ್ಞನನ್ನು ವಿಂಗಡಿಸಿಕೊಂಡು "ಇದು ಸತ್ತೂ, ಅಲ್ಲ, ಅಸತ್ತೂ ಎನಿಸುವದಿಲ್ಲ" ಎಂಬ ರೀತಿಯಿಂದ ಯಾವ ಉಪಾಧಿಯೂ ಇಲ್ಲದ ಬ್ರಹ್ಮವೇ ಈ ಜ್ಞೇಯವಾದ ಆತ್ಮನು ಎಂದು ಯಾವನು ಕಂಡುಕೊಳ್ಳುವನೋ, ಕ್ಷೇತ್ರವು ಮಾಯೆಯಿಂದ ನಿರ್ಮಿಸಿದ ಆನೆ, ಕನಸಿನಲ್ಲಿ ಕಂಡ ವಸ್ತು, ಗಂಧರ್ವನಗರ – ಮುಂತಾದವುಗಳಂತೆ ನಿಜವಾಗಿಲ್ಲದಿದ್ದರೂ ಇರುವಂತೆ ತೋರುತ್ತಿದೆ ಎಂದು ಯಾವನು ನಿಶ್ಚಯಿಸಿಕೊಂಡಿರುವನೋ ಅವನಿಗೆ ಈ ಜ್ಞಾನಕ್ಕೆ ವಿರುದ್ಧವಾಗಿರುವದರಿಂದ ಮಿಥ್ಯಾ ಜ್ಞಾನವು ತೊಲಗುವದು.

ವಿವರಣೆ :– ಸೂತ್ರಭಾಷ್ಯದ ವಾಕ್ಯದಲ್ಲಿರುವಂತೆ ಇಲ್ಲಿಯೂ ಆತ್ಮಾನಾತ್ಮರನ್ನು ಒಂದರಲ್ಲೊಂದನ್ನು ಬೆರೆಯಿಸಿ ತಪ್ಪಾಗಿ ತಿಳಿಯುವದೇ ಅವಿದ್ಯೆ, ವಸ್ತುಸ್ವರೂಪವನ್ನು ವಿಂಗಡಿಸಿ ತಿಳಿದುಕೊಳ್ಳುವದೇ ವಿದ್ಯೆ ಎಂದಿದೆ.

**53. ಅಧ್ಯಾಸೋ ನಾಮ ಅತಸ್ಮಿನ್ ತದ್ಬುದ್ಧಿಃ ಇತ್ಯವೋಚಾಮ । ತದ್ ಯಥಾ ಪುತ್ರಭಾರ್ಯಾದಿಷು ವಿಕಲೇಷು, ಸಕಲೇಷು ವಾ ಅಹಮೇವ ವಿಕಲಃ ಸಕಲೋ ವಾ–ಇತಿ ಬಾಹ್ಯಧರ್ಮಾನ್ ಆತ್ಮನಿ ಅಧ್ಯಸ್ಯತಿ; ತಥಾ ದೇಹಧರ್ಮಾನ್ – ಸ್ಥೂಲೋಽಹಮ್, ಕೃಶೋಽಹಮ್, ಗೌರೋಽಹಮ್, ತಿಷ್ಠಾಮಿ, ಗಚ್ಛಾಮಿ, ಲಙ್ಘಯಾಮಿ ಚ–ಇತಿ; ತಥಾ ಇನ್ದ್ರಿಯಧರ್ಮಾನ್ – ಮೂಕಃ, ಕಾಣಃ, ಕ್ಲೀಬಃ, ಬಧಿರಃ, ಅನ್ಧೋಽಹಮ್ ಇತಿ; ತಥಾ ಅನ್ತಃಕರಣ ಧರ್ಮಾನ್ – ಕಾಮಸಙ್ಕಲ್ಪವಿಚಿಕಿತ್ಸಾಧ್ಯವಸಾಯಾದೀನ್। ಏವಮ್ ಅಹಂಪ್ರತ್ಯಯಿನಮ್ ಅಶೇಷಸ್ವಪ್ರಚಾರಸಾಕ್ಷಿಣಿ ಪ್ರತ್ಯಗಾತ್ಮನಿ ಅಧ್ಯಸ್ಯ ತಂ ಚ ಪ್ರತ್ಯಗಾತ್ಮಾನಂ ಸರ್ವಸಾಕ್ಷಿಣಂ ತದ್ವಿಪರ್ಯಯೇಣ ಅನ್ತಃಕರಣಾದಿಷು ಅಧ್ಯಸ್ಯತಿ। ಏವಮ್ ಅಯಮನಾದಿರನನ್ತೋ ನೈಸರ್ಗಿಕೋಽಧ್ಯಾಸಃ ಮಿಥ್ಯಾ ಪ್ರತ್ಯಯರೂಪಃ ಕರ್ತೃತ್ವಭೋಕ್ತೃತ್ವಪ್ರವರ್ತಕಃ ಸರ್ವಲೋಕಪ್ರತ್ಯಕ್ಷಃ ॥ ಅಧ್ಯಾಸಭಾಷ್ಯ.**

ಭಾವಾರ್ಥ :– ಅಧ್ಯಾಸವೆಂದರೆ ಅದಲ್ಲದ್ದರಲ್ಲಿ ಅದೆಂಬ ತಿಳಿವಳಿಕೆ – ಎಂದು

ಹೇಳಿದೇವೆ. ಅದು ಹೇಗೆಂದರೆ; ಹೆಂಡಿರುಮಕ್ಕಳು ಅವಯವಗಳಲ್ಲಿ ಕುಂದಿರುವವರಾಗಿದ್ದರೆ ಅಥವಾ ಯಾವ ಕುಂದೂ ಇಲ್ಲದವರಾಗಿದ್ದರೆ ನಾನೇ ಅವಯುವಗಳಲ್ಲಿ ಕುಂದುಳ್ಳವ ನಾಗಿದ್ದೇನೆ, ಅಥವಾ ಕುಂದಿಲ್ಲದವನಾಗಿದ್ದೇನೆ – ಎಂದು ಹೊರಗಿನ ಧರ್ಮಗಳನ್ನು ತನ್ನಲ್ಲಿ ಅಧ್ಯಾಸಮಾಡಿಕೊಳ್ಳುತ್ತಾನೆ. ಹೀಗೆಯೇ ನಾನು ದಪ್ಪನಾಗಿದ್ದೇನೆ, ಕೃಶನು, ಬೆಳ್ಳಗಿರುವವನು, ನಿಂತಿದ್ದೇನೆ, ನಡೆಯುತ್ತಿದ್ದೇನೆ, ಹಾರುತ್ತೇನೆ – ಎಂದು ದೇಹಧರ್ಮ ಗಳನ್ನು (ಅಧ್ಯಾಸಮಾಡಿಕೊಳ್ಳುತ್ತಾನೆ); ಹೀಗೆಯೇ ಮೂಕನು, ಒಕ್ಕಣ್ಣನು, ನಪುಂಸಕನು, ಕಿವುಡನು, ಕುರುಡನು – ಎಂದು ಇಂದ್ರಿಯ ಧರ್ಮಗಳನ್ನು (ಹುಟ್ಟುಹಾಕಿಕೊಳ್ಳುತ್ತಾನೆ). ಇದರಂತೆ ಕಾಮ, ಸಂಕಲ್ಪ, ಸಂಶಯ, ನಿಶ್ಚಯ ಮುಂತಾದ ಅಂತಃಕರಣಧರ್ಮಗಳನ್ನು ಅಧ್ಯಾಸಮಾಡಿಕೊಳ್ಳುತ್ತಾನೆ. ಇದಕ್ಕೆ ವಿಪರೀತವಾಗಿ ಹೀಗೆಯೇ ನಾನು ಎಂಬ ಪ್ರತ್ಯಯವುಳ್ಳ ಕರ್ತೃವನ್ನು ಅವನಲ್ಲಿರುವ ಎಲ್ಲಾ ವಿಕಾರಗಳಿಗೂ ಸಾಕ್ಷಿಯಾಗಿರುವ ಪ್ರತ್ಯಗಾತ್ಮನಲ್ಲಿ ಅಧ್ಯಾಸಮಾಡಿ ಆ ಸರ್ವಸಾಕ್ಷಿಯಾದ ಪ್ರತ್ಯಗಾತ್ಮನನ್ನು ಅಂತಃಕರಣಾದಿಗಳಲ್ಲಿ ಅಧ್ಯಾಸಮಾಡುತ್ತಾನೆ. ಹೀಗೆ ಅನಾದಿಯೂ ಅನಂತವೂ ಆಗಿರುವ ಸ್ವಾಭಾವಿಕಾಧ್ಯಾಸವು, ಮಿಥ್ಯಾಪ್ರತ್ಯಯ ರೂಪವಾಗಿದೆ, ಕರ್ತೃತ್ವಭೋಕ್ತೃತ್ವಗಳನ್ನುಂಟುಮಾಡುತ್ತಿದೆ, ಇದು ಎಲ್ಲ ಜನರ ಅನುಭವದಲ್ಲಿಯೂ ಇದೆ.

**ವಿವರಣೆ** :– ಇಲ್ಲಿ ವರ್ಣಿಸಿರುವ ಅಧ್ಯಾಸವನ್ನು ಅಧ್ಯಾರೋಪವೆಂದು ಕರೆಯುತ್ತಾರೆ. ಇದು ಜನರಿಗೆ ಸ್ವಭಾವದಿಂದ ಬಂದಿರುವ ತಪ್ಪುತಿಳುವಳಿಕೆ. ಹಿಂದೆ (ಖಂ. 47ರಲ್ಲಿ) ಹೇಳಿರುವ ಅಧ್ಯಾರೋಪಾಪವಾದಪ್ರಕ್ರಿಯೆಯಲ್ಲಿರುವ ಅಧ್ಯಾರೋಪವು ತಪ್ಪುತಿಳಿವಳಿಕೆಯಲ್ಲ; ಗುರುಗಳಾದವರು ಬೋಧನ ಸೌಕರ್ಯಕ್ಕಾಗಿ ಕಲ್ಪಿಸಿಕೊಂಡದ್ದು. ಇದನ್ನು ಮುಂದೆ ಇನ್ನಷ್ಟು ವಿವರಿಸುವೆವು.

* * * * *

# 9. ಶಾಸ್ತ್ರಾಚಾರ್ಯಬೋಧೆ

54. ಯೋಽಯಂ ಸಂಸಾರೀ ಜೀವಃ ಸ ಉಭಯಲಕ್ಷಣೇನ ತತ್ತ್ವಾಪ್ರತಿಬೋಧರೂಪೇಣ ಬೀಜಾತ್ಮನಾ ಅನ್ಯಥಾಗ್ರಹಣಲಕ್ಷಣೇನ ಚ ಅನಾದಿಕಾಲಪ್ರವೃತ್ತೇನ ಮಾಯಾಲಕ್ಷಣೇನ ಮಮಾಯಂ ಪಿತಾ, ಪುತ್ರೋಽಯಮ್, ನಪ್ತಾ, ಕ್ಷೇತ್ರಂ, ಗೃಹಂ, ಪಶವಃ, ಅಹಮೇತೇಷಾಂ ಸ್ವಾಮೀ, ಸುಖೀ, ದುಃಖೀ, ಕ್ಷಯಿತಃ ಅಹಮನೇನ, ವರ್ಧಿತಶ್ಚಾನೇನ – ಇತ್ಯೇವಂ ಪ್ರಕಾರಾನ್ ಸ್ವಪ್ನಾನ್ ಸ್ಥಾನದ್ವಯೇಽಪಿ ಪಶ್ಯನ್ ಸುಪ್ತಃ, ಯದಾ ವೇದಾನ್ತಾರ್ಥತತ್ತ್ವಾಭಿಜ್ಞೇನ ಪರಮಕಾರುಣಿಕೇನ ಗುರುಣಾ 'ನಾಸ್ಯೇವಂ ತ್ವಂ ಹೇತುಫಲಾತ್ಮಕಃ ಕಿಂ ತು ತತ್ತ್ವಮಸಿ' ಇತಿ ಪ್ರತಿಬೋಧ್ಯಮಾನಃ, ತದಾ ಏವಂ ಪ್ರತಿಬುಧ್ಯತೇ । ಕಥಮ್ ? ನಾಸ್ಮಿನ್ ಬಾಹ್ಯಮಾಭ್ಯನ್ತರಂ ವಾ ಜನ್ಮಾದಿಭಾವವಿಕಾರೋಽಸ್ತಿ ಅತೋಽಜಮ್, 'ಸಬಾಹ್ಯಾಭ್ಯನ್ತರೋ ಹ್ಯಜಃ' ಇತಿ ಶ್ರುತೇಃ । ಸರ್ವಭಾವವಿಕಾರವರ್ಜಿತಮ್ – ಇತ್ಯರ್ಥಃ । ಯಸ್ಮಾದ್ ಜನ್ಮಾದಿಕಾರಣಭೂತಂ ನಾಸ್ಮಿನ್ ಅವಿದ್ಯಾತಮೋಬೀಜಂ ನಿದ್ರಾ ವಿದ್ಯತ ಇತ್ಯನಿದ್ರಮ್ । ಅನಿದ್ರಂ ಹಿ ತತ್ ತುರೀಯಮ್ । ಅತ ಏವ ಅಸ್ವಪ್ನಮ್, ತನ್ನಿಮಿತ್ತತ್ವಾತ್ ಅನ್ಯಥಾಗ್ರಹಣಸ್ಯ । ಯಸ್ಮಾಚ್ಚ ಅನಿದ್ರಮಸ್ವಪ್ನಮ್, ತಸ್ಮಾದಜಮ್, ಅದ್ವೈತಂ ತುರೀಯಮ್ ಆತ್ಮಾನಂ ಬುದ್ಯತೇ ತದಾ ॥

**ಗೌ.ಕಾ.ಭಾ. 1–16.**

ಭಾವಾರ್ಥ :– ಈ ಸಂಸಾರಿಯಾದ ಜೀವನಿದಾನಲ್ಲ, ಇವನು ತತ್ತ್ವವನ್ನರಿಯದಿರುವದೆಂಬ ಬೀಜರೂಪವಾದ (ನಿದ್ರೆ), ಅನ್ಯಪ್ರಕಾರವಾಗಿ ಅರಿಯುವದೆಂಬ (ಸ್ವಪ್ನ) – ಈ ಎರಡು ರೂಪವಾಗಿರುವ ಮಾಯಾರೂಪವಾದ ನಿದ್ರೆಯಲ್ಲಿರುವವನಾಗಿ – "ಇವನು ನನ್ನ ತಂದೆ, ಇವನ ಮಗನು, ಮೊಮ್ಮಗನಿವನು, ಇದು ಹೊಲವು, ಮನೆ, ಇವು ದನಕರುಗಳು; ನಾನು ಇವುಗಳಿಗೆ ಒಡೆಯನು; ಸುಖಿ, ದುಃಖಿ, ಇವನಿಂದ ಕ್ಷಯವಾದೆನು, ಇವನಿಂದ ಬೆಳೆದುಕೊಂಡೆನು" – ಎಂಬೀ ಪರಿಯಾದ ಸ್ವಪ್ನಗಳನ್ನು ಕನಸು, ಎಚ್ಚರ – ಎಂಬ ಎರಡು ಅವಸ್ಥೆಗಳಲ್ಲಿಯೂ ಕಾಣುತ್ತಾ ನಿದ್ರಿಸುತ್ತಿರುವಲ್ಲಿ ಯಾವಾಗ ವೇದಾಂತಾರ್ಥದ ತತ್ತ್ವವನ್ನರಿತಿರುವ ಪರಮಕಾರುಣಿಕನಾದ ಗುರುವು 'ನೀನು ಹೀಗೆ ಹೇತುಫಲಾತ್ಮಕನಾಗಿರುವವನಲ್ಲ, ಮತ್ತೇನೆಂದರೆ ಅದೇ ನೀನಾಗಿರುವೆ' ಎಂದು ಎಚ್ಚರಿಸಿದರೆ

**ಆಗ (ಹೀಗೆ ಅರಿತುಕೊಳ್ಳುವನು; ಹೇಗೆಂದರೆ) ಈ ಆತ್ಮತತ್ತ್ವದಲ್ಲಿ ಒಳಗಾಗಲಿ ಹೊರಗಾಗಲಿ ಜನ್ಮವೇ ಮುಂತಾದ ಭಾವವಿಕಾರವಿರುವದಿಲ್ಲ, ಆದ್ದರಿಂದ ಇದು ಅಜವು; ಏಕೆಂದರೆ 'ಒಳಗೂ ಹೊರಗೂ ಅಜನು' ಎಂದು ಶ್ರುತಿಯಿದೆ. ಯಾವ ಭಾವವಿಕಾರವೂ ಇದರಲ್ಲಿಲ್ಲ – ಎಂದರ್ಥ. ಏಕೆಂದರೆ ಜನ್ಮಾದಿಗಳಿಗೆ ಕಾರಣವಾಗಿರುವ ಅವಿದ್ಯಾತಮೋರೂಪವಾಗಿರುವ ನಿದ್ರೆಯು ಇದರಲಿಲ್ಲದ್ದರಿಂದ ಇದು ಅನಿದ್ರವು. ಈ ತುರೀಯವು ಅನಿದ್ರವಲ್ಲವೆ? ಆದ್ದರಿಂದಲೇ ಇದು ಅಸ್ವಪ್ನವು ; ಏಕೆಂದರೆ ಆ ನಿದ್ರೆಯ ನಿಮಿತ್ತದಿಂದಲೇ ಅನ್ಯಥಾ ಗ್ರಹಣವುಂಟಾಗಿರುತ್ತದೆ. ಹೀಗೆ ಅನಿದ್ರವೂ ಅಸ್ವಪ್ನವೂ ಆಗಿರುವದರಿಂದ ಆ ತುರೀಯವು ಅಜವು, ಅದ್ವಿತೀಯವು _ ಎಂದು ಅರಿತುಕೊಳ್ಳುವನು.**

**ವಿವರಣೆ :–** ಇದು ಮಾಂಡೂಕ್ಯೋಪನಿಷತ್ತಿನಲ್ಲಿ ಹೇಳಿರುವ ತುರೀಯನನ್ನು ವರ್ಣಿಸುವ ಕಾರಿಕೆ. ಉಪನಿಷತ್ತಿನಲ್ಲಿ ಆತ್ಮನಿಗೆ ಮೂರು ಅವಸ್ಥೆಗಳು ಇರುವವೆಂದು ವ್ಯವಹಾರದೃಷ್ಟಿಯಿಂದ **ಅಧ್ಯಾರೋಪ**ಮಾಡಿಕೊಂಡು ಪರಮಾತ್ಮ ತತ್ತ್ವವನ್ನು ತಿಳಿಸಿಕೊಟ್ಟಬಳಿಕ, ಆ ಅವಸ್ಥಾತ್ರಯವು ನಿಜವಾಗಿ ಆತ್ಮನಲ್ಲಿಲ್ಲ ಎಂದು ಅಪವಾದಮಾಡಿರುತ್ತದೆ. ಶ್ರುತಿಯ ದೃಷ್ಟಿಯಿಂದಾಗಲಿ ಗುರುವಿನ ದೃಷ್ಟಿಯಿಂದಾಗಲಿ ಅವಸ್ಥಾತ್ರಯುವು ಆತ್ಮನಲ್ಲಿಲ್ಲವೇ ಇಲ್ಲ. ಆದರೂ ಕನಸುಕಾಣುತ್ತಿರುವವರು ನಿಜವಾಗಿಲ್ಲದ ಹುಸಿತೋರಿಕೆಗಳನ್ನು ಕಾಣುತ್ತಿರುವಂತೆ ಸಾಮಾನ್ಯಜನರು ತಮ್ಮ ಆತ್ಮನಲ್ಲಿ ಈ ಅವಸ್ಥೆಗಳು ನಿಜವಾಗಿಯೂ ಇರುವವೆಂದೇ ಕಲ್ಪಿಸಿಕೊಂಡಿರುತ್ತಾರೆ. ತತ್ತ್ವವನ್ನು ತಿಳಿಸಿಕೊಡುವದಕ್ಕಾಗಿ ಇದನ್ನು ಇಟ್ಟುಕೊಂಡೇ ಶ್ರುತಿಯೂ ಗುರುಗಳೂ ಎಚ್ಚರದವಸ್ಥೆಗೂ ಈ ಆತ್ಮನು ಸಾಕ್ಷಿಯಾಗಿರುತ್ತಾನೆ, ಕನಸಿಗೂ ಸಾಕ್ಷಿಯಾಗಿರುತ್ತಾನೆ, ತನಿನಿದ್ರೆಗೂ ಸಾಕ್ಷಿಯಾಗಿರುತ್ತಾನೆ – ಎಂದು ಬೋಧಿಸಿಕೊಡುತ್ತಾರೆ. ಈ ತತ್ತ್ವವು ಶಿಷ್ಯನಿಗೆ ಮನದಟ್ಟಾದ ಬಳಿಕ ಅವಸ್ಥಾತ್ರಯವು ನಿಜವಾಗಿ ನಿನ್ನ ಸ್ವರೂಪದಲ್ಲಿಲ್ಲ, ನೀನು ಅವಸ್ಥಾತ್ರಯವಿಲ್ಲದ ನಾಲ್ಕನೆಯ ಸ್ವರೂಪದವನು – ಎಂದು ಪರಮತತ್ತ್ವವನ್ನು ಬೋಧಿಸಿ ಕೊಡುತ್ತಾರೆ. ಇದು **ಅವಸ್ಥಾತ್ರಯದ ಅಧ್ಯಾರೋಪಾಪವಾದನ್ಯಾಯವು**. ಜನರ ದೃಷ್ಟಿಯಿಂದ ಅವಸ್ಥಾತ್ರಯವು ನಿಜವಾಗಿರುತ್ತದೆ; ಆದರೆ ಗುರುಶಾಸ್ತ್ರಗಳ ದೃಷ್ಟಿಯಿಂದ ಅದು ನಿಜವಾಗಿಲ್ಲದಿದ್ದರೂ ಇದೆಯೆಂದು ತತ್ತ್ವೋಪದೇಶಕ್ಕಾಗಿ ಅದನ್ನು ಇಟ್ಟುಕೊಂಡಿದೆ. ಅಧ್ಯಾರೋಪವೆಂದರೆ ಜನರ ದೃಷ್ಟಿಯಿಂದ ಭ್ರಾಂತಿ; ಶಾಸ್ತ್ರಾಚಾರ್ಯರ ದೃಷ್ಟಿಯಿಂದ ಬೋಧನೆಗಾಗಿ ಮಾಡಿಕೊಂಡ ಕಲ್ಪನೆ. ಇದನ್ನು ಮರೆಯದೆ ಇರಬೇಕು.

55. ಪ್ರಪಞ್ಚನಿವೃತ್ತ್ಯಾ ಚೇತ್ ಪ್ರತಿಬುಧ್ಯತೇ ಅನಿವೃತ್ತೇ ಪ್ರಪಞ್ಚೇ ಕಥಮದ್ವೈತಮಿತಿ? ಉಚ್ಯತೇ । ಸತ್ಯಮೇವಂ ಸ್ಯಾತ್ ಪ್ರಪಞ್ಚೋ ಯದಿ ವಿದ್ಯೇತ । ರಜ್ಜ್ವಾಂ ಸರ್ಪ ಇವ ಕಲ್ಪಿತತ್ವಾನ್ನ ತು ಸ ವಿದ್ಯತೇ । ವಿದ್ಯಮಾನಶ್ಚೇನ್ನಿವರ್ತೇತ ನ ಸಂಶಯಃ । ನ ಹಿ ರಜ್ಜ್ವಾಂ ಭ್ರಾನ್ತಿಬುದ್ಧ್ಯಾ ಕಲ್ಪಿತಃ ಸರ್ಪಃ ವಿದ್ಯಮಾನಃ ಸನ್ ವಿವೇಕತೋನಿವೃತ್ತಃ ನೈವ ಮಾಯಾ ಮಾಯಾವಿನಾ ಪ್ರಯುಕ್ತಾ ತದ್ದರ್ಶಿನಾಂ ಚಕ್ಷುರ್ಬನ್ಧಾಪಗಮೇ ವಿದ್ಯಮಾನಾ ಸತೀ ನಿವೃತ್ತಾ। ತಥಾ ಇದಂ ಪ್ರಪಞ್ಚಾಖ್ಯಂ ಮಾಯಾಮಾತ್ರಂ ದ್ವೈತಮ್, ರಜ್ಜುವತ್ ಮಾಯಾವಿವಚ್ಚ ಅದ್ವೈತಂ ಪರಮಾರ್ಥತಃ । ತಸ್ಮಾತ್, ನ ಕಶ್ಚಿತ್ ಪ್ರಪಞ್ಚಃ ಪ್ರವೃತ್ತೋ ನಿವೃತ್ತೋ ವಾ ಅಸ್ತಿ – ಇತ್ಯಭಿಪ್ರಾಯಃ ॥

**ಗೌ.ಕಾ.ಭಾ. 1–17**

ಭಾವಾರ್ಥ :– (ಪ್ರಶ್ನೆ) :– ಪ್ರಪಂಚವು ತೊಲಗಿದ್ದರಿಂದ ಎಚ್ಚರುವನಾದರೆ ಪ್ರಪಂಚವಿರುವಾಗ ಅದ್ವೈತವೆಂಬುದು ಹೇಗೆ? (ಉತ್ತರ) :– ನಿಜ. ಪ್ರಪಂಚವು ನಿಜವಾಗಿದ್ದರೆ ಹೀಗೇ ಸರಿ; ಆದರೆ ಹಗ್ಗದಲ್ಲಿ ಹಾವಿನಂತೆ ಅದು ಕಲ್ಪಿತವಾಗಿರುವದರಿಂದ ನಿಜವಾಗಿರುವದಿಲ್ಲ. ಇದ್ದರಲ್ಲವೆ, ಅದು ಹೋಗುವದೆನ್ನುವದು? ಹಗ್ಗದಲ್ಲಿ ಭ್ರಾಂತಬುದ್ಧಿಯಿಂದ ಕಲ್ಪಿತವಾದ ಹಾವು ನಿಜವಾಗಿದ್ದುಕೊಂಡಿದ್ದು ವಿವೇಕದಿಂದ ತೊಲಗುವದಿಲ್ಲವಷ್ಟೆ? ಮಾಯೆಯು ಮಾಯಾವಿಯಿಂದ ಮೊದಲು ಪ್ರಯುಕ್ತವಾಗಿ ನಿಜವಾಗಿದ್ದು ಅದನ್ನು ನೋಡುವವರಿಗೆ ಕಣ್ಣುಕಟ್ಟುಹೋದಬಳಿಕ ನಿಜವಾಗಿ ತೊಲಗುವದೂ ಇಲ್ಲವಷ್ಟೆ? ಹಾಗೆಯೇ ಈ ಜಗತ್ತೆಂಬುದು ಮಾಯಾಮಾತ್ರವಾದ ದ್ವೈತವು, ಹಗ್ಗದಂತೆಯೂ ಮಾಯಾವಿಯಂತೆಯೂ ಅದ್ವೈತವೇ ಪರಮಾರ್ಥವು. ಆದ್ದರಿಂದ ಯಾವ ಪ್ರಪಂಚವೂ ಬಂದಿರುವದೂ ಇಲ್ಲ, ಹೋಗುವದೂ ಇಲ್ಲ – ಎಂದು ಅಭಿಪ್ರಾಯ.

**ವಿವರಣೆ :–** ಇಲ್ಲಿ 'ಪ್ರಪಂಚ'ವೆಂದರೆ ಮೇಲೆ ಹೇಳಿದ ಅವಸ್ಥಾತ್ರಯವೇ, ಅದು ನಿಜವಾಗಿ ಇದ್ದದ್ದು ಹೋಗುವದೆಂದು ಭ್ರಮಿಸಬಾರದು; ಇದೆಯೆಂದು ಜನರು ಕಲ್ಪಿಸಿಕೊಂಡಿರುತ್ತಾರೆ, ಅಷ್ಟೆ. ಆದರೆ ಪರಮಾರ್ಥವಾಗಿ ನೋಡಿದರೆ ಅದು ಬರಿಯ ಹುಸಿತೋರಿಕೆಯೇ, ಯಾವಾಗಲೂ ಅದ್ವೈತವೊಂದೇ ಇರುವದು – ಎಂದಭಿಪ್ರಾಯ. ಇದರಿಂದ ಅವಿದ್ಯೆಯು – ಎಂದರೆ ನಿಜವನ್ನರಿಯದೆ ಇರುವದು, ತಪ್ಪಾಗಿ ತಿಳಿದುಕೊಂಡಿರುವದು – ಎಂಬುದೂ ಅಧ್ಯಾರೋಪ

ದೃಷ್ಟಿಯಿಂದ ಕಲ್ಪಿಸಿಕೊಂಡದ್ದೇ ಹೊರತು ನಿಜವಾಗಿರುವದಿಲ್ಲ ಎಂದಂತೆ ಆಯಿತು. ವಿದ್ಯಾವಿದ್ಯೆಗಳೆಂಬಿವೂ ಅವಿದ್ಯಾಧ್ಯಾರೋಪನ್ಯಾಯದಿಂದ ಕಲ್ಪಿಸಿಕೊಂಡದ್ದೇ ಹೊರತು ನಿಜವಾಗಿ ಇರುವದೇ ಇಲ್ಲ.

**56. ಶ್ರುತ್ಯನುಗೃಹೀತ ಏವ ಹಿ ಅತ್ರ ತರ್ಕಃ, ಅನುಭವಾಙ್ಗತ್ವೇನ ಆಶ್ರೀಯತೇ । ಸ್ವಪ್ನಾನ್ತಬುದ್ಧಾನ್ತಯೋರುಭಯೋರಿತರೇತರವ್ಯಭಿಚಾರಾತ್ ಆತ್ಮನೋऽನನ್ವಾಗತತ್ವಮ್ ; ಸಂಪ್ರಸಾದೇ ಚ ಪ್ರಪಞ್ಚಪರಿತ್ಯಾಗೇನ ಸದಾತ್ಮನಾ ಸಂಪತ್ತೇಃ ನಿಷ್ಪ್ರಪಞ್ಚಸದಾತ್ಮತ್ವಮ್; ಪ್ರಪಞ್ಚಸ್ಯ ಬ್ರಹ್ಮಪ್ರಭವತ್ವಾತ್ ಕಾರ್ಯಕಾರಣಾನನ್ಯತ್ವನ್ಯಾಯೇನ ಬ್ರಹ್ಮಾವ್ಯತಿರೇಕ ಇತ್ಯೇವಂ ಜಾತೀಯಕಃ॥ ಸೂ.ಭಾ. 2-1-6.**

ಭಾವಾರ್ಥ :- ಶ್ರುತಿಯಿಂದ ಅನುಗೃಹೀತವಾಗಿರುವ ತರ್ಕವನ್ನೇ ಇಲ್ಲಿ ಅನುಭವಕ್ಕೆ ಅಂಗವೆಂದು ಆಶ್ರಯಿಸಿರುತ್ತದೆ. ಹೇಗೆಂದರೆ, 'ಸ್ವಪ್ನಾವಸ್ಥೆ, ಎಚ್ಚರದವಸ್ಥೆ- ಇವು ಒಂದನ್ನೊಂದು ಬಿಟ್ಟು ಬಾಧಿತವಾಗಿರುವದರಿಂದ ಆತ್ಮನಿಗೆ ಅವುಗಳ ಸ್ವಭಾವವು ಅಂಟಿಕೊಳ್ಳುವದಿಲ್ಲ. ತನಿನಿದ್ರೆಯಲ್ಲಿ ಪ್ರಪಂಚವನ್ನು ಬಿಟ್ಟು ಸದ್ರೂಪದಿಂದಿರುವ ಬ್ರಹ್ಮನೊಡನೆ ಒಂದಾಗಿಬಿಡುವದರಿಂದ ಜೀವನು ನಿಷ್ಪ್ರಪಂಚವಾದ ಸದ್ರೂಪನೇ ಆಗಿರುತ್ತಾನೆ. ಪ್ರಪಂಚವು ಬ್ರಹ್ಮನಿಂದ ಹುಟ್ಟುವದರಿಂದ ಕಾರ್ಯವು ಕಾರಣಕ್ಕಿಂತ ಬೇರೆಯಲ್ಲ ಎಂಬ ಯುಕ್ತಿಯಿಂದ ಅದು ಬ್ರಹ್ಮಕ್ಕಿಂತ ವ್ಯತಿರಿಕ್ತವಾಗಿ ಇರುವದಿಲ್ಲ' ಎಂಬೀ ಜಾತಿಯ ತರ್ಕವನ್ನೇ ಇಲ್ಲಿ ಉಪಯೋಗಿಸಲಾಗಿರುತ್ತದೆ.

**ವಿವರಣೆ :-** ವೇದಾಂತದಲ್ಲಿ 'ಮನನ' ಮಾಡಬೇಕು ಎಂದಿರುವದ ರಿಂದ ಇಲ್ಲಿ ಬರಿಯ ತರ್ಕವನ್ನಾಗಲಿ ಅನುಮಾನವೇ ಮುಂತಾದ ಪ್ರಮಾಣಗಳನ್ನಾಗಲಿ ಬಳಸುವಹಾಗಿಲ್ಲ. ಏಕೆಂದರೆ ಅನುಮಾನವೂ ಒಣತರ್ಕವೂ ಶ್ರುತಿವಿರುದ್ಧ, ಎಂದರೆ ಅನುಭವವಿರುದ್ಧ.

ಆದರೆ ಇಷ್ಟು ಮಾತ್ರದಿಂದ ಎಲ್ಲಾ ತರ್ಕವನ್ನೂ ವೇದಾಂತದಲ್ಲಿ ಬಹಿಷ್ಕರಿಸಿದೆ ಎಂದು ತಿಳಿಯಬಾರದು. ಶ್ರುತಿಯಲ್ಲಿ ಅನುಭವಕ್ಕೆ ಹೊಂದುವಂತೆ ಕೆಲವು ತರ್ಕಗಳನ್ನು ಹೇಳಿದೆ. ಅವುಗಳನ್ನು ಅವಶ್ಯವಾಗಿ ಸ್ವೀಕರಿಸಬೇಕು. ಸ್ವಪ್ನವೂ ಎಚ್ಚರವೂ ಒಂದು ಇರುವಾಗ ಇನ್ನೊಂದು ಎಲ್ಲೆಲ್ಲಿಯೂ ಇರುವದೇ ಇಲ್ಲ. ಅವು ಬರಿಯ ತೋರಿಕೆ. ಆದ್ದರಿಂದ ಎಚ್ಚರದಲ್ಲಾಗಲಿ, ಕನಸಿನಲ್ಲಾಗಲಿ ತೋರುವ

ಪ್ರಪಂಚವು ನಿಜವಾಗಿರುವದೇ ಇಲ್ಲ. ಗಾಢನಿದ್ರೆಯಲ್ಲಿ ಯಾವ ಪ್ರಪಂಚವೂ ಇಲ್ಲದೆ ನಮ್ಮ ಆತ್ಮಸ್ವರೂಪವು ಮಾತ್ರ ಇರುವದು ಅನುಭವದಲ್ಲಿದೆ. ಆದ್ದರಿಂದ ಆತ್ಮನು ಪ್ರಪಂಚದಲ್ಲಿ ಹುಟ್ಟುವನೆಂದಾಗಲಿ, ಅಲ್ಲಿ ಅಜ್ಞನಾಗಿದ್ದು ಅವಿದ್ಯೆಯನ್ನು ಅನುಭವಿಸಿ ಆಮೇಲೆ ವೇದಾಂತಶ್ರವಣದಿಂದ ಜ್ಞಾನವನ್ನು ಸಂಪಾದಿಸಿಕೊಂಡು ಮುಕ್ತನಾಗುವನೆಂದಾಗಲಿ ತಿಳಿಯಬಾರದು. ಅವನು ಎಂದೆಂದಿಗೂ ನಿಷ್ಪ್ರಪಂಚನು ಎಂದೇ ತಿಳಿಯಬೇಕು.

**57. ನನು ಶಬ್ದಾದಿಹೀನಂ ಬ್ರಹ್ಮ ಜಗತಃ ಕಾರಣಮ್ । ಬಾಢಮ್। ನ ತು ಶಬ್ದಾದಿಮತ್ ಕಾರ್ಯಂ ಕಾರಣಾತ್ಮನಾ ಹೀನಂ ಪ್ರಾಗುತ್ಪತ್ತೇಃ, ಇದಾನೀಂ ವಾ ಅಸ್ತಿ । ತೇನ ನ ಶಕ್ಯತೇ ವಕ್ತುಂ ಪ್ರಾಗುತ್ಪತ್ತೇಃ, ಅಸತ್ ಕಾರ್ಯಮಿತಿ ॥**

**ಸೂ. ಭಾ. 2–1–7.**

**ಭಾವಾರ್ಥ :–** (ಆಕ್ಷೇಪ) : ಶಬ್ದಾದಿಗಳಿಲ್ಲದ ಬ್ರಹ್ಮವು ಜಗತ್ತಿಗೆ ಕಾರಣವಲ್ಲವೆ? ನಿಜ. ಆದರೆ ಶಬ್ದಾದಿಗಳುಳ್ಳ ಕಾರ್ಯವು ಕಾರಣಸ್ವರೂಪವನ್ನು ಬಿಟ್ಟು ಉತ್ಪತ್ತಿಗೆ ಪೂರ್ವದಲ್ಲಾಗಲಿ ಈಗಲಾಗಲಿ ಇಲ್ಲವೇಇಲ್ಲ. ಆದ್ದರಿಂದ ಜಗತ್ತು ಹುಟ್ಟುವದಕ್ಕಿಂತ ಮುಂಚೆ ಕಾರ್ಯವು ಅಸತ್ತು – ಎನ್ನುವದಕ್ಕಾಗುವದಿಲ್ಲ.

**ವಿವರಣೆ :–** ಪ್ರಪಂಚವು ನಿಜವಾಗಿ ಹುಟ್ಟಿದೆಯೆಂದೂ ಬ್ರಹ್ಮವು ನಿಷ್ಪ್ರಪಂಚವಾಗಿ ಮೊದಲಿದ್ದು ಅದರಿಂದ ಪ್ರಪಂಚವು ಈಚೆಗೆ ಹುಟ್ಟಿರುವದೆಂದೂ ಕೆಲವುಕಾಲವಾದ ಬಳಿಕ ಅದು ಬ್ರಹ್ಮದಲ್ಲಿ ಲಯವಾಗುತ್ತದೆಯೆಂದೂ ವೇದಾಂತಿಗಳು ಹೇಳುತ್ತಲಿಲ್ಲ. ಶಬ್ದಸ್ಪರ್ಶರೂಪರಸಗಂಧಗಳಿಂದ ಕೂಡಿದಂತೆ ಕಾಣುತ್ತಿರುವ ಈ ಜಗತ್ತು ಸೃಷ್ಟಿ, ಸ್ಥಿತಿ, ಲಯ, ಎಂಬ ಮೂರವಸ್ಥೆಗಳಲ್ಲಿಯೂ ಬ್ರಹ್ಮಸ್ವರೂಪವೇ ಆಗಿರುತ್ತದೆ. ಬ್ರಹ್ಮವು ಪ್ರಪಂಚರೂಪವಾಗಿ ಕಾಣುತ್ತಿದೆ ಎಂಬುದು ಬರಿಯ ಕಲ್ಪನೆಮಾತ್ರವಾಗಿದೆ– ಎಂದು ತಿಳಿಸಿಕೊಡುವದೇ ವೇದಾಂತಗಳ ಉದ್ದೇಶ.

**58. ಯಥಾ ಘಟಕರಕಾದ್ಯಾಕಾಶಾನಾಂ ಮಹಾಕಾಶಾನನ್ಯತ್ವಮ್, ಯಥಾ ಚ ಮೃಗತೃಷ್ಣಿಕೋದಕಾದೀನಾಮ್ ಊಷರಾದಿಭ್ಯೋಽನನ್ಯತ್ವಮ್, ದೃಷ್ಟನಷ್ಟಸ್ವರೂಪತ್ವಾತ್, ಸ್ವರೂಪೇಣ ಅನುಪಾಖ್ಯತ್ವಾತ್ ಏವಮಸ್ಯ ಭೋಗ್ಯಭೋಕ್ತ್ರಾದಿಪ್ರಪಞ್ಚಜಾತಸ್ಯ ಬ್ರಹ್ಮವ್ಯತಿರೇಕೇಣ ಅಭಾವ ಇತಿ ದ್ರಷ್ಟವ್ಯಮ್॥**

**ಸೂ.ಭಾ. 2–1–14.**

**ಭಾವಾರ್ಥ :–** ಹೇಗೆ ಗಡಿಗೆ, ಕುಡಿಕೆ – ಮುಂತಾದವುಗಳ ಆಕಾಶವು ಮಹಾಕಾಶಕ್ಕಿಂತ ಬೇರೆಯಲ್ಲವೋ ಹೇಗೆ ಬಿಸಿಲುಕುದುರೆಯ ನೀರೇ ಮುಂತಾದವುಗಳು ತೋರಿಹಾರುವ ಸ್ವರೂಪವಾದದ್ದರಿಂದಲೂ ತೋರುವ ತಮ್ಮ ರೂಪದಿಂದ ನಿರ್ಧರಿಸಿ ಹೇಳುವದಕ್ಕೆ ಬರುವಂತಿಲ್ಲವಾದ್ದರಿಂದಲೂ ಚೌಳು ಮರುಭೂಮಿಯೇ ಮುಂತಾದವುಗಳಿಗಿಂತ ಬೇರೆಯಲ್ಲವೋ ಹಾಗೇಯೇ ಭೋಗ್ಯಭೋಕ್ತೃ – ಮುಂತಾಗಿ ತೋರುವ ಪ್ರಪಂಚವು ಬ್ರಹ್ಮಕ್ಕಿಂತ ಬೇರೆಯಲ್ಲ – ಎಂದು ತಿಳಿಯಬೇಕು.

**ವಿವರಣೆ :–** ಕಾರ್ಯವೆಂದರೆ ಕಾರಣವು ಮಾರ್ಪಟ್ಟು ಆಗಿರುವ ರೂಪಾಂತರ – ಎಂಬ ಭಾವನೆ ಜನರಿಗೆ ಇರುತ್ತದೆ. ಈ ಬುದ್ಧಿಯನ್ನು ತೊಲಗಿಸುವದಕ್ಕಾಗಿ ಇಲ್ಲಿ ಆಕಾಶ, ಬಿಸಿಲುಕುದುರೆ – ಮುಂತಾದ ಹುಸಿತೋರಿಕೆಗಳ ದೃಷ್ಟಾಂತವನ್ನು ಕೊಟ್ಟಿದೆ. ಪರಮಾತ್ಮನಲ್ಲಿ ಕಾಣುತ್ತಿರುವ ಭೋಕ್ತ್ರಾದಿಪ್ರಪಂಚವು ಪರಮಾತ್ಮನ ಕಾರ್ಯ – ಎಂದರೆ ಪರಮಾತ್ಮನಲ್ಲಿ ಅವಿದ್ಯೆಯಿಂದ ಕಾಣುತ್ತಿರುವ ತೋರಿಕೆ. ಈ ತೋರಿಕೆಯ ನಿಜವು ಪರಮಾತ್ಮನೇ. ಘಟಾಕಾಶಾದಿಗಳು, ಮಹಾಕಾಶ – ಎಂದು ಎರಡು ಬೇರೆಬೇರೆಯ ವಸ್ತುಗಳಿಲ್ಲ, ಎಲ್ಲವೂ ಮಹಾಕಾಶವೇ. ಹಾಗೆಯೇ ಜೀವಜಡಭೇದರೂಪದಿಂದ ಕಾಣುತ್ತಿರುವ ಪ್ರಪಂಚವು ಈಗಲೂ ನಿಜವಾಗಿ ಪರಮಾತ್ಮನೇ ಆಗಿರುತ್ತದೆ, ಅದರ ಪ್ರಪಂಚಾಕಾರವು ಮಾತ್ರ ಹುಸಿ. ಸುಷುಪ್ತಿಯಲ್ಲಿರುವ ಆತ್ಮನು ಕಾರಣವೆಂದೂ ಎಚ್ಚರ ಕನಸುಗಳಲ್ಲಿ ಕಾಣುವ ಅವನ ಸಪ್ರಪಂಚರೂಪವು ಕಾರ್ಯವೆಂದೂ ಹೇಳುವಾಗಲೂ ಹೀಗೆಯೇ ತಿಳಿದುಕೊಳ್ಳಬೇಕು. ಅವಸ್ಥಾತ್ರಯವೆಂಬ ಪ್ರಪಂಚವು ಆತ್ಮನಲ್ಲಿಲ್ಲವೇ ಇಲ್ಲ – ಎಂದು ಹಿಂದೆ (55ರಲ್ಲಿ) ಹೇಳಿರುವದರ ಅಭಿಪ್ರಾಯವೂ ಇದೇ.

**59. ಅಸ್ತಿ ಚಾಯಮಪರೋ ದೃಷ್ಟಾನ್ತಃ । ಯಥಾ ಸ್ವಯಂ ಪ್ರಸಾರಿತಯಾ ಮಾಯಯಾ ಮಾಯಾವೀ ತ್ರಿಷ್ವಪಿ ಕಾಲೇಷು ನ ಸಂಸ್ಪೃಶ್ಯತೇ, ಅವಸ್ತುತ್ವಾತ್, ಏವಂ ಪರಮಾತ್ಮಾಪಿ ಸಂಸಾರಮಾಯಯಾ ನ ಸಂಸ್ಪೃಶ್ಯತ ಇತಿ । ಯಥಾ ಚ ಸ್ವಪ್ನದೃಗೇಕಃ ಸ್ವಪ್ನದರ್ಶನ ಮಾಯಯಾ ನ ಸಂಸ್ಪೃಶ್ಯತೇ, ಪ್ರಬೋಧಸಂಪ್ರಸಾದ ಯೋರನನ್ವಾಗತತ್ವಾತ್, ಏವಮವಸ್ಥಾತ್ರಯಸಾಕ್ಷೀ ಏಕೋ ಅವ್ಯಭಿಚಾರೀ ಅವಸ್ಥಾತ್ರಯೇಣ ವ್ಯಭಿಚಾರಿಣಾ ನ ಸಂಸ್ಪೃಶ್ಯತೇ । ಮಾಯಾಮಾತ್ರಂ ಹಿ ಏತತ್, ಯತ್ ಪರಮಾತ್ಮನೋಽವಸ್ಥಾತ್ರಯಾತ್ಮನಾ ಅವಭಾಸನಂ ರಜ್ಜ್ವಾ**

ಇವ ಸರ್ಪಾದಿಭಾವೇನೇತಿ । ಅತ್ರೋಕ್ತಂ ವೇದಾನ್ತಾರ್ಥಸಂಪ್ರದಾಯವಿದ್ಭಿರಾಚಾರ್ಯೈಃ 'ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ। ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ' ಇತಿ ॥ ಸೂ.ಭಾ. 2–1–9.

ಭಾವಾರ್ಥ :– ಕಾರಣದಲ್ಲಿ ಕಾರ್ಯವು ಲಯವಾದರೆ ಅದು ತನ್ನ ಧರ್ಮವನ್ನು ಕಾರಣಕ್ಕೆ ಅಂಟಿಸುವದಿಲ್ಲವೆಂಬುದಕ್ಕೆ ಇನ್ನೂ ಒಂದು ದೃಷ್ಟಾಂತವಿದೆ. ತಾನೇ ಹರಡಿರುವ ಮಾಯೆಯು ನಿಜವಾದ ವಸ್ತುವಲ್ಲದ್ದರಿಂದ ಮಾಯಾವಿಗೆ ಮೂರು ಕಾಲಗಳಲ್ಲಿಯೂ ಅದು ಹೇಗೆ ಅಂಟುವದಿಲ್ಲವೋ, ಕನಸುಕಾಣುವವನಿಗೆ ಕನಸೆಂಬ ಮಾಯೆಯು – ಎಚ್ಚರನಿದ್ರೆಗಳಲ್ಲಿ ಹಿಂಬಾಲಿಸಿಕೊಂಡು ಬಾರದೆ ಇರುವದರಿಂದ ಹೇಗೆ ಅಂಟಿಕೊಳ್ಳದೇ ಇರುವದೋ ಹಾಗೆಯೇ ತೋರಿಹಾರುತ್ತಿರುವ ಅವಸ್ಥಾತ್ರಯವು ಅದರ ಸಾಕ್ಷಿಗೆ ಅಂಟುವದಿಲ್ಲ. ಪರಮಾತ್ಮನು ಅವಸ್ಥಾತ್ರಯರೂಪದಿಂದ ತೋರುತ್ತಿರುವದು ಹಗ್ಗವು ಹಾವು ಮುಂತಾದ ರೂಪದಿಂದ ತೋರುವಂತೆ ಮಾಯಾಮಾತ್ರವಷ್ಟೆ? ಆದ್ದರಿಂದಲೇ ವೇದಾಂತಾರ್ಥಸಂಪ್ರದಾಯವನ್ನು ಬಲ್ಲ ಗೌಡಪಾದಾಚಾರ್ಯರು "ಅನಾದಿ ಮಾಯೆಯಿಂದ ಕನಸುಕಾಣುತ್ತಿರುವ ಜೀವನು ಎಚ್ಚತ್ತಾಗ ಅಜನೂ ಅನಿದ್ರನೂ ಅಸ್ವಪ್ನನೂ ಆದ ಅದ್ವೈತಾತ್ಮನನ್ನು ಅರಿತುಕೊಳ್ಳುವನು" ಎಂದಿರುತ್ತಾರೆ.

**ವಿವರಣೆ** :– ಪ್ರಪಂಚವೆಲ್ಲವೂ ಮಾಯೆಯಂತೆಯೂ ಕನಸಿನಂತೆಯೂ ಇರುವ ಹುಸಿತೋರಿಕೆಯೇ, ಅದರ ನಿಜವು ಆತ್ಮನೇ – ಎಂಬುದು ಒಟ್ಟರ್ಥ. 54, 55ರ ವಿವರಣೆಯನ್ನು ನೋಡಿರಿ.

* * * * *

## 10. ಅವಸ್ಥಾತ್ರಯ, ಕಾರ್ಯಕಾರಣಭಾವ

**60**. ಘಟಾಕಾಶೈರ್ಯಥಾ ಆಕಾಶ ಉದಿತಃ ಉತ್ಪನ್ನಃ, ತಥಾಪರೋ ಜೀವಾತ್ಮಭಿರುತ್ಪನ್ನಃ। ಜೀವಾತ್ಮನಾಂ ಪರಸ್ಮಾದಾತ್ಮನಃ ಉತ್ಪತ್ತಿರ್ಯಾ ಶ್ರೂಯತೇ ವೇದಾನ್ತೇಷು ಸಾ ಮಹಾಕಾಶಾತ್ ಘಟಾಕಾಶೋತ್ಪತ್ತಿಸಮಾ ನ ಪರಮಾರ್ಥತ ಇತ್ಯಭಿಪ್ರಾಯಃ। ತಸ್ಮಾದೇವಾಕಾಶಾತ್ ಘಟಾದಯಃ ಸಙ್ಘಾತಾ ಯಥಾ ಉತ್ಪದ್ಯನ್ತೇ ಏವಮ್ ಆಕಾಶಸ್ಥಾನೀಯಾತ್ ಪರಮಾತ್ಮನಃ ಪೃಥಿವ್ಯಾದಿಭೂತಸಙ್ಘಾತಾ ಆಧ್ಯಾತ್ಮಿಕಾಶ್ಚ ಕಾರ್ಯಕರಣಲಕ್ಷಣಾ ರಜ್ಜುಸರ್ಪವತ್ ವಿಕಲ್ಪಿತಾ ಜಾಯನ್ತೇ।

**ಅತ ಉಚ್ಯತೇ – ಘಟಾದಿವಚ್ಚ ಸಂಘಾತೈರುದಿತ ಇತಿ । ಯದಾ ಮನ್ದಬುದ್ಧಿ ಪ್ರತಿಪಿಪಾದಯಿಷಯಾ ಶ್ರುತ್ಯಾ ಆತ್ಮನೋ ಜಾತಿರುಚ್ಯತೇ ಜೀವಾದೀನಾಮ್, ತದಾ ಜಾತೌ ಉಪಗಮ್ಯಮಾನಾಯಾಮ್ ಏತನ್ನಿದರ್ಶನಮ್, ದೃಷ್ಟಾನ್ತಃ ॥**

**ಗೌ. ಕಾ. ಭಾ. 3–3.**

**ಭಾವಾರ್ಥ :– ಆಕಾಶವು ಗಡಿಗೆಯ ಬಯಲೇ ಮುಂತಾದ ರೂಪಗಳಿಂದ ಹೇಗೆ ಹುಟ್ಟುವದೋ ಹಾಗೆ ಪರಮಾತ್ಮನು ಜೀವಾತ್ಮರುಗಳ ರೂಪದಿಂದ ಹುಟ್ಟಿರುತ್ತಾನೆ. ಜೀವಾತ್ಮರು ಪರಮಾತ್ಮನಿಂದ ಹುಟ್ಟುವರೆಂದು ಶ್ರುತಿಯಲ್ಲಿ ಹೇಳುವಾಗ ಮಹಾಕಾಶದಿಂದ ಘಟಾಕಾಶವು ಹುಟ್ಟುವಂತೆಯೇ, ಆ ಹುಟ್ಟು ಪರಮಾರ್ಥವಲ್ಲ – ಎಂದು ಅಭಿಪ್ರಾಯ. ಅದೇ ಆಕಾಶದಿಂದ ಘಟಾದಿಸಂಘಾತಗಳು ಹುಟ್ಟುವಂತೆಯೇ ಆಕಾಶದಂತಿರುವ ಪರವಾತ್ಮನಿಂದ ಪೃಥಿವ್ಯಾದಿಗಳ ಸಂಘಾತಗಳೂ, ಆಧ್ಯಾತ್ಮಿಕವಾದ ಕಾರ್ಯಕರಣಸಂಘಾತಗಳೂ ಹಗ್ಗದ ಹಾವಿನಂತೆ ವಿಕಲ್ಪಿತವಾಗಿ ಹುಟ್ಟುತ್ತವೆ. ಆದ್ದರಿಂದ ಗಡಿಗೆಯೇ ಮುಂತಾದವುಗಳಂತೆ ಸಂಘಾತಗಳಾಗಿ ಹುಟ್ಟಿರುತ್ತಾನೆ – ಎಂದಿದೆ. ತಿಳಿವಳಿಕೆಸಾಲದವರಿಗೆ ಬೋಧಿಸುವದಕ್ಕಾಗಿ ಪರಮಾತ್ಮನಿಂದ ಜೀವಾದಿಗಳು ಹುಟ್ಟುವರೆಂದು ಶ್ರುತಿಯಲ್ಲಿ ಹೇಳುವಾಗ, ಒಪ್ಪಿಕೊಂಡಿರುವ ಜನ್ಮಕ್ಕೆ ಇದೇ ನಿದರ್ಶನವು, ದೃಷ್ಟಾಂತವು.**

**ವಿವರಣೆ :–** ಹಿಂದಿನ ಖಂಡದಲ್ಲಿ ಆತ್ಮತತ್ತ್ವವು ಅಜ, ಅನಿದ್ರ, ಅಸ್ವಪ್ನ – ಎಂದು ಹೇಳಿತ್ತಷ್ಟೆ? ಜೀವರು ಅಜರೆಂಬುದು ಹೇಗೆ? ಎಂಬುದನ್ನು ಇಲ್ಲಿ ತಿಳಿಯಹೇಳಿರುತ್ತದೆ. ಗಡಿಗೆ, ಮಡಕೆ, ಕುಡಿಕೆ – ಇವೆಲ್ಲವೂ ಆಕಾಶದ ಕಾರ್ಯಗಳಾದ್ದರಿಂದ ಆಕಾಶದ ರೂಪಾಂತರಗಳೇ; ಇದರಂತೆ ಹೊರಗೆ ನಮಗೆ ತೋರುತ್ತಿರುವ ಪಂಚಭೂತಗಳಿಂದಾಗಿರುವ ದೃಶ್ಯಗಳೆಲ್ಲವೂ ಆಕಾಶದಂತಿರುವ ಪರಮಾತ್ಮನ ಕಾರ್ಯಗಳೇ, ನಿಜವಾಗಿ ಪರಮಾತ್ಮನ ರೂಪಾಂತರಗಳೇ. ಗಡಿಗೆಯೇ ಮುಂತಾದವು ಉಂಟಾದವೆಂದು ನಾವು ವ್ಯವಹರಿಸುವಾಗ ಅವುಗಳೊಳಗಿನ ಆಕಾಶಗಳೂ ಪರಿಚ್ಛಿನ್ನವಾಗಿ ಬೇರೆಬೇರೆ ಉಂಟಾದವೆಂದು ತೋರುವಂತೆಯೇ ಪರಮಾತ್ಮನಿಂದ ಜೀವರು ಹುಟ್ಟಿದರೆಂದು ತೋರುತ್ತಿರುವದು. ಪರಮಾರ್ಥ ದೃಷ್ಟಿಯಿಂದ ಬಾಹ್ಯಪ್ರಪಂಚವೆಲ್ಲವೂ ಹೇಗೆ ಆಕಾಶಮಾತ್ರವೋ ಅದರಲ್ಲಿ ನಿಜವಾಗಿ ಹೇಗೆ ಯಾವ ವಿಕಾರಗಳೂ ಆಗಿಯೇ ಇಲ್ಲವೋ ಹಾಗೆಯೇ ಚೇತನಾ ಚೇತನರೂಪವಾಗಿ ಕಾಣುತ್ತಿರುವ ಪ್ರಪಂಚವೆಲ್ಲವೂ ನಿಜವಾಗಿ ಪರಮಾತ್ಮನೇ.

ಅವನನ್ನೇ ನಾವು ಜೀವರೆಂದೂ ದೇಹೇಂದ್ರಿಯಸಂಘಾತಗಳೆಂದೂ ವ್ಯವಹರಿಸುತ್ತಿರುವೆವು.

**61. ಕಥಂ ಪುನಃ ಅನ್ತಃಪ್ರಜ್ಞತ್ವಾದೀನಾಮಾತ್ಮನಿ ಗಮ್ಯಮಾನಾನಾಂ ರಜ್ಜ್ವಾದೌ ಸರ್ಪಾದಿವತ್ ಪ್ರತಿಷೇಧಾತ್ ಅಸತ್ತ್ವಂ ಗಮ್ಯತ ಇತಿ? ಉಚ್ಯತೇ। ಜ್ಞಸ್ವರೂಪಾವಿಶೇಷೇಽಪಿ ಇತರೇತರವ್ಯಭಿಚಾರಾತ್ ಅಸತ್ಯತ್ವಂ ರಜ್ಜ್ವಾದಾವಿವ ಸರ್ಪಧಾರಾದಿವಿಕಲ್ಪಿತಭೇದವತ್ । ಸರ್ವತ್ರಾವ್ಯಭಿಚಾರಾತ್ ಜ್ಞಸ್ವರೂಪಸ್ಯ ಸತ್ಯತ್ವಮ್॥ ಮಾಂ. ಭಾ. 7.**

**ಭಾವಾರ್ಥ** :– "ಅಂತಃಪ್ರಜ್ಞನಲ್ಲ" ಎಂದು ಮುಂತಾಗಿ ಅಲ್ಲಗಳೆದಮಾತ್ರದಿಂದ ಆತ್ಮನಲ್ಲಿ ತೋರುವ ಅಂತಃಪ್ರಜ್ಞತ್ವಾದಿಗಳು ಹಗ್ಗದ ಹಾವೇ ಮುಂತಾದದ್ದರಂತೆ ಹುಸಿಯೇ ಎಂಬುದು ಹೇಗೆ? ಎಂದರೆ ಹೇಳುತ್ತೇವೆ. ಆತ್ಮನು ಚೈತನ್ಯಸ್ವರೂಪನಾಗಿರುವದೆಂಬುದು ಎಲ್ಲಾ ಕಡೆಯಲ್ಲಿಯೂ ಒಂದೇ ರೂಪವಾಗಿರುತ್ತಿದ್ದರೂ ಒಂದನ್ನೊಂದು ಬಿಟ್ಟು ಬೇರ್ಪಡು ತ್ತಿರುವದರಿಂದ ಅವು ಹುಸಿ. ಹಗ್ಗವೇ ಮುಂತಾದವುಗಳಲ್ಲಿ ಹಾವು, ನೀರಿನಕೋಡಿ ಮುಂತಾದವುಗಳು ಕಲ್ಪಿತವಾಗಿರುವದರಿಂದ ಅವು ಹೇಗೆ ಅಸತ್ಯವೋ ಹಾಗೆಯೇ ಇದು –ಎಂದು (ತಿಳಿಯಬೇಕು). ಚೈತನ್ಯಸ್ವರೂಪವು ಮಾರ್ಪಡದೆ ಒಂದೇ ರೂಪದಲ್ಲಿರುವದ ರಿಂದ ಸತ್ಯವು.

**ವಿವರಣೆ** :– ಜೀವರು ದೇಹೇಂದ್ರಿಯಾದಿಗಳಿಂದ ಕೂಡಿಕೊಂಡು ಹುಟ್ಟುವಂತೆ ತೋರಿದರೂ ಪರಮಾತ್ಮಸ್ವರೂಪಕ್ಕಿಂತ ಬೇರೆಯಾಗಿಲ್ಲವೇ ಇಲ್ಲ ಎಂಬುದನ್ನು ಹಿಂದಿನ ಖಂಡದಲ್ಲಿ ಆಕಾಶದೃಷ್ಟಾಂತದಿಂದ ತಿಳಿಸಿಕೊಟ್ಟಿದ್ದಾಯಿತು. ಇನ್ನು 'ಆತ್ಮನಿಗೆ ಅವಸ್ಥೆಗಳು ತೋರುವದು ಮಾಯಿಕ' ಎಂದು ಹಿಂದೆ (59) ಹೇಳಿತ್ತಷ್ಟೆ? ಅದು ಹೇಗೆ ಎಂಬುದನ್ನು ಇಲ್ಲಿ ಯುಕ್ತಿಯಿಂದ ತೋರಿಸಿರುತ್ತದೆ. ಜಾಗ್ರತ್ಸ್ವಪ್ನಸುಷುಪ್ತಿಗಳೂ – ಸೃಷ್ಟಿಸ್ಥಿತಿಪ್ರಲಯಗಳೂ – ಒಂದಿರುವಾಗ ಮತ್ತೆ ಎರಡು ಎಲ್ಲಿಯೂ ಇರುವದೇ ಇಲ್ಲ. ಆತ್ಮಚೈತನ್ಯಸ್ವರೂಪವನ್ನು ಬಿಟ್ಟು ಅವು ತೋರುವ ಹಾಗೂ ಇಲ್ಲ. ಆದ್ದರಿಂದ ಆತ್ಮಸ್ವರೂಪದಲ್ಲಿಯೇ ಅವು ಹಗ್ಗದಲ್ಲಿ ತೋರಿಹಾರುವ ಸರ್ಪಾದಿವಿಕಲ್ಪಗಳಂತೆ ತೋರಿಹಾರುತ್ತಿರುವವೆಂದಾಯಿತು. ಚೈತನ್ಯವು ಮಾತ್ರ ಬೇರ್ಪಡುವದಿಲ್ಲ. ಅದು ಇಲ್ಲವೆಂದು ಕಲ್ಪಿಸುವದಕ್ಕೆ ಆಗುವಂತೆಯೂ ಇಲ್ಲ. ಆದ್ದರಿಂದ ದೃಷ್ಟಾಂತದ ಹಗ್ಗದಂತೆ ಅದೊಂದೇ ಪರಮಾರ್ಥ, ಅವಿಕಲ್ಪಿತ.

**62. ಸುಷುಪ್ತೇ ವ್ಯಭಿಚರತಿ ಇತಿ ಚೇತ್ । ನ । ಸುಷುಪ್ತಸ್ಯ ಅನುಭೂಯಮಾನತ್ವಾತ್ । "ನ ಹಿ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇ" ಇತಿ ಶ್ರುತೇಃ ॥ ಮಾಂ. ಭಾ. 7**

**ಭಾವಾರ್ಥ :–** ಸುಷುಪ್ತಿಯಲ್ಲಿ ಅದೂ ಮಾರ್ಪಡುವದಿಲ್ಲವೇ? ಎಂದರೆ ಹಾಗಲ್ಲ; ಏಕೆಂದರೆ ಸುಷುಪ್ತಿಯು ಅನುಭವಕ್ಕೆ ಬರುತ್ತದೆ.

**ವಿವರಣೆ :–** ಅವಸ್ಥೆಗಳು ಒಮ್ಮೆ ತೋರಿ ಆಮೇಲೆ ತೋರದೆ ಹೋಗಿ ಬಿಡುವಂತೆ ತನಿನಿದ್ರೆಯಲ್ಲಿ ಆತ್ಮಚೈತನ್ಯವೂ ತೋರದೆ ಹೋಗುತ್ತಿರುವದಲ್ಲ! ಆದ್ದರಿಂದ ಅದೂ ಹುಸಿಯೋ ಆಯಿತಲ್ಲ! ಎಂದು ಯಾರಾದರೂ ಶಂಕಿಸಬಹುದು. ಆದರೆ ಈ ಶಂಕೆ ಸರಿಯಲ್ಲ ; ಏಕೆಂದರೆ ಸುಷುಪ್ತಿ ಎಂಬುದು ನಮ್ಮ ಅನುಭವದಲ್ಲಿದೆ. ಯಾವ ಅನುಭವಕ್ಕೆ ಅದು ತೋರುವದೋ ಆ ಅನುಭವರೂಪವಾದ ಚೈತನ್ಯವೇ ನಮ್ಮೆಲ್ಲರ ಆತ್ಮನು. ಅವನು ಗಾಢನಿದ್ರೆಯಲ್ಲಿರುವಂತೆ, ಮರಣ, ಪ್ರಲಯ – ಮುಂತಾದ ಅವಸ್ಥೆಗಳಲ್ಲಿಯೂ ಚೈತನ್ಯರೂಪದಿಂದ ಇದ್ದೇ ಇರುತ್ತಾನೆ. ಏಕೆಂದರೆ ಅನುಭವವಿಲ್ಲದೆ ಯಾರೂ ಪ್ರಲಯಾದಿಗಳನ್ನು ಕಲ್ಪಿಸುವದಕ್ಕೆ ಆಗುವಂತಿಲ್ಲ. ಆದ್ದರಿಂದ ಆತ್ಮನೊಬ್ಬನೇ ನಿರ್ವಿಕಾರನಾದ ನಿರವಸ್ಥನಾದ ಪರಮಾರ್ಥವು. ಅವಸ್ಥೆಗಳು – ಎಂದರೆ ಆತ್ಮನು ಬೇರೆಬೇರೆಯ ಅವಸ್ಥೆಗಳಲ್ಲಿರುವನೆಂಬ ಕಲ್ಪನೆಗಳು ಹುಸಿತೋರಿಕೆ – ಎಂದಾಯಿತು.

**63. ಮನಃಪ್ರಚಾರೋಪಾಧಿವಿಶೇಷಸಂಬನ್ಧಾತ್ ಇನ್ದ್ರಿಯಾರ್ಥಾನ್ ಗೃಹ್ಣನ್ ತದ್ವಿಶೇಷಾಪನ್ನೋ ಜೀವೋ ಜಾಗರ್ತಿ; ತದ್ವಾಸನಾವಿಶಿಷ್ಟಃ ಸ್ವಪ್ನಾನ್ ಪಶ್ಯನ್ ಮನಃಶಬ್ದವಾಚ್ಯೋ ಭವತಿ । ಸ ಉಪಾಧಿದ್ವಯೋಪರಮೇ ಸುಷುಪ್ತಾವಸ್ಥಾಯಾಮುಪಾಧಿಕೃತವಿಶೇಷಾಭಾವಾತ್ ಸ್ವಾತ್ಮನಿ ಪ್ರಲೀನ ಇವ ಇತಿ 'ಸ್ವಂ ಹ್ಯಪೀತೋ ಭವತಿ' ಇತ್ಯುಚ್ಯತೇ ॥ ಸೂ. ಭಾ. 1–1–9.**

**ಭಾವಾರ್ಥ :–** ಮನಸ್ಸಿನ ವೃತ್ತಿಗಳೆಂಬ ಉಪಾಧಿಗಳ ಸಂಬಂಧದಿಂದ ಇಂದ್ರಿಯಾರ್ಥಗಳನ್ನು ಗ್ರಹಿಸುವದರಿಂದ ಆ ವಿಶೇಷವನ್ನು ಹೊಂದಿ ಜೀವನು ಎಚ್ಚತ್ತಿರುತ್ತಾನೆ; ಅದರ ವಾಸನೆಗಳಿಂದೊಡಗೂಡಿ ಸ್ವಪ್ನಗಳನ್ನು ಕಾಣುತ್ತಿರುವದರಿಂದ ಮನಸ್ಸೆಂಬ ಹೆಸರುಳ್ಳವನಾಗುವನು. ಈ ಎರಡು ಉಪಾಧಿಗಳೂ ಇಲ್ಲವಾಗಲು ಸುಷುಪ್ತಿ

ಯಲ್ಲಿ ಉಪಾಧಿಯಿಂದಾದ ವಿಶೇಷವಿಲ್ಲದ್ದರಿಂದ ತನ್ನ ಸ್ವರೂಪದಲ್ಲಿ ಅಡಗಿಕೊಂಡಂತೆ ಆಗುತ್ತಾನೆ. ಆದ್ದರಿಂದ 'ತನ್ನಲ್ಲಿ ಪ್ರಲಯವಾಗುತ್ತಾನೆ' – ಎಂದು ಶ್ರುತಿಯಲ್ಲಿ ಹೇಳಿದೆ.

**ವಿವರಣೆ** :– ಆತ್ಮನಿಗೆ ಎಚ್ಚರಕನಸುಗಳಲ್ಲಿರುವ ವಿಶೇಷರೂಪವು ಉಪಾಧಿಯಿಂದಲೇ ಹೊರತು ಅವನಿಗೇ ಸೇರಿದ್ದಲ್ಲ.

**64. ಅಪಿ ಚ ನ ಕದಾಚಿತ್ ಜೀವಸ್ಯ ಬ್ರಹ್ಮಣಾ ಸಂಪತ್ತಿರ್ನಾಸ್ತಿ, ಸ್ವರೂಪಸ್ಯ ಅನಪಾಯಿತ್ವಾತ್ । ಸ್ವಪ್ನಜಾಗರಿತಯೋಸ್ತು ಉಪಾಧಿಸಂಪರ್ಕವಶಾತ್ ಪರರೂಪಾಪತ್ತಿಮಿವ ಅಪೇಕ್ಷ್ಯ ತದುಪಶಮಾತ್ ಸುಷುಪ್ತೇ ಸ್ವರೂಪಾಪತ್ತಿರ್ವಿವಕ್ಷ್ಯತೇ ॥ ಸೂ. ಭಾ. 3–2–7**

ಭಾವಾರ್ಥ :– ಇದಲ್ಲದೆ ಜೀವನೂ ಬ್ರಹ್ಮದೊಡನೆ ಬೆರೆತಿಲ್ಲದ್ದೆಂಬುದು ಯಾವಾಗಲೂ ಇಲ್ಲ. ಏಕೆಂದರೆ ಬ್ರಹ್ಮವೇ ಅವನ ಸ್ವರೂಪವಾದ್ದರಿಂದ ಅದು ಅವನನ್ನು ಬಿಟ್ಟಗಲುವಂತೆಯೇ ಇಲ್ಲ. ಎಚ್ಚರಕನಸುಗಳಲ್ಲಿ ಉಪಾಧಿಗಳ ಸಂಪರ್ಕದಿಂದ ಮತ್ತೊಂದು ರೂಪವನ್ನು ಪಡೆದುಕೊಂಡಂತೆ ಆಗಿರುವದರಿಂದ ಅದಕ್ಕೆ ಹೋಲಿಸಿ ಸುಷುಪ್ತಿಯಲ್ಲಿ ತನ್ನ ರೂಪವನ್ನು ಪಡೆಯುತ್ತಾನೆಂದಿದೆ.

**ವಿವರಣೆ** :– ಜೀವನು ಯಾವಾಗಲೂ ತನ್ನ ರೂಪದಿಂದಲೇ, ಬ್ರಹ್ಮವಾಗಿಯೇ, ಇರುತ್ತಿದ್ದರೂ ಎಚ್ಚರಕನಸುಗಳಲ್ಲಿ ಇಂದ್ರಿಯಗಳು, ಮನಸ್ಸು – ಎಂಬ ಉಪಾಧಿಗಳ ವಶದಿಂದ ಬೇರೊಂದು ರೂಪವನ್ನು ಪಡೆದುಕೊಂಡಂತೆ ಕಾಣಿಸುತ್ತಿರುತ್ತಾನೆ.

**65. ಯಸ್ತು ಮಧ್ಯೇ ಬುದ್ಧಾನ್ತಾದ್ಯವಸ್ಥೋಪನ್ಯಾಸಾತ್ ಸಂಸಾರಿ ಸ್ವರೂಪವಿವಕ್ಷಾಂ ಮನ್ಯತೇ ಸ ಪ್ರಾಚೀಮಪಿ ದಿಶಂ ಪ್ರಸ್ಥಾಪಿತಃ ಪ್ರತೀಚೀಮಪಿ ದಿಶಂ ಪ್ರತಿಷ್ಠೇತ । ಯತೋ ನ ಬುದ್ಧಾನ್ತಾದ್ಯವಸ್ಥೋಪನ್ಯಾಸೇನ ಅವಸ್ಥಾವತ್ತ್ವಂ ಸಂಸಾರಿತ್ವಂ ವಾ ವಿವಕ್ಷತಿ, ಕಿಂ ತರ್ಹಿ, ಅವಸ್ಥಾರಹಿತತ್ವಮ್ ಅಸಂಸಾರಿತ್ವಂ ಚ ॥ ಸೂ. ಭಾ. 1–3–42.**

ಭಾವಾರ್ಥ :– ನಡುವೆ ಎಚ್ಚರವೇ ಮುಂತಾದ ಅವಸ್ಥೆಗಳನ್ನು ಹೇಳಿರುವದರಿಂದ ಇಲ್ಲಿ (ಬೃ. 4–3–7....) ಸಂಸಾರಿಸ್ವರೂಪವನ್ನು ಹೇಳಿರಬೇಕು – ಎಂದು ಯಾವನು ಬಗೆಯುತ್ತಾನೋ ಅವನು ಪೂರ್ವದಿಕ್ಕಿನ ಕಡೆಗೆ ಹೊರಡಿಸಿ ಕಳುಹಿಸಿದರೂ ಪಶ್ಚಿಮ

ದಿಕ್ಕಿಗೆ ಹೋದಾನು ; ಏಕೆಂದರೆ ಇಲ್ಲಿ ಅವಸ್ಥೆಗಳನ್ನು ಹೇಳಿರುವದು ಜೀವನಿಗೆ ಅವಸ್ಥೆಗಳಾಗಲಿ ಸಂಸಾರವಾಗಲಿ ಇದೆಯೆನ್ನುವದಕ್ಕಲ್ಲ, ಮತ್ತೇನೆಂದರೆ ಅವಸ್ಥೆಗಳಿಲ್ಲ, ಸಂಸಾರವಿಲ್ಲ – ಎಂದು ತಿಳಿಸುವದಕ್ಕೆ.

**ವಿವರಣೆ** :– ಇಲ್ಲಿಗೆ ಅವಸ್ಥಾತ್ರಯದ ಅಧ್ಯಾರೋಪಾಪವಾದಪ್ರಕ್ರಿಯೆ ಮುಗಿಯಿತು.

**66. ನನು ಶಬ್ದಾದಿಹೀನಂ ಬ್ರಹ್ಮ ಜಗತಃ ಕಾರಣಮ್, ಬಾಢಮ್, ನ ತು ಶಬ್ದಾದಿಮತ್ ಕಾರ್ಯಂ ಕಾರಣಾತ್ಮನಾ ಹೀನಂ ಪ್ರಾಗುತ್ಪತ್ತೇಃ ಇದಾನೀಂ ವಾ ಅಸ್ತಿ ॥ ಸೂ. ಭಾ. 2–1–6.**

ಭಾವಾರ್ಥ :– ಶಬ್ದವೇ ಮೊದಲಾದ ಗುಣಗಳಿಲ್ಲದ ಬ್ರಹ್ಮವು ಜಗತ್ಕಾರಣವಲ್ಲವೆ? ಎಂದರೆ ಹೌದು, ಆದರೆ ಕಾರಣವಾದ ಬ್ರಹ್ಮರೂಪವನ್ನು ಬಿಟ್ಟು ಜಗತ್ತು ಸೃಷ್ಟಿಗೆ ಮೊದಲೂ ಇಲ್ಲ, ಈಗಲೂ ಇಲ್ಲ.

**ವಿವರಣೆ** :– ಹೀಗೆ ಕಾರ್ಯಕಾರಣಭಾವದ ಅಧ್ಯಾರೋಪಾಪವಾದ ಪ್ರಕ್ರಿಯೆ ಮುಗಿಯಿತು.

* * * * *

## 11. ಜೀವೇಶ್ವರ ವಿಭಾಗ

**67. ಏವಮ್ ಅವಿದ್ಯಾಕೃತನಾಮರೂಪೋಪಾಧ್ಯನುರೋಧೀ ಈಶ್ವರೋ ಭವತಿ, ವ್ಯೋಮೇವ ಘಟಕರಕಾದ್ಯುಪಾಧ್ಯನುರೋಧಿ । ಸ ಚ ಸ್ವಾತ್ಮಭೂತಾನೇವ ಘಟಾಕಾಶಸ್ಥಾನೀಯಾನ್ ಅವಿದ್ಯಾ ಪ್ರತ್ಯುಪಸ್ಥಾಪಿತನಾಮರೂಪಕೃತ ಕಾರ್ಯಕರಣಸಂಘಾತಾನುರೋಧಿನೋ ಜೀವಾಖ್ಯಾನ್ ವಿಜ್ಞಾನಾತ್ಮನಃ ಪ್ರತಿ ಈಷ್ಟೇ ವ್ಯವಹಾರ ವಿಷಯೇ ॥ ಸೂ. ಭಾ. 2–1–14.**

ಭಾವಾರ್ಥ :– ಹೀಗೆ ಗಡಿಗೆ, ಕುಡಿಕೆ ಮುಂತಾದ ಉಪಾಧಿಗಳನ್ನನುರಿಸುವ ಆಕಾಶದಂತೆ – ಅವಿದ್ಯೆಯಿಂದಾಗಿರುವ ನಾಮರೂಪಗಳೆಂಬ ಉಪಾಧಿಗಳನ್ನನುಸರಿಸುವಾತನು ಈಶ್ವರನಾಗಿರುತ್ತಾನೆ; ಮತ್ತು ಆತನು ಘಟಾಕಾಶಗಳಂತೆ ತನ್ನ ಆತ್ಮ ಸ್ವರೂಪವೇ

**ಆಗಿದ್ದು, ಅವಿದ್ಯೆಯು ತಂದೊಡ್ಡಿರುವ ನಾಮರೂಪಗಳಿಂದಾಗಿರುವ ದೇಹೇಂದ್ರಿಯ ಸಂಘಾತಗಳನ್ನನುಸರಿಸಿರುವ, ಜೀವರೆಂಬ ಹೆಸರಿನ ವಿಜ್ಞಾನಾತ್ಮರುಗಳನ್ನು ವ್ಯವಹಾರದ ವಿಷಯದಲ್ಲಿ ಆಳುತ್ತಿರುವನು.**

**ವಿವರಣೆ :–** ಆಕಾಶವು ಒಂದೇ ಆದರೂ ಮಹಾಕಾಶವನ್ನವಲಂಬಿಸಿಯೇ ಘಟಾಕಾಶಗುಹಾಕಾಶವೇ ಮುಂತಾದವುಗಳಿಗೆ ಆಸರೆಯನ್ನಿತ್ತಿರುವದೆಂಬ ವ್ಯವಹಾರಕ್ಕೆ ವಿಷಯವಾಗಿರುವಂತೆ, ಬ್ರಹ್ಮವು ಒಂದೇ ಆಗಿದ್ದರೂ ನಾಮರೂಪಗಳೆಂಬ ಉಪಾಧಿಗಳ ವಶದಿಂದ ಈಶ್ವರನೆಂದೂ, ನಾಮರೂಪಗಳ ವಿಕಾರವಾಗಿರುವ ದೇಹೇಂದ್ರಿಯಾದಿಸಂಘಾತಗಳೆಂಬ ಉಪಾಧಿಯುಳ್ಳ ಜೀವರುಗಳಿಗೆ ಒಡೆಯನೆಂದೂ ವ್ಯವಹಾರವಾಗಿರುತ್ತದೆ.

**68. ತದೇವಮ್ ಅವಿದ್ಯಾತ್ಮಕೋಪಾಧಿಪರಿಚ್ಛೇದಾಪೇಕ್ಷಮೇವ ಈಶ್ವರಸ್ಯ ಈಶ್ವರತ್ವಂ ಸರ್ವಜ್ಞತ್ವಂ ಸರ್ವಶಕ್ತಿತ್ವಂ ಚ, ನ ಪರಮಾರ್ಥತೋ ವಿದ್ಯಯಾ ಅಪಾಸ್ತಸರ್ವೋಪಾಧಿಸ್ವರೂಪೇ ಆತ್ಮನಿ ಈಶಿತ್ರೀಶಿತವ್ಯಸರ್ವಜ್ಞತ್ವಾದಿವ್ಯವಹಾರ ಉಪಪದ್ಯತೇ ॥ ಸೂ.ಭಾ. 2–1–14.**

ಭಾವಾರ್ಥ :– ಹೀಗೆ ಅವಿದ್ಯೆಯಿಂದಾಗಿರುವ ಉಪಾಧಿಯ ಪರಿಚ್ಛೇದವನ್ನಿಟ್ಟುಕೊಂಡರೇ ಈಶ್ವರನಿಗೆ ಈಶ್ವರತ್ವವೂ ಸರ್ವಜ್ಞತ್ವವೂ ಸರ್ವಶಕ್ತಿತ್ವವೂ ಇರುತ್ತದೆ. ನಿಜವಾಗಿ ವಿದ್ಯೆಯಿಂದ ಎಲ್ಲಾ ಉಪಾಧಿಗಳೂ ಅಳಿದಿರುವ ಸ್ವರೂಪವುಳ್ಳ ಆತ್ಮನಲ್ಲಿ ಈಶ್ವರ, ಈಶಿತವ್ಯ, ಸರ್ವಜ್ಞತ್ವ – ಮುಂತಾದ ವ್ಯವಹಾರವು ಹೊಂದುವಂತಿರುವದಿಲ್ಲ.

**ವಿವರಣೆ :–**ಅವಿದ್ಯಾದೃಷ್ಟಿಯಿಂದ ಈಶ್ವರವ್ಯವಹಾರವು ಅಧ್ಯಾರೋಪಿತ, ವಿದ್ಯಾದೃಷ್ಟಿಯಿಂದಲ್ಲವೆಂಬುದು ಅಪವಾದ.

**69. ಬಹೂನಿ ಮೇ ಮಮ ವ್ಯತೀತಾನಿ ಅತಿಕ್ರಾನ್ತಾನಿ ಜನ್ಮಾನಿ ತವ ಚ ಹೇ ಅರ್ಜುನ । ತಾನಿ ಅಹಂ ವೇದ ಜಾನೇ ಸರ್ವಾಣಿ ನ ತ್ವಂ ವೇತ್ಥ ನ ಜಾನೀಷೇ ಧರ್ಮಾಧರ್ಮಾದಿಪ್ರತಿಬದ್ಧಜ್ಞಾನಶಕ್ತಿತ್ವಾತ್ । ಅಹಂ ಪುನಃ, ನಿತ್ಯಶುದ್ಧಬುದ್ಧಮುಕ್ತಸ್ವಭಾವತ್ವಾತ್ ಅನಾವರಣಜ್ಞಾನಶಕ್ತಿಃ – ಇತಿ ವೇದ, ಅಹಂ ಹೇ ಪರನ್ತಪ ॥ ಗೀ.ಭಾ. 4–5.**

ಭಾವಾರ್ಥ :– ಎಲೈ ಅರ್ಜನನೇ, ನನಗೂ ನಿನಗೂ ಎಷ್ಟೋ ಜನ್ಮಗಳು ಕಳೆದು ಹೋಗಿವೆ, ಆಗಿಹೋಗಿರುತ್ತವೆ. ನನಗೆ ಅವೆಲ್ಲವೂ ಗೊತ್ತು, ಧರ್ಮಾಧರ್ಮಾದಿಗಳು ನಿನ್ನ ಜ್ಞಾನಶಕ್ತಿಗೆ ಪ್ರತಿಬಂಧಕವಾಗಿರುವದರಿಂದ ನೀನು ಅರಿಯದೆ ಗೊತ್ತು ಮಾಡಿಕೊಳ್ಳದೆ ಇದೀಯೆ. ನಾನಾದರೋ ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳವನಾದ್ದರಿಂದ, ನನ್ನ ಜ್ಞಾನಶಕ್ತಿಗೆ ಯಾವ ಮುಸುಕೂ ಇರುವದಿಲ್ಲವಾದ್ದರಿಂದ ಎಲೈ ಶತ್ರುತಾಪನನೆ, ಅದೆಲ್ಲವನ್ನೂ ತಿಳಿದಿರುವೆನಯ್ಯ.

ವಿವರಣೆ :– ಈಶ್ವರನ ಜ್ಞಾನಕ್ಕೆ ಆವರಣವಿಲ್ಲದ್ದರಿಂದ ಅವನು ಸರ್ವಜ್ಞನು; ಜೀವನ ಜ್ಞಾನಕ್ಕೆ ಧರ್ಮಾಧರ್ಮಗಳು, ಕಾರ್ಯಕಾರಣಭಾವ, ಭೂತ ಭವಿಷ್ಯದ್ವರ್ತಮಾನಕಾಲಗಳು – ಇವು ಅಡ್ಡಿಯಾಗಿರುವದರಿಂದ ಅವನ ಜ್ಞಾನವು ಮಿತವಾಗಿರುತ್ತದೆ.

**70.** ನನು ನಾಸ್ತಿ ತಾವಜ್ಜ್ಞಾನಪ್ರತಿಬನ್ಧಕಾರಣವಾನ್ ಈಶ್ವರಾದನ್ಯಃ ಸಂಸಾರೀ, "ನಾನ್ಯೋಽತೋಽಸ್ತಿ ದ್ರಷ್ಟಾ" .... ನಾನ್ಯೋಽತೋಽಸ್ತಿ ವಿಜ್ಞಾತಾ (ಬೃ.) ಇತಿ ಶ್ರುತೇಃ । ತತ್ರ ಕಿಮಿದಮುಚ್ಯತೇ ಸಂಸಾರಿಣಃ ಶರೀರಾದ್ಯಪೇಕ್ಷಾ ಜ್ಞಾನೋತ್ಪತ್ತಿರ್ನೇಶ್ವರಸ್ಯ ಇತಿ। ಅತ್ರೋಚ್ಯತೇ ಸತ್ಯಮ್, ನೇಶ್ವರಾದನ್ಯಃ ಸಂಸಾರೀ; ತಥಾಪಿ ದೇಹಾದಿ ಸಙ್ಘಾತೋಪಾಧಿಸಂಬನ್ಧ ಇಷ್ಯತ ಏವ, ಘಟಕರಕಗಿರಿ ಗುಹಾದಿಸಂಬನ್ಧ ಇವ ವ್ಯೋಮ್ನಃ, ತತ್ಕೃತಶ್ಚ ಶಬ್ದಪ್ರತ್ಯಯವ್ಯವಹಾರೋ ಲೋಕಸ್ಯ ದೃಷ್ಟಃ "ಘಟಚ್ಛಿದ್ರಮ್", "ಕರಕಾದಿಚ್ಛಿದ್ರಮ್" ಇತ್ಯಾದಿಃ ಆಕಾಶವ್ಯತಿರೇಕೇಽಪಿ, ತತ್ಕೃತಾ ಚ ಆಕಾಶೇ ಘಟಾಕಾಶಾದಿಭೇದಮಿಥ್ಯಾಬುದ್ಧಿರ್ದೃಷ್ಟಾ। ತಥಾ ಇಹಾಪಿ ದೇಹಾದಿ ಸಙ್ಘಾತೋಪಾಧಿಸಂಬನ್ಧಾವಿವೇಕಕೃತಾ ಈಶ್ವರಸಂಸಾರಿಭೇದ ಮಿಥ್ಯಾಬುದ್ಧಿಃ। ದೃಶ್ಯತೇ ಚ ಆತ್ಮನ ಏವ ಸತಃ ದೇಹಾದಿಸಙ್ಘಾತೇ ಅನಾತ್ಮನಿ ಆತ್ಮತ್ವಾಭಿನಿವೇಶಃ, ಮಿಥ್ಯಾಬುದ್ಧಿಮಾತ್ರೇಣ ಪೂರ್ವೇಣ । ಸತಿ ಚೈವಂ ಸಂಸಾರಿತ್ವೇ ದೇಹಾದ್ಯಪೇಕ್ಷಮೀಕ್ಷಿತೃತ್ವಮ್ ಉಪಪನ್ನಂ ಸಂಸಾರಿಣಃ ॥

**ಸೂ.ಭಾ. 1–1–5.**

ಭಾವಾರ್ಥ :– (ಶಂಕೆ) ಈಶ್ವರನಿಗಿಂತ ಬೇರೆಯಾಗಿ, ಜ್ಞಾನಕ್ಕೆ ಅಡ್ಡಿಯುಳ್ಳವನೆಂಬುವನು ಯಾರೂ ಇಲ್ಲವೇಇಲ್ಲವಲ್ಲ! 'ಇವನಿಂದ ಬೇರೆಯಾದ ನೋಡುವವನಿಲ್ಲ.... ಇವನಿಗಿಂತ ಬೇರೆಯಾದ ಜ್ಞಾತೃವು ಇಲ್ಲವೇ ಇಲ್ಲ' (ಬೃ.) ಎಂದು

ಶ್ರುತಿಹೇಳುತ್ತದೆಯಲ್ಲ ! ಹೀಗಿರುವಲ್ಲಿ 'ಸಂಸಾರಿಯಾಗಿರುವವನಿಗೆ ಜ್ಞಾನವುಂಟಾಗಲು ಶರೀರಾದಿಗಳು ಬೇಕು. ಈಶ್ವರನಿಗಲ್ಲ' ಎನ್ನುತ್ತೀರಲ್ಲ ಇದೇನು?

(ಪರಿಹಾರ) :– ಇದಕ್ಕೆ ಹೇಳುತ್ತೇವೆ. ನಿಜ, ಈಶ್ವರನಿಗಿಂತ ಬೇರೆಯಾಗಿ ಸಂಸಾರಿಯೆಂಬವನು ಇಲ್ಲವೇಇಲ್ಲ; ಆದರೂ ದೇಹಾದಿಗಳ ಸಂಘಾತವೆಂಬ ಉಪಾಧಿಯ ಸಂಬಂಧವೊಂದು ಇದೆ ಎಂದು ಒಪ್ಪಿರುತ್ತೇವೆ; ಆಕಾಶಕ್ಕೆ ಗಡಿಗೆ, ಕುಡಿಕೆ, ಗುಡ್ಡದಲ್ಲಿರುವ ಗವಿ – ಮುಂತಾದವುಗಳ ಸಂಬಂಧವಿರುವದಲ್ಲವೆ? ಹಾಗೆ ಆಕಾಶಕ್ಕಿಂತ ಬೇರೆಯಾದ (ಬಿಡಿ ಆಕಾಶಗಳು) ಇಲ್ಲದಿದ್ದರೂ ಆ ಸಂಬಂಧದಿಂದ ಆಕಾಶದಲ್ಲಿ 'ಘಟದ ರಂಧ್ರ', 'ಕುಡಿಕೆಯೇ ಮುಂತಾದವುಗಳ ರಂಧ್ರ' ಎಂದು ಜನರಿಗೆ ಅರಿವು ಉಂಟಾಗುವದು, ಅವರು ಹಾಗೆಂದು ಆಡಿಕೊಳ್ಳುವದು – ಎಂಬ ವ್ಯವಹಾರವುಂಟಾಗುವದು, ಕಂಡುಬರುತ್ತದೆ; ಆ ವ್ಯವಹಾರದಿಂದ ಘಟಾಕಾಶವೇ ಮುಂತಾದ ಭೇದಗಳಿರುವವೆಂಬ ತಪ್ಪುತಿಳಿವಳಿಕೆ ಯುಂಟಾಗುವದೂ ಕಂಡುಬರುತ್ತದೆ. ಹಾಗೆಯೇ ಇಲ್ಲಿಯೂ ದೇಹಾದಿಸಂಘಾತಗಳೆಂಬ ಉಪಾಧಿಯ ಸಂಬಂಧವನ್ನು ಬಿಡಿಸಿ ತಿಳಿದುಕೊಳ್ಳದೆ ಇರುವದರಿಂದ ಈಶ್ವರ, ಸಂಸಾರಿ – ಇವರು ಬೇರೆ ಎಂಬ ತಪ್ಪುತಿಳಿವಳಿಕೆಯುಂಟಾಗಿರುತ್ತದೆ. ಆತ್ಮನು ಆತ್ಮನೇ ಆಗಿರುತ್ತಿದ್ದರೂ ದೇಹಾದಿಸಂಘಾತವೆಂಬ ಅನಾತ್ಮದಲ್ಲಿ ಆತ್ಮನೆಂಬ ಬುದ್ಧಿಯು ಮೊದಲು ಹೇಳಿದ ತಪ್ಪುತಿಳಿವಳಿಕೆಯಿಂದ ಉಂಟಾಗುತ್ತಿರುವದು ಕಂಡುಬರುತ್ತದೆ. ಹೀಗೆ (ತಪ್ಪು ತಿಳಿವಳಿಕೆಯಿಂದ) ಸಂಸಾರಿತ್ವವಾಗಿರುವದರಿಂದ ಸಂಸಾರಿಗೆ ದೇಹಾದಿಗಳ ಅಪೇಕ್ಷೆಯಿಂದಲೇ ಜ್ಞಾತೃತ್ವವುಂಟಾಗುವದೆಂಬುದು ಯುಕ್ತವಾಗಿರುತ್ತದೆ.

**71.** ಪ್ರತಿಷಿಧ್ಯತ ಏವ ತು ಪರಮಾರ್ಥತಃ ಸರ್ವಜ್ಞಾತ್ ಪರಮೇಶ್ವರಾತ್ ಅನ್ಯೋ ದ್ರಷ್ಟಾ ಶ್ರೋತಾ ವಾ 'ನಾನ್ಯೋಽತೋಽಸ್ತಿ ದ್ರಷ್ಟಾ' ಇತ್ಯಾದಿನಾ । ಪರಮೇಶ್ವರಸ್ತು ಅವಿದ್ಯಾಕಲ್ಪಿತಾತ್ ಶಾರೀರಾತ್ ಕರ್ತುರ್ಭೋಕ್ತುಃ, ವಿಜ್ಞಾನಾತ್ಮಾಖ್ಯಾದನ್ಯಃ । ಯಥಾ ಮಾಯಾವಿನಶ್ಚರ್ಮಖಡ್ಗಧರಾತ್ ಸೂತ್ರೇಣಾಕಾಶಮಧಿರೋಹತಃ ಸ ಏವ ಮಾಯಾವೀ ಪರಮಾರ್ಥರೂಪೋ ಭೂಮಿಷ್ಠೋಽನ್ಯಃ । ಯಥಾ ವಾ ಘಟಾಕಾಶಾತ್ ಉಪಾಧಿಪರಿಚ್ಛಿನ್ನಾತ್ ಅನುಪಾಧಿಪರಿಚ್ಛಿನ್ನ ಆಕಾಶೋಽನ್ಯಃ ॥ **ಸೂ. ಭಾ. 1–1–17.**

ಭಾವಾರ್ಥ :– ಸರ್ವಜ್ಞನಾಗಿರುವ ಪರಮೇಶ್ವರನಿಗಿಂತ ಬೇರೆಯಾಗಿ ದ್ರಷ್ಟೃವಾಗಲಿ ಶ್ರೋತೃವಾಗಲಿ ಇಲ್ಲವೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಆದರೆ ಅವಿದ್ಯಾಕಲ್ಪಿತನಾಗಿರುವ

ಕರ್ತೃಭೋಕ್ತೃವಾದ, ಶಾರೀರನಾದ, ವಿಜ್ಞಾನಾತ್ಮನಿಗಿಂತಲೂ ಈಶ್ವರನು ಬೇರೆ. ಕತ್ತಿಗುರಾಣಿಗಳನ್ನು ಹಿಡಿದು ನೂಲೇಣಿಯಿಂದ ಆಕಾಶವನ್ನು ಹತ್ತುತ್ತಿರುವ ಮಾಯಾವಿಗಿಂತ ನೆಲದಮೇಲೆ ನಿಂತಿರುವ ನಿಜವಾದ ಮಾಯಾವಿಯು ಬೇರೆಯಲ್ಲವೆ? ಅಥವಾ ಉಪಾಧಿಪರಿಚ್ಛಿನ್ನವಾದ ಘಟಾಕಾಶಕ್ಕಿಂತ ಉಪಾಧಿಪರಿಚ್ಛೇದವಿಲ್ಲದ ಆಕಾಶವು ಬೇರೆಯಲ್ಲವೆ? ಹಾಗೆ.

**72. ನ ಹಿ ಜೀವೋ ನಾಮ ಅತ್ಯನ್ತಭಿನ್ನೋ ಬ್ರಹ್ಮಣಃ ; 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ' – ಇತ್ಯಾದಿ ಶ್ರುತಿಭ್ಯಃ। ಬುದ್ಧ್ಯಾದ್ಯುಪಾಧಿಕೃತಂ ತು ವಿಶೇಷಮ್ ಆಶ್ರಿತ್ಯ ಬ್ರಹ್ಮೈವ ಸನ್ ಜೀವಃ ಕರ್ತಾ ಭೋಕ್ತಾ ಚ ಇತ್ಯುಚ್ಯತೇ। ತಸ್ಯ ಉಪಾಧಿಕೃತವಿಶೇಷಪರಿತ್ಯಾಗೇನ ಸ್ವರೂಪಂ ಬ್ರಹ್ಮ ದರ್ಶಯಿತುಮ್ 'ನ ವಾಚಂ ವಿಜಿಜ್ಞಾಸೀತ, ವಕ್ತಾರಂ ವಿದ್ಯಾತ್' ಇತ್ಯಾದಿನಾ ಪ್ರತ್ಯಗಾತ್ಮಾಭಿಮುಖೀಕರಣಾರ್ಥಮ್ ಉಪದೇಶೋ ನ ವಿರುಧ್ಯತೇ ॥ ಸೂ.ಭಾ. 1–1–31**

ಭಾವಾರ್ಥ :– ಜೀವನೆಂದರೆ ಬ್ರಹ್ಮಕ್ಕಿಂತ ಅತ್ಯಂತವಾಗಿ ಬೇರೆಯಾದವನೇ ಎಂದಲ್ಲ. ಏಕೆಂದರೆ 'ಅದೇ ನೀನಾಗಿರುವೆ', 'ನಾನು ಬ್ರಹ್ಮವಾಗಿರುವೆನು' ಎಂದು ಮುಂತಾದ ಶ್ರುತಿಗಳಿವೆ. ಬುದ್ಧಿಯೇ ಮುಂತಾದ ಉಪಾಧಿಗಳಿಂದಾಗಿರುವ ವಿಶೇಷವನ್ನಿಟ್ಟುಕೊಂಡು ಬ್ರಹ್ಮವೇ ಆಗಿರುವ ಆತ್ಮನನ್ನೇ 'ಜೀವನು', 'ಕರ್ತೃ', 'ಭೋಕ್ತೃ'ವೆನ್ನಲಾಗಿದೆ. ಉಪಾಧಿಯಿಂದಾಗಿರುವ ಭೇದವನ್ನು ಕೈಬಿಟ್ಟು ಅವನ ಸ್ವರೂಪವನ್ನು ತಿಳಿಸಿಕೊಡೋಣವೆಂದು ಶ್ರುತಿಯಲ್ಲಿ 'ವಾಕ್ಕನ್ನು ತಿಳಿಯುವದಕ್ಕೆ ಹೋಗಬಾರದು, ವಕ್ತೃವನ್ನೇ ಅರಿತುಕೊಳ್ಳಬೇಕು' – ಎಂದು ಮುಂತಾಗಿ ಒಳಗಿನ ಆತ್ಮದ ಕಡೆಗೆ ತಿರುಗಿಸುವದಕ್ಕಾಗಿ ಉಪದೇಶ ಮಾಡಿರುವದೇನೂ ವಿರುದ್ಧವಲ್ಲ.

**ವಿವರಣೆ :–** "ವಕ್ತೃ (ಮಾತನಾಡುವ) ಜೀವನನ್ನು ಅರಿತುಕೊಳ್ಳಬೇಕು" ಎಂದು ಶ್ರುತಿಯಲ್ಲಿ ಉಪದೇಶಿಸಿರುವದು ಜೀವನನ್ನು ಜೀವನಾಗಿಯೇ ಅರಿತುಕೊಂಡರೆ ಪುರುಷಾರ್ಥವೆಂದು ತಿಳಿಸುವದಕ್ಕಲ್ಲ, ಜೀವನ ನಿಜವಾದ ಸ್ವರೂಪವಾದ ಈಶ್ವರತತ್ತ್ವವನ್ನು ಅರಿತುಕೊಳ್ಳಬೇಕು ಎಂದು ತಿಳಿಸುವದಕ್ಕೆ; ಜೀವೇಶ್ವರವಿಭಾಗವು ಅಧ್ಯಾರೋಪಮಾತ್ರ, ಅದು ನಿಜವಾಗಿಲ್ಲ – ಎಂಬ ಅಭಿಪ್ರಾಯ.

73. ಕಃ ಪುನರಯಂ ಶಾರೀರೋ ನಾಮ ಪರಮಾತ್ಮನೋಽನ್ಯಃ, ಯಃ ಪ್ರತಿಷಿಧ್ಯತೇ 'ಅನುಪಪತ್ತೇಸ್ತು ನ ಶಾರೀರಃ' ಇತ್ಯಾದಿನಾ । ಶ್ರುತಿಸ್ತು 'ನಾನ್ಯೋಽತೋಽಸ್ತಿ ದ್ರಷ್ಟಾ ನಾನ್ಯೋಽತೋಽಸ್ತಿ ಶ್ರೋತಾ' ಇತ್ಯೇವಂಜಾತೀಯಕಾ ಪರಮಾತ್ಮನೋಽನ್ಯಮಾತ್ಮಾನಂ ವಾರಯತಿ । ತಥಾ ಸ್ಮೃತಿರಪಿ 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ' ಇತ್ಯೇವಂಜಾತೀಯಕಾ ಇತಿ। ಅತ್ರೋಚ್ಯತೇ – ಸತ್ಯಮೇವೈತತ್ । ಪರ ಏವಾತ್ಮಾ ದೇಹೇನ್ದ್ರಿಯ ಮನೋಬುದ್ಧ್ಯುಪಾಧಿಭಿಃ ಪರಿಚ್ಛಿದ್ಯಮಾನೋ ಬಾಲೈಃ ಶಾರೀರ ಇತ್ಯುಪಚರ್ಯತೇ। ಯಥಾ ಘಟಕರಕಾದ್ಯುಪಾಧಿವಶಾತ್ ಅಪರಿಚ್ಛಿನ್ನಮಪಿ ನಭಃ ಪರಿಚ್ಛಿನ್ನ ವದವಭಾಸತೇ, ತದ್ವತ್ । ತದಪೇಕ್ಷಯಾ ಚ ಕರ್ಮ ಕರ್ತೃತ್ವಾದಿ ಭೇದವ್ಯವಹಾರೋ ನ ವಿರುಧ್ಯತೇ ಪ್ರಾಕ್ 'ತತ್ತ್ವಮಸಿ' ಇತ್ಯಾತ್ಮೈಕತ್ವೋಪದೇಶಗ್ರಹಣಾತ್ । ಗೃಹೀತೇತ್ವಾತ್ಮೈಕತ್ವೇ ಬನ್ಧಮೋಕ್ಷಾದಿ ಸರ್ವವ್ಯವಹಾರಪರಿಸಮಾಪ್ತಿರೇವ ಸ್ಯಾತ್ ॥ ಸೂ.ಭಾ. 1–2–6

ಭಾವಾರ್ಥ :– (ಪ್ರಶ್ನೆ :) ಹಾಗಾದರೆ ಪರಮಾತ್ಮನಿಗಿಂತ ಬೇರೆಯಾಗಿರುವ, 'ಹೊಂದುವದಿಲ್ಲವಾದ್ದರಿಂದ ಶಾರೀರನಲ್ಲ' ಎಂದು ಮುಂತಾಗಿರುವ ಸೂತ್ರಗಳಿಂದ ಅಲ್ಲಗಳೆದಿರುವ ಈ ಶಾರೀರನೆಂಬುವನು ಯಾರು? 'ಇವನಿಗಿಂತ ಬೇರೆಯಾದ ದ್ರಷ್ಟೃವಿಲ್ಲ. ಇವನಿಗಿಂತ ಬೇರೆಯಾಗಿರುವ ಶ್ರೋತೃವಿಲ್ಲ' ಎಂಬೀ ಜಾತಿಯ ಶ್ರುತಿಯೇನೋ ಪರಮಾತ್ಮನಿಗಿಂತ ಬೇರೆಯಾದ ಆತ್ಮನು ಇಲ್ಲವೆಂದೇ ಹೇಳುತ್ತಿದೆಯಲ್ಲ! ಹೀಗೆಯೇ 'ಸರ್ವಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನೂ ನಾನೆಂದೇ ತಿಳಿ' ಎಂಬಂಥ ಸ್ಮೃತಿಯೂ ಹಾಗೆನ್ನುತ್ತಿದೆಯಲ್ಲ ! (ಉತ್ತರ:) ಇದಕ್ಕೆ ನಾವು ಹೇಳುವದೇನೆಂದರೆ ಇದು ನಿಜವೇ, ದೇಹ, ಇಂದ್ರಿಯ, ಮನಸ್ಸು, ಬುದ್ಧಿ – ಎಂಬ ಉಪಾಧಿಗಳ ಅಳತೆಯಿಂದ ಪರಮಾತ್ಮನನ್ನೇ ಅವಿವೇಕಿಗಳು 'ಶಾರೀರ' ಎಂದು ವ್ಯವಹರಿಸುತ್ತಿರುವರು. ಯಾವ ಅಳತೆಗೂ ಸಿಕ್ಕದೆ ಇದ್ದರೂ ಆಕಾಶವು ಗಡಿಗೆ, ಕುಡಿಕೆ – ಮುಂತಾದ ಉಪಾಧಿಗಳಿಂದ ಪರಿಚ್ಛಿನ್ನವಾಗಿರುವಂತೆ ತೋರುತ್ತಿರುವದಲ್ಲವೆ, ಹಾಗೆಯೇ ಇದು. ಈ ಉಪಾಧಿಪರಿಚ್ಛೇದವನ್ನಿಟ್ಟುಕೊಂಡು (ಜೀವನು) ಕರ್ತೃ, (ಪರಮೇಶ್ವರನು ಉಪಾಸನೆಗೆ) ಕರ್ಮ – ಎಂಬುದೇ ಮುಂತಾದ ವ್ಯವಹಾರವು 'ನೀನೇ ಅದು' ಎಂಬ ಆತ್ಮೈಕತ್ವೋಪದೇಶವನ್ನು ಅರಿತುಕೊಳ್ಳುವವರೆಗೆ ಇದ್ದುಕೊಂಡಿರುವದು ವಿರುದ್ಧವಲ್ಲ. ಆತ್ಮೈಕತ್ವವನ್ನು ಗ್ರಹಿಸಿದಮೇಲಾದರೋ ಬಂಧ, ಮೋಕ್ಷ ಮುಂತಾದ ಸರ್ವವ್ಯವಹಾರವೂ ನಿಂತೇಹೋಗುವದು.

**ವಿವರಣೆ :–** ದೇಹೇಂದ್ರಿಯಾದ್ಯುಪಾಧಿಗಳಿಂದ ಆತ್ಮನಲ್ಲಿ ಜೀವತ್ವವಿರುವಂತೆ ವ್ಯವಹಾರವಾಗುತ್ತಿರುವದಲ್ಲ, ಆ ಅವಿದ್ಯಾವ್ಯವಹಾರವನ್ನಿಟ್ಟುಕೊಂಡೇ ಉಪಾಸನೆ, ಬಂಧ, ಮೋಕ್ಷ – ಮುಂತಾದ ವ್ಯವಹಾರವು ಸಾಗುತ್ತಿರುವದು. ಇದೆಲ್ಲವನ್ನೂ ಶ್ರುತಿಯು ಅಧ್ಯಾರೋಪದೃಷ್ಟಿಯಿಂದಲೇ ಹೇಳುತ್ತಿರುವದು. 'ಆ ಬ್ರಹ್ಮವೇ ನೀನು' ಎಂದು ಉಪದೇಶಿಸುವಾಗ ಆ ಅಧ್ಯಾರೋಪವನ್ನು ಅಪವಾದಮಾಡಲಾಗುತ್ತದೆ.

**74. ಕಥಂ ಪುನಃ ಏಕಸ್ಮಿನ್ ದೇಹೇ ದ್ವೌ ದ್ರಷ್ಟಾರೌ ಉಪಪದ್ಯೇತೇ ಯಶ್ಚಾಯಮೀಶ್ವರೋಽನ್ತರ್ಯಾಮೀ, ಯಶ್ಚಾಯಮಿತರಃ ಶಾರೀರಃ । ಕಾ ಪುನರಿಹಾನುಪಪತ್ತಿಃ? 'ನಾನ್ಯೋಽತೋಽಸ್ತಿ ದ್ರಷ್ಟಾ' ಇತ್ಯಾದಿಶ್ರುತಿವಚನಂ ವಿರುಧ್ಯೇತ । ಅತ್ರ ಹಿ ಪ್ರಕೃತಾತ್ ಅನ್ತರ್ಯಾಮಿಣಃ ಅನ್ಯಂ ದ್ರಷ್ಟಾರಂ, ಶ್ರೋತಾರಂ, ಮನ್ತಾರಂ, ವಿಜ್ಞಾತಾರಂ ಚ ಆತ್ಮನಂ ಪ್ರತಿಷೇಧತಿ । ನಿಯನ್ತ್ರನ್ತರಪ್ರತಿಷೇಧಾರ್ಥಮ್ ಏತದ್ವಚನಮ್ ಇತಿ ಚೇತ್, ನ । ನಿಯನ್ತ್ರನ್ತರಾಪ್ರಸಙ್ಗಾತ್, ಅವಿಶೇಷಶ್ರವಣಾಚ್ಚ । ಅತ್ರೋಚ್ಯತೇ – ಅವಿದ್ಯಾಪ್ರತ್ಯುಪಸ್ಥಾಪಿತಕಾರ್ಯಕರಣೋಪಾಧಿನಿಮಿತ್ತೋಽಯಂ ಶಾರೀರಾನ್ತರ್ಯಾಮಿಣೋರ್ಭೇದವ್ಯಪದೇಶೋ ನ ಪಾರಮಾರ್ಥಿಕಃ । ಏಕೋ ಹಿ ಪ್ರತ್ಯಗಾತ್ಮಾ ಭವತಿ, ನ ದ್ವೌ ಪ್ರತ್ಯಗಾತ್ಮಾನೌ ಸಂಭವತಃ । ಏಕಸ್ಯೈವ ತು ಭೇದವ್ಯವಹಾರಃ ಉಪಾಧಿಕೃತಃ, ಯಥಾ 'ಘಟಾಕಾಶಃ', 'ಮಹಾಕಾಶಃ', ಇತಿ। ತತಶ್ಚ ಜ್ಞಾತೃಜ್ಞೇಯಾದಿಭೇದಶ್ರುತಯಃ ಪ್ರತ್ಯಕ್ಷಾದೀನಿ ಚ ಪ್ರಮಾಣಾನಿ ಸಂಸಾರಾನುಭವಃ, ವಿಧಿಪ್ರತಿಷೇಧಶಾಸ್ತ್ರಂ ಚ – ಇತಿ ಸರ್ವಮೇತತ್ ಉಪಪದ್ಯತೇ । ತಥಾ ಚ ಶ್ರುತಿಃ 'ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ' ಇತ್ಯವಿದ್ಯಾವಿಷಯೇ ಸರ್ವಂ ವ್ಯವಹಾರಂ ದರ್ಶಯತಿ। 'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್' ಇತಿ ವಿದ್ಯಾವಿಷಯೇ ಸರ್ವಂ ವ್ಯವಹಾರಂ ವಾರಯತಿ ॥ ಸೂ.ಭಾ. 1–2–20**

ಭಾವಾರ್ಥ :– (ಪ್ರಶ್ನೆ :) ಒಂದೇ ದೇಹದಲ್ಲಿ ಅಂತರ್ಯಾಮಿಯಾದ ಈ ಈಶ್ವರನೆಂಬವನೊಬ್ಬ, ಅವನಿಗಿಂತ ಬೇರೆಯಾಗಿರುವ ಈ ಜೀವನೊಬ್ಬ – ಹೀಗೆ ಇಬ್ಬರು ದ್ರಷ್ಟೃಗಳು ಇರುತ್ತಾರೆಂಬುದು ಹೇಗೆ ಯುಕ್ತವಾದೀತು? (ಸಿದ್ಧಾಂತಿ:) ಇದರಲ್ಲಿ

ಹೊಂದುಗಡೆಯಿಲ್ಲದ್ದೇನು? (ಆಕ್ಷೇಪ :) 'ಇವನಿಗಿಂತ ಬೇರೆಯಾದ ದ್ರಷ್ಟೃವಿಲ್ಲ' ಎಂದುಮುಂತಾಗಿರುವ ಶ್ರುತಿವಚನಕ್ಕೆ ವಿರುದ್ಧವಾಗುತ್ತದೆ. ಏಕೆಂದರೆ ಇಲ್ಲಿ ಅಂತರ್ಯಾಮಿಗಿಂತ ಬೇರೆಯಾಗಿರುವ ದ್ರಷ್ಟೃವೂ, ಶ್ರೋತೃವೂ, ಮಂತೃವೂ, ವಿಜ್ಞಾತೃವೂ ಆಗಿರುವ ಆತನನ್ನು ಅಲ್ಲಗಳೆದಿರುತ್ತದೆ. (ಸಿದ್ಧಾಂತಿ:) ಇನ್ನೊಬ್ಬ ಅಂತರ್ಯಾಮಿ ಇಲ್ಲವೆನ್ನುವದಕ್ಕೆ ಈ ಮಾತು ಬಂದಿದೆ ಎಂದರೋ? (ಆಕ್ಷೇಪ :) ಹಾಗಾಗಲಾರದು, ಏಕೆಂದರೆ ಇಲ್ಲಿ ಮತ್ತೊಬ್ಬ ಅಂತರ್ಯಾಮಿ ಇದಾನೆಂಬ ಪ್ರಸಕ್ತಿಯೇ ಇಲ್ಲ; 'ಇನ್ನೊಬ್ಬ ದ್ರಷ್ಟೃವಿಲ್ಲ' ಎಂದು ಮುಂತಾಗಿ ಸಾಮಾನ್ಯವಾಗಿಯೇ ಶ್ರುತಿಯು ಹೇಳುತ್ತಿದೆ. (ಸಿದ್ಧಾಂತಿ:) ಇದಕ್ಕೆ ಹೇಳುತ್ತೇವೆ; ಅವಿದ್ಯೆಯು ತಂದೊಡ್ಡಿರುವ ಶರೀರೇಂದ್ರಿಯಗಳೆಂಬ ಉಪಾಧಿಯಿಂದಲೇ ಶಾರೀರ, ಅಂತರ್ಯಾಮಿ – ಎಂದು ಬೇರೆ ಬೇರೆಯಾಗಿ ಹೇಳಿರುತ್ತದೆ. ಈ ಭೇದವು ಪರಮಾರ್ಥವಲ್ಲ. ಇದರಿಂದ ಜ್ಞಾತೃ, ಜ್ಞೇಯ – ಮುಂತಾದ ಭೇದವನ್ನು ತಿಳಿಸುವ ಶ್ರುತಿಗಳು, ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳು, ಸಂಸಾರಾನುಭವ, ವಿಧಿಪ್ರತಿಷೇಧಗಳನ್ನು ತಿಳಿಸುವ ಶಾಸ್ತ್ರ – ಇವೆಲ್ಲ ಹೊಂದುಗಡೆಯಾಗುತ್ತವೆ. ಆದ್ದರಿಂದಲೇ ಶ್ರುತಿಯು 'ಎಲ್ಲಿ ದ್ವೈತವಿರುವದೋ ಅಲ್ಲಿ ಒಬ್ಬನು ಮತ್ತೊಬ್ಬನನ್ನು ಕಾಣುತ್ತಾನೆ' ಎಂದು ಅವಿದ್ಯೆಯ ವಿಷಯದಲ್ಲಿ ಎಲ್ಲಾ ವ್ಯವಹಾರವೂ ಉಂಟೆಂದು ಹೇಳುತ್ತಿದೆ; 'ಆದರೆ ಎಲ್ಲಿ ಎಲ್ಲವೂ ಆತ್ಮನೇ ಎಂದಾಯಿತೋ ಅಲ್ಲಿ ಏತರಿಂದ ಯಾರನ್ನು ನೋಡಿಯಾನು? ' ಎಂದು ವಿದ್ಯೆಯ ವಿಷಯದಲ್ಲಿ ಯಾವ ವ್ಯವಹಾರವೂ ಇಲ್ಲವೆನ್ನುತ್ತಿದೆ.

**ವಿವರಣೆ** :– ಎಲ್ಲಾ ವ್ಯವಹಾರವೂ ಅವಿದ್ಯೆಯಿಂದ ತೋರುವ ದ್ವೈತವನ್ನು ಸತ್ಯವೆಂದಿಟ್ಟುಕೊಂಡೇ ಸಾಗಿರುತ್ತದೆ. ಇದರಂತೆ ಜೀವೇಶ್ವರವಿಭಾಗವ್ಯವಹಾರವನ್ನೂ ತಿಳಿಯಬೇಕು. ಅಧ್ಯಾರೋಪದೃಷ್ಟಿಯಿಂದ ಈ ವಿಭಾಗವನ್ನಿಟ್ಟುಕೊಂಡೇ ಶ್ರುತಿಯು ವಿಧಿಪ್ರತಿಷೇಧಮೋಕ್ಷಾದಿಗಳನ್ನು ಕುರಿತು ಹೇಳುತ್ತಿದೆ.

**75. ಕ್ಷೇತ್ರಜ್ಞೋ ಹಿ ಕರ್ತೃತ್ವೇನ ಭೋಕ್ತೃತ್ವೇನ ಚ ಪ್ರತಿಶರೀರಂ ಬುದ್ಧ್ಯಾದ್ಯುಪಾಧಿಸಂಬದ್ಧೋ ಲೋಕತ ಏವ ಪ್ರಸಿದ್ಧಃ, ನಾಸೌ ಶ್ರುತ್ಯಾ ತಾತ್ಪರ್ಯೇಣ ವಿವಕ್ಷ್ಯತೇ ಈಶ್ವರಸ್ತು ಲೋಕತೋಽಪ್ರಸಿದ್ಧತ್ವಾತ್ ಶ್ರುತ್ಯಾ ತಾತ್ಪರ್ಯೇಣ ವಿವಕ್ಷತೇ ॥ ಸೂ.ಭಾ. 1–3–7.**

ಭಾವಾರ್ಥ :– ಜೀವನು ಕರ್ತೃ, ಭೋಕ್ತೃ, ಒಂದೊಂದು ಶರೀರದಲ್ಲಿಯೂ ಅಂತಃಕರಣವೇ ಮುಂತಾದ ಉಪಾಧಿಗಳ ಸಂಬಂಧವುಳ್ಳವನಾಗಿರುತ್ತಾನೆ – ಎಂಬುದು ಲೋಕದಲ್ಲಿಯೇ ಪ್ರಸಿದ್ಧವಾಗಿರುತ್ತದೆ; ಅದನ್ನು ಶ್ರುತಿಯು ತಾತ್ಪರ್ಯದಿಂದ ಹೇಳುವದಕ್ಕೆ

ಹೊರಟಿಲ್ಲ. ಆದರೆ ಈಶ್ವರನು ಲೋಕದಲ್ಲಿ ಪ್ರಸಿದ್ಧನಾಗಿರುವದಿಲ್ಲವಾಗಿ ಶ್ರುತಿಯು ತಾತ್ಪರ್ಯದಿಂದ ಅವನನ್ನು ತಿಳಿಸುವದಕ್ಕೆ ಬಂದಿರುತ್ತದೆ.

**76**. ಯಾವದೇವ ಸ್ಥಾಣಾವಿವ ಪುರುಷಬುದ್ಧಿಂ ದ್ವೈತಲಕ್ಷಣಾಮ್ ಅವಿದ್ಯಾಂ ನಿವರ್ತಯನ್ ಕೂಟಸ್ಥನಿತ್ಯದೃಕ್ಸ್ವರೂಪಮಾತ್ಮಾನಮ್ "ಅಹಂ ಬ್ರಹ್ಮಾಸ್ಮಿ" ಇತಿ ನ ಪ್ರತಿಪದ್ಯತೇ ತಾವತ್ ಜೀವಸ್ಯ ಜೀವತ್ವಮ್ । ಯದಾ ತು ದೇಹೇನ್ದ್ರಿಯಮನೋಬುದ್ಧಿಸಙ್ಘಾತಾದ್ ವ್ಯುತ್ಥಾಪ್ಯ ಶ್ರುತ್ಯಾ ಪ್ರತಿಬೋಧ್ಯತೇ । "ನಾಸಿ ತ್ವಂ ದೇಹೇನ್ದ್ರಿಯಮನೋಬುದ್ಧಿಸಙ್ಘಾತಃ, ನಾಸಿ ಸಂಸಾರೀ, ಕಿಂ ತರ್ಹಿ ತದ್ಯತ್ ಸತ್ಯಂ ಸ ಆತ್ಮಾ ಚೈತನ್ಯಮಾತ್ರಸ್ವರೂಪಃ, ತತ್ತ್ವಮಸಿ" ಇತಿ ತದಾ ಕೂಟಸ್ಥನಿತ್ಯದೃಕ್ಸ್ವರೂಪವ್ ಆತ್ಮಾನಂ ಪ್ರತಿಬುಧ್ಯ, ಅಸ್ಮಾತ್ ಶರೀರಾದ್ಯಭಿಮಾನಾತ್ ಸಮುತ್ತಿಷ್ಠನ್ ಸ ಏವ ಕೂಟಸ್ಥನಿತ್ಯದೃಕ್ಸ್ವರೂಪ ಆತ್ಮಾಭವತಿ ॥ ಸೂ.ಭಾ. **1–3–19**.

ಭಾವಾರ್ಥ :– ಎಲ್ಲಿಯವರೆಗೆ ಮೋಟುಮರವನ್ನು ಮನುಷ್ಯನೆಂಬ ಭಾವನೆಯಂತೆ ಇರುವ ದ್ವೈತವನ್ನು ತೋರಿಸುವ ಅವಿದ್ಯೆಯನ್ನು ತೊಲಗಿಸಿಕೊಂಡು ಕೂಟಸ್ಥನಿತ್ಯದೃಗ್ರೂಪವೇ ಆಗಿರುವ ತನ್ನನ್ನು 'ನಾನು ಬ್ರಹ್ಮವಾಗಿದ್ದೇನೆ' ಎಂದು ಅರಿತುಕೊಳ್ಳುವದಿಲ್ಲವೋ ಅಲ್ಲಿಯವರೆಗೆ ಜೀವನು ಜೀವನಾಗಿರುವನು. ಆದರೆ ಯಾವಾಗ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಇವುಗಳ ಗುಂಪನ್ನು ಬಿಡಿಸಿ ಶ್ರುತಿಯು 'ನೀನು ದೇಹೇಂದ್ರಿಯಮನೋಬುದ್ಧಿಗಳ ಗುಂಪಲ್ಲ, ಸಂಸಾರಿಯಲ್ಲ; ಮತ್ತೇನೆಂದರೆ ಸತ್ಯವೇ ಆಗಿ, ಚೈತನ್ಯಸ್ವರೂಪನಾದ ಆತ್ಮನೇ ಆಗಿರುವದಲ್ಲ. ಅದೇ ನೀನಾಗಿರುವೆ' ಎಂದು ಎಚ್ಚರಿಸುವದೋ, ಆಗ ಕೂಟಸ್ಥನಿತ್ಯದೃಕ್ಸ್ವರೂಪವೇ ತಾನೆಂದು ಅರಿತುಕೊಂಡು ಈ ಶರೀರವೇ ಮುಂತಾದದ್ದರ ಅಭಿಮಾನವನ್ನು ಬಿಟ್ಟೆದ್ದು ಅದೇ ಕೂಟಸ್ಥನಿತ್ಯದೃಕ್ಸ್ವರೂಪನಾದ ಆತ್ಮನೇ ಆಗಿಬಿಡುತ್ತಾನೆ.

77. ನಿತ್ಯಶುದ್ಧಬುದ್ಧಮುಕ್ತಸ್ವಭಾವೇ ಕೂಟಸ್ಥನಿತ್ಯೇ ಏಕಸ್ಮಿನ್ ಅಸಙ್ಗೇ ಪರಮಾತ್ಮನಿ ತದ್ವಿಪರೀತಂ ಜೈವಂ ರೂಪಂ ವ್ಯೋಮ್ನೀವ ತಲಮಲಾದಿ ಪರಿಕಲ್ಪಿತಮ್ । ತತ್ ಆತ್ಮೈಕತ್ವಪ್ರತಿಪಾದನಪರೈರ್ವಾಕ್ಯೈರ್ನ್ಯಾಯೋಪೇತೈರ್ದ್ವೈತವಾದಪ್ರತಿಷೇಧೈಶ್ಚ ಅಪನೇಷ್ಯಾಮಿ ಇತಿ ಪರಮಾತ್ಮನೋ ಜೀವಾದನ್ಯತ್ವಂ ದ್ರಢಯತಿ । ಜೀವಸ್ಯ ತು ನ ಪರಸ್ಮಾದನ್ಯತ್ವಂ ಪ್ರತಿಪಿಪಾದಯಿಷತಿ

ಕಿಂ ತು ಅನುವದತ್ಯೇವ ಅವಿದ್ಯಾಕಲ್ಪಿತಂ ಲೋಕಪ್ರಸಿದ್ಧಂ ಜೀವಭೇದಮ್ । ಏವಂ ಹಿ ಸ್ವಾಭಾವಿಕ ಕರ್ತೃತ್ವಭೋಕ್ತೃತ್ವಾನುವಾದೇನ ಪ್ರವೃತ್ತಾಃ ಕರ್ಮವಿಧಯಃ, ನ ವಿರುದ್ಧ್ಯನ್ತ – ಇತಿ ಮನ್ಯತೇ ॥ ಸೂ. ಭಾ. 1–3–19.

ಭಾವಾರ್ಥ :– ಸ್ವಭಾವದಿಂದಲೇ ನಿತ್ಯಶುದ್ಧಬುದ್ಧಮುಕ್ತನಾಗಿರುವ ಕೂಟಸ್ಥನಿತ್ಯನಾದ ಅಸಂಗನಾದ ಒಬ್ಬನೇ ಆದ ಪರಮಾತ್ಮನಲ್ಲಿ ಇದಕ್ಕೆ ವಿರುದ್ಧವಾದ ಜೀವರೂಪವನ್ನು ಆಕಾಶದಲ್ಲಿ ತಲವು ಮಲಿನವಾಗಿರುವದು – ಎಂದುಮುಂತಾಗಿ ಕಲ್ಪಿಸಿರುವಂತೆ ಜನರು ಕಲ್ಪಿಸಿಕೊಂಡಿರುತ್ತಾರೆ. ಆತ್ಮನು ಒಬ್ಬನೇ ಎಂದು ತಿಳಿಸುವ ಯುಕ್ತಿಸಹಿತವಾದ ಉಪನಿಷದ್ವಾಕ್ಯಗಳಿಂದ ಅದನ್ನು ಅಲ್ಲಗಳೆಯೋಣ ಎಂಬ ಅಭಿಪ್ರಾಯದಿಂದ ಪರಮಾತ್ಮನು ಜೀವನಿಗಿಂತ ಬೇರೆಯೆಂದು ಸೂತ್ರಕಾರರು ಗಟ್ಟಿಗೊಳಿಸುತ್ತಿದಾರೆ. ಜೀವನು ಪರಮಾತ್ಮನಿಗಿಂತ ಬೇರೆಯೆಂಬುದನ್ನು ಮಾತ್ರ ತಾತ್ಪರ್ಯದಿಂದ ಅವರು ಹೇಳುವದಕ್ಕೆ ಹೊರಟಿಲ್ಲ. ಮತ್ತೆ ಏನೆಂದರೆ ಅವಿದ್ಯೆಯಿಂದ ಲೋಕದಲ್ಲಿ ಪ್ರಸಿದ್ಧವಾಗಿರುವ ಜೀವಭೇದವನ್ನು ಸುಮ್ಮನೆ ಅನುವಾದಮಾಡುತ್ತಿದಾರೆ. ಹೀಗೆ ಸ್ವಭಾವದಿಂದಿದ್ದುಕೊಂಡಿರುವ ಕರ್ತೃತ್ವಭೋಕ್ತೃತ್ವಗಳನ್ನು ಅನುವಾದಮಾಡಿ ಕೊಂಡಿರುವದರಿಂದ ಕರ್ಮವಿಧಿಗಳು ತತ್ತ್ವಜ್ಞಾನಕ್ಕೆ ವಿರುದ್ಧವಲ್ಲ – ಎಂಬುದು ಅವರ ಅಭಿಪ್ರಾಯ.

78. ನ ಚೇದಮಾಶಙ್ಕಿತವ್ಯಮ್ ಏಕಃ ಕ್ಷೇತ್ರಜ್ಞೋಽನುಶೇತೇ ಅನ್ಯೋ ಜಹಾತಿ ಇತ್ಯತಃ ಕ್ಷೇತ್ರಜ್ಞಭೇದಃ ಪಾರಮಾರ್ಥಿಕಃ ಪರೇಷಾಮಿಷ್ಟಃ ಪ್ರಾಪ್ನೋತೀತಿ। ನ ಹೀಯಂ ಕ್ಷೇತ್ರಜ್ಞಭೇದಪ್ರತಿಪಿಪಾದಯಿಷಾ ಕಿಂ ತು ಬನ್ಧಮೋಕ್ಷ ವ್ಯವಸ್ಥಾಪ್ರತಿಪಿಪಾದಯಿಷಾ ತ್ವೇಷಾ । ಪ್ರಸಿದ್ಧಂ ತು ಭೇದಮನೂದ್ಯ ಬನ್ಧಮೋಕ್ಷವ್ಯವಸ್ಥಾ ಪ್ರತಿಪಾದ್ಯತೇ । ಭೇದಸ್ತೂಪಾಧಿನಿಮಿತ್ತೋ ಮಿಥ್ಯಾ ಜ್ಞಾನಕಲ್ಪಿತಃ ನ ಪಾರಮಾರ್ಥಿಕಃ ॥ ಸೂ.ಭಾ. 1–4–10.

ಭಾವಾರ್ಥ :– ಕ್ಷೇತ್ರಜ್ಞನು ಪ್ರಕೃತಿಯನ್ನು ಅನುಸರಿಸುತ್ತಾನೆ, ಈಶ್ವರನು ಅದನ್ನು ಬಿಟ್ಟುಬಿಡುತ್ತಾನೆ – ಎನ್ನುವದರಿಂದ ಈಶ್ವರನಿಗಿಂತ ಕ್ಷೇತ್ರಜ್ಞನು ಬೇರೆ ಎಂದಂತೆ ಆಗಿ ದ್ವೈತಿಗಳಿಗೆ ಇಷ್ಟವಾಗಿರುವ ಕ್ಷೇತ್ರಜ್ಞಭೇದವೇ ಬಂದೊದಗುವದಲ್ಲ! – ಎಂದು ಶಂಕಿಸಬಾರದು. ಏಕೆಂದರೆ ಇದು ಕ್ಷೇತ್ರಜ್ಞರು ಅನೇಕರು ಇದಾರೆಂಬುದನ್ನು ಪ್ರತಿಪಾದನೆ ಮಾಡುವದಕ್ಕೆ ಬಂದ ಶ್ರುತಿಯಲ್ಲ, ಮತ್ತೇನೆಂದರೆ ಬಂಧಮೋಕ್ಷಗಳನ್ನು ಪ್ರತಿಪಾದನೆ

ಮಾಡುವದಕ್ಕೆ ಬಂದದ್ದು. ಭೇದವಾದರೋ ಉಪಾಧಿಯ ನಿಮಿತ್ತದಿಂದಾದದ್ದು, ಮಿಥ್ಯಾಜ್ಞಾನದಿಂದ ಕಲ್ಪಿತವಾದದ್ದು, ಪರಮಾರ್ಥವಲ್ಲ.

**ವಿವರಣೆ** :– ಜೀವ, ಈಶ್ವರ – ಎಂದು ಆತ್ಮಭೇದವನ್ನು ಹೇಳಿರುವದು ಜೀವನು ತನ್ನ ನಿತ್ಯಸಿದ್ಧವಾದ ಈಶ್ವರಸ್ವರೂಪವನ್ನು ಅರಿತುಕೊಂಡು ಮುಕ್ತನಾಗಲಿ – ಎಂಬ ಉದ್ದೇಶದಿಂದ ಹೇಳಿದ್ದೇ ಹೊರತು, ನಿಜವಾಗಿಯೂ ಆತ್ಮರುಗಳು ಅನೇಕರಿದಾರೆ ಎಂದು ತಿಳಿಸುವದಕ್ಕೆ ಬಂದದ್ದಲ್ಲ.

**79. ಸ್ಥಿತೇ ಚ ಕ್ಷೇತ್ರಜ್ಞಪರಮಾತ್ಮೈಕತ್ವವಿಷಯೇ ಸಮ್ಯಗ್ದರ್ಶನೇ ಕ್ಷೇತ್ರಜ್ಞಃ, 'ಪರಮಾತ್ಮಾ' – ಇತಿ ನಾಮಮಾತ್ರಭೇದಾತ್, ಕ್ಷೇತ್ರಜ್ಞೋಽಯಂ ಪರಮಾತ್ಮನೋ ಭಿನ್ನಃ ಪರಮಾತ್ಮಾಯಂ ಕ್ಷೇತ್ರಜ್ಞಾದ್ ಭಿನ್ನಃ ಇತ್ಯೇವಂಜಾತೀಯಕಃ ಆತ್ಮಭೇದವಿಷಯೋ ನಿರ್ಬನ್ಧೋ ನಿರರ್ಥಕಃ । ಏಕೋ ಹಿ ಅಯಮಾತ್ಮಾ ನಾಮಮಾತ್ರಭೇದೇನ ಬಹುಧಾ ಅಭಿಧೀಯತ ಇತಿ ॥ ಸೂ.ಭಾ. 1–4–22.**

ಭಾವಾರ್ಥ :– ಜೀವನೂ ಪರಮಾತ್ಮನೂ ಒಬ್ಬನೇ ಎಂದು ಸರಿಯಾದ ತಿಳಿವಳಿಕೆಯು ಶಾಸ್ತ್ರದಿಂದುಂಟಾಗುತ್ತಿರುವಲ್ಲಿ 'ಜೀವನು', 'ಪರಮಾತ್ಮನು' – ಎಂದು ಹೆಸರು ಮಾತ್ರವೇ ಭಿನ್ನಭಿನ್ನವಾಗುತ್ತದೆಯಾದ್ದರಿಂದ 'ಈ ಜೀವನು ಪರಮಾತ್ಮನಿಗಿಂತ ಬೇರೆ', 'ಈ ಪರಮಾತ್ಮನು ಜೀವನಿಗಿಂತ ಬೇರೆ' _ ಎಂದೀಬಗೆಯಲ್ಲಿ ನಿರ್ಬಂಧವನ್ನು ಮಾಡುವದು ವ್ಯರ್ಥ. ಒಬ್ಬನೇ ಆತ್ಮನು ಬೇರೆಬೇರೆಯ ಹೆಸರುಗಳ ಭೇದದಿಂದ ನಾನಾರೀತಿಯಲ್ಲಿ ಹೇಳಲ್ಪಡುವನು.

**ವಿವರಣೆ** :– ಜೀವೇಶ್ವರವಿಭಾಗವನ್ನು ಅಧ್ಯಾರೋಪದೃಷ್ಟಿಯಿಂದ ಇಟ್ಟುಕೊಂಡು ಜೀವನಿಗೆ ಜ್ಞಾನದಿಂದ ಮೋಕ್ಷವು ಹೇಗೆ ಆಗುವದೆಂಬುದನ್ನು ತಿಳಿಸಿಕೊಡುವದೇ ಶಾಸ್ತ್ರದ ಉದ್ದೇಶವು. ಆತ್ಮರುಗಳು ಅನೇಕರೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲ – ಎಂಬುದೇ ಸಿದ್ಧಾಂತ. ಉಪಾಧಿಭೇದದಿಂದ ಬೇರೆಬೇರೆಯ ಹೆಸರು ಬಂದಿದೆಯೇ ಹೊರತು ವಸ್ತುವಿನಲ್ಲಿ ಭೇದವಿಲ್ಲ.

* * * * *

# 12. ದ್ರಷ್ಟೃದೃಶ್ಯವಿವೇಕ

**80. ಯಾವದಯಮ್ ಏವಂ ವೇದ 'ಪಶ್ಯಾಮಿ', 'ಶೃಣೋಮಿ', 'ಸ್ಪೃಶಾಮಿ', ಇತಿ ವಾ ಸ್ವಭಾವಪ್ರವೃತ್ತಿವಿಶಿಷ್ಟಂ ವೇದ ತಾವತ್ ಅಞ್ಜಸಾ ಕೃತ್ಸ್ನಮ್ ಆತ್ಮಾನಂ ನ ವೇದ । ಕಥಂ ಪುನಃ ಪಶ್ಯನ್ ವೇದೇತಿ? ಆತ್ಮೇತ್ಯೇವ। 'ಆತ್ಮಾ' ಇತಿ ಪ್ರಾಣಾದೀನಿ ವಿಶೇಷಣಾನಿ ಯಾನ್ಯುಕ್ತಾನಿ ತಾನಿ ಯಸ್ಯ ಸ ಆಪ್ನುವನ್ ತಾನಿ 'ಆತ್ಮಾ' ಇತ್ಯುಚ್ಯತೇ । ಸ ತಥಾ ಕೃತ್ಸ್ನವಿಶೇಷೋಪಸಂಹಾರೀ ಸನ್ ಕೃತ್ಸ್ನೋ ಭವತಿ ॥ ಬೃ.ಭಾ. 1–4–7.**

ಭಾವಾರ್ಥ :– ಎಲ್ಲಿಯವರೆಗೆ 'ನೋಡುತ್ತೇನೆ', 'ಕೇಳುತ್ತೇನೆ', ಅಥವಾ 'ಮುಟ್ಟುತ್ತೇನೆ' ಎಂದು ಸ್ವಭಾವದಿಂದ ಇಂದ್ರಿಯಪ್ರವೃತ್ತಿಗಳಿಂದೊಡಗೂಡಿರುವ ತನ್ನನ್ನು ತಿಳಿದುಕೊಂಡಿರುತ್ತಾನೋ ಅಲ್ಲಿಯವರೆಗೆ ಸರಿಯಾಗಿ ಅರಿತುಕೊಂಡಂತಲ್ಲ. ಹಾಗಾದರೆ ಹೇಗೆ ತಿಳಿದುಕೊಂಡರೆ ಅರಿತುಕೊಂಡಂತೆ? ಎಂದರೆ ಆತ್ಮನು ಎಂದು. ಪ್ರಾಣನು (ನೋಡುವವನು, ಮಾತನಾಡುವವನು, ಕೇಳುವವನು, ಯೋಚಿಸುವವನು) ಎಂದು ಮುಂತಾಗಿ ಹೇಳಿದ ವಿಶೇಷಣಗಳನ್ನು ವ್ಯಾಪಿಸಿಕೊಂಡಿರುವವನು ಆತ್ಮನೆನಿಸುವವನು. ಹೀಗೆ ಆತ್ಮನೆಂದು – ಎಲ್ಲವನ್ನೂ ಸೇರಿಸಿಕೊಂಡು ಅರಿತರೆ ಪೂರ್ಣನಾಗುವನು.

**ವಿವರಣೆ :–** ನೋಡುವವನು ನಾನು, ಕೇಳುವವನು ನಾನು – ಎಂದು ಮುಂತಾಗಿ ಅರಿತುಕೊಳ್ಳುವಾಗ ಆಯಾ ಇಂದ್ರಿಯಗಳ ವ್ಯಾಪಾರವನ್ನೇ ತಾನೆಂದು ಬಗೆದಿರುತ್ತಾನೆ. ಆದರೆ ಆತ್ಮನು – ನನ್ನ ಸ್ವರೂಪವೇ – ತಾನೆಂದು ಅರಿಯುವಾಗ ಈ ಎಲ್ಲದರಲ್ಲಿಯೂ ಇರುವ ತನ್ನ ಸ್ವರೂಪವನ್ನೇ ಅರಿತಂತೆ ಆಗುವದರಿಂದ ಅದು ಪೂರ್ಣವಾಗುತ್ತದೆ. ಇದನ್ನು ಅರಿತುಕೊಂಡರೆ ತನ್ನ ಪೂರ್ಣರೂಪವನ್ನು ಅರಿತುಕೊಂಡಂತೆ ಆಯಿತು.

**81. ಯೇನ ವಿಜ್ಞಾನಸ್ವಭಾವೇನ ಆತ್ಮನಾ ರೂಪಂ ರಸಂ ಗನ್ಧಂ ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್ ಮೈಥುನನಿಮಿತ್ತಾನ್ ಸುಖಪ್ರತ್ಯಯಾನ್ ವಿಜಾನಾತಿ ವಿಸ್ಪಷ್ಟಂ ಜಾನಾತಿ ಸರ್ವೋ ಲೋಕಃ ॥ ಕಾ.ಭಾ. 4–3.**

ಭಾವಾರ್ಥ :– ಚೈತನ್ಯಸ್ವಭಾವದ ಯಾವದರಿಂದ ರೂಪ, ರಸ, ವಾಸನೆ, ಶಬ್ದ, ವಿಷಯದ ಬೆರಕೆಯ ಸ್ಪರ್ಶಗಳು – ಇವನ್ನು ಅರಿಯುವನೋ ಅವನೇ ಆತ್ಮನು.

82. ನನು ನೈವಂ ಪ್ರಸಿದ್ಧಿರ್ಲೋಕಸ್ಯ ಆತ್ಮನಾ ದೇಹಾದಿವಿಲಕ್ಷಣೇನ ಅಹಂ ವಿಜಾನಾಮಿ – ಇತಿ । ದೇಹಾದಿಸಙ್ಘಾತೋऽಹಂ ವಿಜಾನಾಮಿ ಇತಿ ತು ಸರ್ವೋಲೋಕೋऽವಗಚ್ಛತಿ । ನ ತ್ವೇವಮ್ ದೇಹಾದಿಸಙ್ಘಾತಸ್ಯಾಪಿ ಶಬ್ದಾದಿಸ್ವರೂಪತ್ವಾವಿಶೇಷಾತ್ ವಿಜ್ಞೇಯತ್ವಾವಿಶೇಷಾಚ್ಚ ನ ಯುಕ್ತಂ ವಿಜ್ಞಾತೃತ್ವಮ್ । ಯದಿ ಹಿ ದೇಹಾದಿಸಙ್ಘಾತೋ ರೂಪಾದ್ಯಾತ್ಮಕಃ ಸನ್ ರೂಪಾದೀನ್ ವಿಜಾನೀಯಾತ್ ತರ್ಹಿ ಬಾಹ್ಯಾ ಅಪಿ ರೂಪಾದಯೋऽನ್ಯೋಽನ್ಯಂ ಸ್ವಂ ಸ್ವಂ ರೂಪಂ ಚ ವಿಜಾನೀಯುಃ ; ನ ಚೈತದಸ್ತಿ। ತಸ್ಮಾದ್ದೇಹಾದಿ ಲಕ್ಷಣಾಂಶ್ಚ ರೂಪಾದೀನೇತೇನೈವ ದೇಹಾದಿವ್ಯತಿರಿಕ್ತೇನೈವ ವಿಜ್ಞಾನಸ್ವಭಾವೇನ ಆತ್ಮನಾ ವಿಜಾನಾತಿ ಲೋಕಃ ॥ ಕಾ.ಭಾ. 4–3.

ಭಾವಾರ್ಥ :– (ಶಂಕೆ) :– 'ದೇಹಾದಿಗಳಿಗಿಂತ ಬೇರೆಯ ಸ್ವಭಾವದ ಆತ್ಮನಿಂದ ನಾನು ಅರಿಯುತ್ತಿದ್ದೇನೆ' ಎಂದೇನೂ ಜನಕ್ಕೆ ಪ್ರಸಿದ್ಧವಾಗಿರುವದಿಲ್ಲವಲ್ಲ? ದೇಹೇಂದ್ರಿಯಗಳ ಗುಂಪಾಗಿರುವ ನಾನೇ ಅರಿತುಕೊಳ್ಳುತ್ತಿದ್ದೇನೆ ಎಂದು ಪ್ರತಿಯೊಬ್ಬನೂ ಗೊತ್ತುಮಾಡಿಕೊಂಡಿರುತ್ತಾನೆ. ಅಲ್ಲವೇ? (ಪರಿಹಾರ) :– ಹಾಗಲ್ಲ. ಏಕೆಂದರೆ ದೇಹಾದಿಗಳ ಗುಂಪು ಎಂಬುದೂ ಶಬ್ದಾದಿಗಳ ರೂಪವೇ ಆಗಿರುವದರಿಂದ ಅದು ಅರಿಯುವಾತನೆಂಬುದು ಸರಿಯಲ್ಲ. ದೇಹಾದಿಗಳ ಗುಂಪೇ ತಾನೂ ರೂಪಾದಿಸ್ವಭಾವದ್ದೇ ಆಗಿದ್ದುಕೊಂಡು ರೂಪಾದಿಗಳನ್ನು ಅರಿತುಕೊಳ್ಳುತ್ತದೆ ಎಂದಾದರೆ, ಹೊರಗಿನ ರೂಪಾದಿಗಳೂ ಒಂದನ್ನೊಂದು ತಮ್ಮತಮ್ಮ ರೂಪವನ್ನು ಅರಿತುಕೊಳ್ಳಬಹುದಾಗಿತ್ತು; ಹಾಗಿಲ್ಲ. ಆದ್ದರಿಂದ ದೇಹಾದಿಗಳಾಗಿ ಕಾಣುವ ರೂಪಾದಿಗಳನ್ನು ಈ ದೇಹಾದಿವ್ಯತಿರಿಕ್ತನಾದ ಚೈತನ್ಯಸ್ವಭಾವದ ಆತ್ಮನಿಂದಲೇ ಜನರು ಅರಿಯುತ್ತಾರೆ ಎಂಬುದೇ ಸರಿ.

ವಿವರಣೆ :– ಇಂದ್ರಿಯಗಳಿಗೆ ಸ್ವತಃ ಅರಿವು ಇದೆ ಎಂಬುದು ತಪ್ಪು ತಿಳಿವಳಿಕೆ. ಏಕೆಂದರೆ ಹೊರಗಿನ ವಿಷಯಗಳಂತೆ ಅವೂ ಭೌತಿಕವೇ ಆಗಿರುತ್ತವೆ. ಆದ್ದರಿಂದ ಈ ಎಲ್ಲವನ್ನೂ ಏತರಿಂದ ಅರಿತುಕೊಳ್ಳುತ್ತೇವೋ ಆ ಆತ್ಮನೇ ನಿಜವಾಗಿ ಜ್ಞಾತೃ.

83. ಏಷ ಹಿ ದ್ರಷ್ಟಾ, ಸ್ಪ್ರಷ್ಟಾ, ಶ್ರೋತಾ, ಘ್ರಾತಾ, ರಸಯಿತಾ, ಮನ್ತಾ, ಬೋದ್ಧಾ, ಕರ್ತಾ, ವಿಜ್ಞಾನಾತ್ಮಾ.... ಪುರುಷಃ ಕಾರ್ಯಕರಣ ಸಂಘಾತೋಪಾಧಿಪೂರಣಾತ್ ಪುರುಷಃ । ಸ ಚ ಜಲಸೂರ್ಯಕಾದಿ

**ಪ್ರತಿಬಿಮ್ಬಸ್ಯ ಸೂರ್ಯಾದಿಪ್ರವೇಶವತ್ ಜಲಾದ್ಯಾಧಾರಶೋಷೇ ಪರೇ ಅಕ್ಷರೇ ಆತ್ಮನಿ ಸಂಪ್ರತಿಷ್ಠತೇ ॥** ಪ್ರ. ಭಾ. 4–9.

ಭಾವಾರ್ಥ :– ಈ ನೋಡುವ, ಮುಟ್ಟುವ, ಮೂಸುವ, ಸವಿಯುತ್ತಿರುವ, ಯೋಚಿಸುವ, ಅರಿತುಕೊಳ್ಳುವ, ಮಾಡುವ, ವಿಜ್ಞಾನಾತ್ಮನಾದ.... ಪುರುಷನು ಕಾರ್ಯಕರಣಸಂಘಾತವೆಂಬ ಉಪಾಧಿಯನ್ನು ಪೂರಣಮಾಡುವಾತನಾದ ಜೀವನು. ಇವನು ನೀರೇ ಮುಂತಾದ ಆಧಾರವು ಒಣಗಿದರೆ ಸೂರ್ಯನ ಪ್ರತಿಬಿಂಬವೇ ಮುಂತಾದವು ಸೂರ್ಯಾದಿಗಳಲ್ಲಿ ಸೇರಿಕೊಳ್ಳುವಂತೆ ಪರಮಾತ್ಮನಾದ ಅಕ್ಷರದಲ್ಲಿ ಸೇರಿಕೊಳ್ಳುತ್ತಾನೆ.

ವಿವರಣೆ :– ಜೀವನ ದ್ರಷ್ಟೃತ್ವವು ತನಿನಿದ್ರೆಯಲ್ಲಿ ಇಲ್ಲವಾಗುವದು, ಅವನು ಆಗ ಪರಮಾತ್ಮನೇ ಆಗಿಬಿಡುತ್ತಾನೆ.

* * * * *

## 13. ಪಂಚಕೋಶವಿವೇಕ

84. **ನಾನ್ನಮಯೇನೈವ ಪರಿಚ್ಛಿನ್ನೇನ ಆತ್ಮನಾ ಆತ್ಮವನ್ತಃ ಪ್ರಾಣಿನಃ, ಕಿಂ ತರ್ಹಿ? ತದನ್ತರ್ಗತೇನ ಪ್ರಾಣಮಯೇನಾಪಿ ಸಾಧಾರಣೇ ನೈವ ಸರ್ವಪಿಣ್ಡವ್ಯಾಪಿನಾ ಆತ್ಮವನ್ತೋ ಮನುಷ್ಯಾದಯಃ । ಏವಂ ಮನೋಮಯಾದಿಭಿಃ ಪೂರ್ವಪೂರ್ವವ್ಯಾಪಿಭಿಃ ಉತ್ತರೋತ್ತರೈಃ ಸೂಕ್ಷ್ಮೈಃ ಆನನ್ದಮಯಾನ್ತೈಃ, ಆಕಾಶಾದಿಭೂತಾರಬ್ಧೈಃ, ಅವಿದ್ಯಾಕೃತೈಃ ಆತ್ಮವನ್ತಃ ಸರ್ವೇ ಪ್ರಾಣಿನಃ । ತಥಾ ಸ್ವಾಭಾವಿಕೇನಾಪಿ ಆಕಾಶಾದಿಕಾರಣೇನ ನಿತ್ಯೇನ, ಅವಿಕೃತೇನ, ಸರ್ವಗತೇನ ಸತ್ಯಜ್ಞಾನಾನನ್ತಲಕ್ಷಣೇನ ಪಞ್ಚಕೋಶಾತಿಗೇನ ಸರ್ವಾತ್ಮನಾ ಆತ್ಮವನ್ತಃ । ಸ ಹಿ ಪರಮಾರ್ಥತಃ ಆತ್ಮಾ ಸರ್ವೇಷಾಮ್ ॥** ತೈ. ಭಾ. 2–3.

ಭಾವಾರ್ಥ :– ಅನ್ನಮಯವೆಂಬ ಪರಿಚ್ಛಿನ್ನನಾದ ಆತ್ಮನೇ ಪ್ರಾಣಿಗಳಿಗೆ ಆತ್ಮನಾಗಿರುವದಿಲ್ಲ; ಮತ್ತೇನೆಂದರೆ ಅವನೊಳಗೆ ಇರುವ ಸಾಧಾರಣನಾಗಿರುವ ಎಲ್ಲಾ ದೇಹಗಳನ್ನೂ (ಅಥವಾ ದೇಹವನ್ನೆಲ್ಲ) ವ್ಯಾಪಿಸಿಕೊಂಡಿರುವ ಪ್ರಾಣಮಯನೂ ಮನುಷ್ಯಾದಿಗಳ ಆತ್ಮನಾಗಿರುತ್ತಾನೆ. ಹೀಗೆಯೇ ಮನೋಮಯನೇ ಮುಂತಾದ– ಹಿಂದುಹಿಂದಿನ ಆತ್ಮರನ್ನು ವ್ಯಾಪಿಸಿಕೊಂಡಿರುವ ಮುಂದುಮುಂದಿನ ಸೂಕ್ಷ್ಮವಾದ

**ಆನಂದಮಯನವರೆಗಿನ, ಆಕಾಶಾದಿಭೂತಗಳಿಂದ ಆಗಿರುವ – ಅವಿದ್ಯಾಕೃತರಾದ ಆತ್ಮರುಗಳೂ ಎಲ್ಲಾ ಜೀವರಿಗೂ ಆತ್ಮರಾಗಿರುತ್ತಾರೆ. ಹೀಗೆಯೇ ಸ್ವಾಭಾವಿಕನಾಗಿರುವ ಆಕಾಶಾದಿಗಳಿಗೂ ಕಾರಣನಾಗಿರುವ, ನಿತ್ಯವಾದ, ಏತಕ್ಕೂ ಕಾರ್ಯವಲ್ಲದ, ಸರ್ವವ್ಯಾಪಿಯಾಗಿರುವ, ಸತ್ಯಜ್ಞಾನಾನಂತಸ್ವರೂಪನಾಗಿರುವ, ಐದು ಕೋಶಗಳನ್ನೂ ಮೀರಿರುವ ಸರ್ವಾತ್ಮನೂ ಅವರಿಗೆ ಆತ್ಮನಾಗಿರುತ್ತಾನೆ.**

**ವಿವರಣೆ :–** ಆತ್ಮಸ್ವರೂಪವನ್ನು ಗೊತ್ತುಪಡಿಸುವದಕ್ಕೆ ಉಪಯೋಗಿಸಿರುವ ಅನೇಕ ಪ್ರಕ್ರಿಯೆಗಳಲ್ಲಿ ಪಂಚಕೋಶಪ್ರಕ್ರಿಯೆಯೂ ಒಂದು. ಮನುಷ್ಯನು ದೇಹೇಂದ್ರಿಯಾದಿಗಳ ಸಂಘಾತದಲ್ಲಿ ಮೇಲೆಮೇಲೆ ಕಾಣಿಸುವ ದೇಹಾದಿಗಳನ್ನೇ ತಾನೆಂದು ಗಟ್ಟಿಯಾಗಿ ನಂಬಿಕೊಂಡಿರುತ್ತಾನೆ. ಇವುಗಳನ್ನು ಕತ್ತಿಯ ಒರೆಗೆ ಹೋಲಿಸಿ 'ಕೋಶ'ಗಳೆಂದು ವೇದಾಂತಿಗಳು ಕರೆದಿರುತ್ತಾರೆ. ಹರಿತವಾದ ಥಳಗುಟ್ಟುವ ಉಕ್ಕಿನ ಕತ್ತಿಯೊಂದನ್ನು ಒಬ್ಬ ವೀರನು ಒಂದೇ ಒರೆಯಲ್ಲಿ ಮುಚ್ಚಿಟ್ಟಿರುವದಿಲ್ಲ; ಒಂದರಮೇಲೆ ಒಂದರಂತೆ ಹೆಚ್ಚುಹೆಚ್ಚು ಸ್ಥೂಲವಾಗಿರುವ ಒರೆಗಳನ್ನು ಹಾಕಿ ಅದನ್ನು ತುಕ್ಕುಹಿಡಿಯುದಂತೆ ಭದ್ರವಾಗಿ ಕಾಪಾಡಿಕೊಂಡಿರುತ್ತಾನೆ. ಕತ್ತಿಯಮೇಲಿನ ಅಭಿಮಾನದಿಂದ ಆ ಒರೆಗಳನ್ನೂ ಕತ್ತಿಗೆ ಸೇರಿರುವಂತೆಯೇ ಭಾವಿಸಿಕೊಂಡಿರುತ್ತಾನೆ. ಅದರಂತೆಯೇ ಮನುಷ್ಯನ ಆತ್ಮನಿಗೂ ದೇಹಪರ್ಯಂತವಾದ ಐದು ಕೋಶಗಳಿರುತ್ತವೆ. ಇವು ಒಂದೊಂದನ್ನೂ ಅವನು ತನ್ನ ಆತ್ಮನೆಂದೇ ಅಭಿಮಾನಪಡುತ್ತಿರುತ್ತಾನೆ.

ಆತ್ಮರೆಂದು ಭಾವಿಸಿಕೊಂಡಿರುವ ಈ ಐದು ಕೋಶಗಳಲ್ಲಿ ದೇಹವೆಂಬ **ಅನ್ನಮಯಾತ್ಮನೇ** ಮೊದಲನೆಯವನು. ಈ ದೇಹವು ಅನ್ನರಸದಿಂದ ಆದ ಮಾತಾಪಿತೃಗಳ ಅಂಶದಿಂದ ಹುಟ್ಟಿರುತ್ತದೆ. ಆದ್ದರಿಂದ ಇದನ್ನು **ಅನ್ನಮಯ ಆತ್ಮ** ಎಂದು ಶ್ರುತಿಯು ಕರೆದಿರುತ್ತದೆ. ದೇಹವು ಹುಟ್ಟಿ, ಬೆಳೆದು, ಮಾರ್ಪಟ್ಟು, ಸವೆದು, ನಾಶವಾಗುತ್ತಿರುವದು ಎಲ್ಲರ ಅನುಭವದಲ್ಲಿಯೂ ಇದ್ದು ಮತ್ತೊಬ್ಬರ ದೇಹವನ್ನು ನೋಡಿದಾಗ ಅದು ಒಂದು ಬರಿಯ ಆಕಾರಮಾತ್ರವಾಗಿ ನಮಗೆ ತೋರುತ್ತಿರುವದು. ಆದರೆ ನಮ್ಮ ದೇಹವು ಮಾತ್ರ ನಮಗೆ ನಮ್ಮ ನಮ್ಮ ಆತ್ಮನೇ, ನಾನೇ – ಎಂದು ತೋರುತ್ತಿರುವದು. ಈ ಭ್ರಾಂತಿಯು ಮನುಷ್ಯಮಾತ್ರಕ್ಕೇ ಇರುತ್ತದೆ. ಈ ದೇಹಕ್ಕೆ ಬೇಕಾದ ಅನ್ನ, ಪಾನ, ವಸ್ತ್ರ, ಅಲಂಕಾರ – ಮುಂತಾದ

ಜೀವನದ ಅವಶ್ಯಕತೆಗಳಿಗಾಗಿ ಮನುಷ್ಯನು ಯಾವ ಮಾಡಬಾರದ ಕೆಲಸವನ್ನಾದರೂ ಮಾಡುವದಕ್ಕೆ ಸಿದ್ಧನಾಗಿರುತ್ತಾನೆ. ಈ ಮನುಷ್ಯದೇಹವೇ ಪಾಪಪುಣ್ಯಗಳ ಫಲವಾಗಿರುತ್ತದೆ. ಇದರಲ್ಲಿ ನಾನೆಂಬ ಅಭಿಮಾನವನ್ನು ಪಶ್ವಾದಿಗಳಂತೆ ಅತ್ಯಂತವಿವೇಕಿ ಎನಿಸಿಕೊಂಡಿರುವ ಮನುಷ್ಯರೂ ಮಾಡುತ್ತಿರುವರು.

ಈ ಶರೀರವನ್ನೆಲ್ಲ ವ್ಯಾಪಿಸಿಕೊಂಡಿರುವದು **ಪ್ರಾಣವು**. ಪ್ರಾಣದ ಬಲದಿಂದಲೇ ಶರೀರದ ಕಾರ್ಯವೆಲ್ಲವೂ ಸಾಗಿರುತ್ತದೆ. ಇಂದ್ರಿಯಗಳ ವ್ಯಾಪಾರವೆಲ್ಲವೂ ಪ್ರಾಣದ ಸಹಾಯದಿಂದಲೇ ನಡೆಯುತ್ತಿರುವದು. ವಿವೇಕಿಯಾದವನು ಪ್ರಾಣಕ್ಕಾಗಿ ಶರೀರದ ಒಂದು ಭಾಗವನ್ನೇ ಆದರೂ ಅವಶ್ಯವೆಂದು ಕಂಡರೆ ಕತ್ತರಿಸಿಕೊಳ್ಳುವದಕ್ಕೆ ಸಿದ್ಧನಾಗುತ್ತಾನೆ. ಕೈ, ಕಾಲು - ಮುಂತಾದ ಶರೀರಾವಯವಗಳಿಗೆ ಶಸ್ತ್ರಚಿಕಿತ್ಸೆಯನ್ನಾದರೂ ಮಾಡಿಸಿಕೊಂಡು ಬದುಕಿರಬೇಕೆಂದು ಜನರು ತವಕಿಸುತ್ತಿರುವರು. ಇಂದ್ರಿಯಗಳಲ್ಲಿ ಯಾವದೊಂದು ಕೆಲಸಮಾಡದೆ ಇದ್ದರೂ ಚಿಂತೆಯಿಲ್ಲ. **"ಜೀವನ್ ಭದ್ರಾಣಿ ಪಶ್ಯತಿ"** ಬದುಕಿದ್ದರೆ ಒಳ್ಳೆಯದನ್ನು ಕಾಣಬಹುದು - ಎಂಬುದೇ ಜನರ ಜೀವನಸೂತ್ರ. ಹೀಗೆ ದೇಹಕ್ಕಿಂತಲೂ ಪ್ರಾಣವು ಹೆಚ್ಚೆಂಬುದನ್ನು ಮನಗಂಡವರಿಗೆ ದೇಹವು ಆತ್ಮವಲ್ಲ; ಪ್ರಾಣವೇ ಆತ್ಮ, ದೇಹವು ಅದಕ್ಕೆ ಮೇಲುಮುಚ್ಚು, ಅಷ್ಟೆ. ಆದ್ದರಿಂದ **ಪ್ರಾಣಮಯನೇ ಆತ್ಮ**ನೆಂಬ ಭಾವನೆಯು ಗಟ್ಟಿಯಾದವರಿಗೆ ಅನ್ನಮಯವಾದ ದೇಹವು ಆತ್ಮನಲ್ಲ, ಅದು ಕೋಶಮಾತ್ರ.

ಮನಸ್ಸೆಂಬುದು ಇನ್ನೂ ಒಳಗಿನ ಆತ್ಮ ; ವಿಜ್ಞಾನ ಅಥವಾ ಬುದ್ಧಿ ಎಂಬುದು ಅದಕ್ಕೂ ಒಳಗಿರುವ ಆತ್ಮ. ಅಂತಃಕರಣವು ಸಂಕಲ್ಪವಿಕಲ್ಪವನ್ನು ಮಾಡುವಾಗ ಅದನ್ನು ಮನಸ್ಸೆಂದೂ, ನಿಶ್ಚಯಿಸುವಾಗ ಅದನ್ನು (ಬುದ್ಧಿ ಅಥವಾ) ವಿಜ್ಞಾನವೆಂದೂ ಕರೆಯುತ್ತಾರೆ. ಈ ಅಂತಃಕರಣವು ವಿಷಯಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೂ ಯಾವದಾದರೊಂದು ಕರ್ಮವನ್ನು ಮಾಡುವದಕ್ಕೂ ಸಹಾಯಕವಾಗಿರುವದರಿಂದ ಮನಸ್ಸಿನ ಸಂಕಲ್ಪವೂ ವಿಜ್ಞಾನದ ನಿಶ್ಚಯವೂ ಜ್ಞಾನಕರ್ಮಗಳೆರಡಕ್ಕೂ ಸಾಧನವಾಗಿರುತ್ತವೆ. ಹೀಗಿರುವದರಿಂದ ಮನಸ್ಸಿನಲ್ಲಿಯೂ ವಿಜ್ಞಾನದಲ್ಲಿಯೂ 'ನಾನು' ಎಂಬ ಅಭಿಮಾನವುಂಟಾಗುವದು ಸ್ವಾಭಾವಿಕ ವಾಗಿರುತ್ತದೆ. ನಾನು ವಿಷಯವನ್ನು ಅರಿತು ನಿಶ್ಚಯಿಸುತ್ತೇನೆ; ಅದು

ಇಷ್ಟವಾದದ್ದಾದರೆ ಅದನ್ನು ಸಂಪಾದಿಸಿಕೊಳ್ಳುವದಕ್ಕೂ ಅನಿಷ್ಟವಾಗಿದ್ದರೆ ಅದನ್ನು ತೊಲಗಿಸಿಕೊಳ್ಳುವದಕ್ಕೂ ಪ್ರಯತ್ನಿಸುತ್ತೇನೆ. ಆದ್ದರಿಂದ ಹೀಗೆ ಯೋಚಿಸಿ ನಿಶ್ಚಯಿಸುವ ಕರ್ತ್ರಾತ್ಮನು ನಾನು ಎಂಬ ಬುದ್ಧಿಯು ಮನುಷ್ಯರೆಲ್ಲರಿಗೂ ಸಹಜವಾಗಿರುತ್ತದೆ. ಹೀಗೆ ಮನ ಆತ್ಮ, ವಿಜ್ಞಾನಾತ್ಮ – ಇವರಲ್ಲಿ ಆತ್ಮಬುದ್ಧಿಯುಂಟಾದಾಗ ಪ್ರಾಣವನ್ನು ನಾನು ಎನ್ನುವದಿಲ್ಲ. ಅದರಲ್ಲಿ ನನ್ನದು ಎಂದೇ ಬುದ್ಧಿಯು ಉಂಟಾಗುವದು. ಪ್ರಾಣವು ಆಗ ಕೋಶಮಾತ್ರವಾಗಿಬಿಡುತ್ತದೆ. "ಪ್ರಾಣವನ್ನು ಬಿಟ್ಟಾದರೂ ನನ್ನ ಮಾನವನ್ನು ಕಾಪಾಡಿಕೊಳ್ಳುವೆನು" ಎಂದು ಜನರು ನಿಶ್ಚಯಿಸುವಾಗ ಅವರು ಕರ್ತ್ರಾತ್ಮರಾಗುತ್ತಾರೆ.

ಇನ್ನು ನಾವು ಕರ್ತೃವಾಗಿರುವದು ಕೇವಲ ಕರ್ತೃವಾಗಿ ದುಡಿಯಬೇಕೆಂಬ ಆಶೆಯಿಂದಲ್ಲವಷ್ಟೆ? 'ಮಾಡಿದ ಕೆಲಸದಿಂದ ನಮಗೆ ಫಲವಾಗಬೇಕು' ಎಂಬುದೇ ನಮಗೆ ಗುರಿ. ಆದ್ದರಿಂದ ನಾವು ಸುಖಪಡಬೇಕು, ದುಃಖಪಡಬಾರದು – ಎಂಬ ಅಭಿಮಾನವಿರುವಾಗ ನಾವು ಭೋಕ್ತ್ರಾತ್ಮರು. ಮನೋಮಯನೂ ವಿಜ್ಞಾನಮಯನೂ ಆಗ ಕೋಶಮಾತ್ರರಾಗುವರು. ದೇಹವನ್ನು ಪ್ರಾಣವು ತುಂಬಿಕೊಂಡಿರುವಂತೆಯೂ ಪ್ರಾಣವನ್ನು ಮನಸ್ಸು ತುಂಬಿಕೊಂಡಿರುವಂತೆಯೂ ಸಂಕಲ್ಪಾತ್ಮಕವಾದ ಮನಸ್ಸನ್ನು ನಿಶ್ಚಯಾತ್ಮಕವಾದ ವಿಜ್ಞಾನವು ತುಂಬಿಕೊಂಡಿರುವಂತೆಯೂ ಇವೆಲ್ಲವನ್ನೂ **ಆನಂದಮಯಾತ್ಮನು** ತುಂಬಿಕೊಂಡಿರುತ್ತಾನೆ.

ಇದುವರೆಗೆ ಹೇಳಿರುವ ದೇಹಾದಿಯಾದ ಆನಂದಮಯಾಂತವಾದ ಆತ್ಮರುಗಳೆಲ್ಲರೂ ಲೋಕಪ್ರಸಿದ್ಧರೇ. ಇವುಗಳನ್ನೇನೂ ಶಾಸ್ತ್ರವು ಹೊಸದಾಗಿ ಹೇಳಿಕೊಡಬೇಕಾಗಿರುವದಿಲ್ಲ. ಪಂಚಕೋಶವೆಂಬ ಪ್ರಕ್ರಿಯೆಯಲ್ಲಿ ಅನ್ನಮಯವಾದ ದೇಹವನ್ನೇ ಅಲ್ಲದೆ ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ – ಎಂಬ ಆತ್ಮರನ್ನು ಅಧ್ಯಾರೋಪದೃಷ್ಟಿಯಿಂದ ಹೇಳಿರುವದು ಹಿಂದುಹಿಂದಿನ ಪ್ರಾಣವೇ ಮುಂತಾದವುಗಳು ಆತ್ಮನಲ್ಲ; ಆತ್ಮನಿಗೆ ಶರೀರವಿರುವಂತೆ ಅವು ಹೊರಗೆ ಇರುವ ಹೊದಿಗೆಗಳೇ ಎಂಬುದನ್ನು ತಿಳಿಸಿಕೊಡುವದಕ್ಕೆ. ಈಗ ಆನಂದಮಯನೂ ಆತ್ಮನಲ್ಲ; ನಿಜವಾಗಿ ಆನಂದಮಯನಿಗೆ ಆಧಾರನಾಗಿರುವ ಕರ್ತೃವೂ ಅಲ್ಲದ ಭೋಕ್ತೃವೂ ಅಲ್ಲದ ಶುದ್ಧಾತ್ಮನೇ ನಿಜವಾದ ಆತ್ಮನು; ಅವನನ್ನೇ ಬ್ರಹ್ಮವೆಂದು ಶ್ರುತಿಯು ತಿಳಿಸುವದಕ್ಕಾಗಿ ಈ ಪ್ರಕ್ರಿಯೆಯನ್ನು ಕಲ್ಪಿಸುತ್ತಿದೆ. ಪಂಚಕೋಶಗಳಿಗಿಂತ ಬೇರೆಯಾಗಿರುವವನೇ ಈ ಪರಮಾತ್ಮನು.

# ಉಪಸಂಹಾರ

**85. ಏವಮಯಮನಾದಿರನನ್ತೋ ನೈಸರ್ಗಿಕೋಽಧ್ಯಾಸೋ ಮಿಥ್ಯಾಪ್ರತ್ಯಯರೂಪಃ ಕರ್ತೃತ್ವಭೋಕ್ತೃತ್ವಪ್ರವರ್ತಕಃ ಸರ್ವಲೋಕಪ್ರತ್ಯಕ್ಷಃ ॥**

**ಅಧ್ಯಾಸಭಾಷ್ಯ**

**ಭಾವಾರ್ಥ : ಹೀಗೆ ಈ ಮಿಥ್ಯಾಪ್ರತ್ಯಯರೂಪವಾದ, ನೈಸರ್ಗಿಕವಾಗಿರುವ ಅಧ್ಯಾಸವು ಅನಾದಿಯೂ ಅನಂತವೂ ಆಗಿರುತ್ತದೆ; ಇದು ಕರ್ತೃತ್ವಭೋಕ್ತೃತ್ವಗಳನ್ನು ಉಂಟುಮಾಡುತ್ತಿರುವದು ಎಲ್ಲಾ ಜನರಿಗೂ ಪ್ರತ್ಯಕ್ಷವಾಗಿರುತ್ತದೆ.**

**ವಿವರಣೆ** :– ಈವರೆಗೆ ಬಗೆಬಗೆಯಿಂದ ಪರಮಾರ್ಥತತ್ತ್ವವನ್ನು ಸಿದ್ಧಪಡಿಸುವದಕ್ಕೆ ಉಪಯೋಗಿಸಿರುವ ಪ್ರಕ್ರಿಯೆಗೆಲ್ಲ ಒಂದೇಒಂದು ಆಧಾರವಿರುತ್ತದೆ. ಅದೇನೆಂದರೆ ಕೂಟಸ್ಥನಿತ್ಯನಾಗಿರುವ, ಸ್ವಯಂಸಿದ್ಧನಾದ, ನಿರ್ವಿಶೇಷನಾಗಿರುವ ಅದ್ವಿತೀಯಪರಮಾತ್ಮನೇ ಪರಮಾರ್ಥವಾಗಿರುವ ತತ್ತ್ವವು. ಅವನಲ್ಲಿ ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರವು ಬೇರೆಯಾಗಿರುವದೇ ಇಲ್ಲ. ಹೀಗಿದ್ದರೂ ಬ್ರಹ್ಮದಲ್ಲಿ ಶರೀರೇಂದ್ರಿಯ ಮನಸ್ಸುಗಳೆಂಬ ಅಸತ್ಯವಾದ ಅನಾತ್ಮದ ಸಂಬಂಧವಿದೆಯೆಂದು ಜನರು ಸ್ವಭಾವದಿಂದಲೇ ಭಾವಿಸಿಕೊಂಡುಬಿಟ್ಟಿರುತ್ತಾರೆ. ಆ ಅನಾತ್ಮಗಳನ್ನೇ ತಮ್ಮ ಸ್ವರೂಪವೆಂದುಕೊಂಡು ಇಲ್ಲದ ಸಂಸಾರವನ್ನು ಅಧ್ಯಾರೋಪಮಾಡಿಕೊಂಡುಬಿಟ್ಟಿರುತ್ತಾರೆ.

**ಈ ಅಧ್ಯಾಸವು ಯಾವಾಗ, ಹೇಗೆ, ಯಾವ ನಿಮಿತ್ತದಿಂದ ಉಂಟಾಯಿತು?** ಎಂಬ ಪ್ರಶ್ನೆಯನ್ನು ಎತ್ತುವದಕ್ಕೆ ಇಲ್ಲಿ ಬರುವಂತಿಲ್ಲ. ಏಕೆಂದರೆ (ಯಾವಾಗ? ಎಂಬ) **ಕಾಲ,** (ಹೇಗೆ ಎಂಬ) **ಪ್ರಕಾರ,** (ಎಲ್ಲಿ? ಎಂಬ) **ದೇಶ,** (ಏತರಿಂದ? ಎಂಬ) **ನಿಮಿತ್ತ** – ಇವುಗಳೆಲ್ಲವೂ ಆತ್ಮನಲ್ಲಿ ಹುಟ್ಟುಗಟ್ಟಿರುವ ಅನಾತ್ಮವೇ ಆಗಿರುತ್ತದೆ. ಆತ್ಮನಲ್ಲಿ ಕಾಲದೇಶನಿಮಿತ್ತಾದಿಗಳು ಕಲ್ಪಿತವಾಗಿವೆಯೇ ಹೊರತು ನಿಜವಾಗಿಲ್ಲ – ಎಂಬುದನ್ನು ಸುಷುಪ್ತಿ, ಸಮಾಧಿ, ಮೂರ್ಛೆ – ಮುಂತಾದ ಅವಸ್ಥೆಗಳಲ್ಲಿ ಕಾಣಬರುವ ನಮ್ಮ ಸ್ವರೂಪದ ಅನುಭವದಿಂದ ಮನಗಾಣ ಬಹುದಾಗಿದೆ. ಕಾಲದೇಶನಿಮಿತ್ತಗಳಿಂದೊಡಗೂಡಿರುವ ಜಾಗ್ರತ್ಪ್ರಪಂಚವೇ ಆ ಅವಸ್ಥೆಗಳಲ್ಲಿ ಇಲ್ಲದಂತಾಗಿ ನಮ್ಮ ಅದ್ವಿತೀಯಸ್ವರೂಪದಲ್ಲಿಯೇ ನಾವು ಇದ್ದುಕೊಂಡುಬಿಟ್ಟಿರುತ್ತೇವೆ ಎಂಬುದು ನಮ್ಮೆಲ್ಲರ ಅನುಭವದಲ್ಲಿಯೂ ಇದೆ.

ಆದ್ದರಿಂದ **ಅಧ್ಯಾಸವು ಕಾಲಪರಿಚ್ಛಿನ್ನವಲ್ಲ, ಕಾಲವೇ ಅಧ್ಯಸ್ತ ; ಆದ್ದರಿಂದ ಅಧ್ಯಾಸವು ಅನಾದಿ, ಅನಂತ. ಈ ಅಧ್ಯಾಸವೆಂಬ ತಪ್ಪುತಿಳಿವಳಿಕೆಯು ನಮ್ಮಲ್ಲಿ ಪ್ರಮಾತೃತ್ವ, ಇಚ್ಛಾದ್ವೇಷಾದಿಗಳಿಗೆ ಆಶ್ರಯುವಾಗಿರುವಿಕೆ, ಕರ್ಮದ ಫಲವನ್ನನುಭವಿಸುವದು – ಎಂಬ ಭಾವನೆಯೆಲ್ಲವನ್ನೂ ಗಟ್ಟಿಗೊಳಿಸಿಬಿಟ್ಟಿರುತ್ತದೆ. ಇದೇ ಸಂಸಾರಬಂಧವು.**

ಹೀಗೆ ಅಧ್ಯಾಸವೆಂಬ ತಪ್ಪುತಿಳಿವಳಿಕೆಯ ಭಾವನೆಯನ್ನು ಕಳೆದು ಹಾಕುವದಕ್ಕೆಂದೇ ಎಲ್ಲಾ ವೇದಾಂತಗಳೂ, ಎಂದರೆ ಎಲ್ಲಾ ಉಪನಿಷತ್ತುಗಳೂ ಬಂದಿರುತ್ತವೆ. ಅವು ಆತ್ಮನೊಬ್ಬನೇ ನಿಜವಾಗಿರುವ ಪರಮಾರ್ಥ ಎಂಬುದನ್ನು ಅಧ್ಯಾರೋಪಾಪವಾದನ್ಯಾಯದಿಂದ ತಿಳಿಸಿಕೊಡುತ್ತವೆ. ಉಪನಿಷದ್ವಾಕ್ಯಗಳು ಕಲ್ಪಿಸಿಕೊಂಡಿರುವ ಅಧ್ಯಾರೋಪವೆಲ್ಲವೂ ಕೆಲಕೆಲವು ಅಧ್ಯಾರೋಪಗಳನ್ನು ಕಳೆದು ಕೊನೆಗೆ ಆತ್ಮನಲ್ಲಿ ಯಾವ ವಿಕಲ್ಪವೂ ನಿಜವಾಗಿಲ್ಲ ಎಂಬುದನ್ನು ತಿಳಿಸಿಕೊಡುವದರಲ್ಲಿಯೇ ಕೊನೆಗಾಣುವವು, ಕೊನೆಗೆ ಅವೂ ಇಲ್ಲವಾಗುವವು. **ನಿಜವಾಗಿ ಅನರ್ಥವೂ ಇಲ್ಲ, ಅನರ್ಥಕ್ಕೆ ಕಾರಣವಾದ ಅಧ್ಯಾಸವೂ ಇಲ್ಲ – ಎಂಬುದನ್ನು ತಿಳಿಸಿಕೊಡುವದೇ ಉಪನಿಷತ್ತುಗಳ ಗುರಿ.** ಉಪನಿಷತ್ತುಗಳ ಶ್ರವಣಕ್ಕೂ ಪ್ರಮಾತೃತ್ವ, ಕರ್ತೃತ್ವ, ಭೋಕ್ತೃತ್ವ – ಎಂಬ ಅಧ್ಯಾಸವು ಮೊದಲು ಇದ್ದೇಇರುತ್ತದೆ; ಆದರೆ ಅವುಗಳಿಂದಾದ ಜ್ಞಾನವು ಬಂದಾಗ ಅವು ಯಾವವೂ ನಿಜವಾಗಿರಲಿಲ್ಲ ಎಂಬುದು ಸ್ಫುಟವಾಗುವದು.

'ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗಿರುತ್ತಾನೆ', 'ಪರಮಪುರುಷಾರ್ಥವನ್ನು ಪಡೆದುಕೊಳ್ಳುತ್ತಾನೆ, ಸರ್ವಕಾಮಗಳನ್ನು ಪಡೆದುಕೊಳ್ಳುತ್ತಾನೆ' ಎಂದು ಶ್ರುತಿಗಳು ಹೇಳುವದರ ಅಭಿಪ್ರಾಯವೇನೆಂದರೆ, ಈಗಲೂ ನೀವು ಬ್ರಹ್ಮವೇ ಆಗಿರುತ್ತೀರಿ; ಹೀಗೆಂಬುದು ವೇದಾಂತಜ್ಞಾನದಿಂದ ಸ್ಪಷ್ಟವಾಗುತ್ತದೆ. ಈಗಲೂ ನೀವು ಆಪ್ತಕಾಮರೇ ಆಗಿರುತ್ತೀರಿ – ಹೀಗೆಂಬುದು ವೇದಾಂತಜ್ಞಾದಿಂದ ಮನದಟ್ಟಾಗುತ್ತದೆ.

ಉಪನಿಷತ್ತುಗಳ ಉಪದೇಶದ ಸಾರವು ಇಷ್ಟೇ ಎಂಬುದನ್ನು ಉಪನಿಷದ್ವಾಕ್ಯಗಳ ವಿಚಾರದಿಂದ ಗೊತ್ತುಮಾಡಿಕೊಡುವದರಿಂದ ಬಾದರಾಯಣರು ಬರೆದಿರುವ ಬ್ರಹ್ಮಸೂತ್ರರೂಪವಾಗಿರುವ ಶಾಸ್ತ್ರಕ್ಕೆ **'ವೇದಾಂತ**

**ಮೀಮಾಂಸಾಶಾಸ್ತ್ರ'** ಎಂಬ ಹೆಸರು ಬಂದಿರುತ್ತದೆ. ನಾವು ಶಾರೀರಕರು, ಶರೀರೇಂದ್ರಿಯ ಮನಸ್ಸುಗಳುಳ್ಳವರು – ಎಂಬ ಭಾವನೆಯನ್ನು ತತ್ತ್ವವಿಚಾರದಿಂದ ಕಳೆದುಹಾಕಿ "ನಾವು ನಿತ್ಯಶುದ್ಧಬುದ್ಧಮುಕ್ತಸ್ವರೂಪವಾದ ಬ್ರಹ್ಮವೇ" ಎಂಬ ಅನುಭವವನ್ನು ತೋರಿಸಿಕೊಡುವದರಿಂದ ಈ ಶಾಸ್ತ್ರಕ್ಕೆ **'ಶಾರೀರಕ ಮೀಮಾಂಸಾ ಶಾಸ್ತ್ರ'** ಎಂಬ ಹೆಸರೂ ಬಂದಿರುತ್ತದೆ.

**ನಿಜವಾಗಿರುವ ಪರಮಾರ್ಥತತ್ತ್ವವೊಂದೇ ನಮ್ಮ ನಿಜವಾದ ಸ್ವರೂಪವು. ನಮಗೆ ಹೋಗಬೇಕಾಗಿರುವ ಅವಿದ್ಯೆಯಿಲ್ಲ, ಬರಬೇಕಾಗಿರುವ ವಿದ್ಯೆಯಿಲ್ಲ – ಎಂಬುದನ್ನು ತಿಳಿಸಿಕೊಡುವದೇ ವೇದಾಂತದ ಗುರಿ ಎಂಬುದೇ ಶಂಕರ ಭಗವತ್ಪಾದರವರು ಉಪದೇಶಿಸಿರುವ ಶಂಕರತತ್ತ್ವ.**

**॥ ಹರಿಃ ಓಂ ತತ್ಸತ್ ॥**

* * * * *

**ಶಂಕರಮಹಾಮನನ :- (30 ಪುಟಗಳು; 5ನೆಯ ಮುದ್ರಣ; ಬೆಲೆ ರೂ.10/-)**
ಇದರಲ್ಲಿ ವೇದಾಂತಪ್ರಕ್ರಿಯೆಯ ಗುಟ್ಟನ್ನೆಲ್ಲ ಶ್ರೀ ಶಂಕರಭಗವತ್ಪಾದರ ಅಮೃತವಾಣಿಯಿಂದಲೇ (ಪ್ರಸ್ಥಾನತ್ರಯ ಭಾಷ್ಯಗಳಿಂದಲೇ) ಹೊರಗೆಡವಿದೆ. ಹೊಸದಾಗಿ ವೇದಾಂತವನ್ನು ಓದುವವರಿಗೆ ವೇದಾಂತದ ಒಟ್ಟು ಉಪದೇಶವನ್ನೂ, ಮೊದಲೇ ಓದಿರುವವರಿಗೆ ಅನುಸಂಧಾನಕ್ಕೆ ತಕ್ಕ ಸಂಗ್ರಹವನ್ನೂ ಒದಗಿಸುವದು.

**ಶಾಂಕರವೇದಾಂತದ ಮೂಲತತ್ತ್ವಗಳು :- (111 ಪುಟಗಳು; 4ನೆಯ ಮುದ್ರಣ; ಬೆಲೆ ರೂ.40/-)**
ಅಧ್ಯಾತ್ಮವಿದ್ಯೆಯು ಸಾರ್ವತ್ರಿಕವೂ, ಬದುಕಿರುವಾಗಲೇ ಫಲವನ್ನು ಜಿಜ್ಞಾಸುಗಳು ಪಡೆದುಕೃತಾರ್ಥರಾಗಬಹುದೆಂದೂ ಅಧ್ಯಾತ್ಮಚಿಂತಕರಿಗೆ ಜೀವನ್ಮುಕ್ತಿಯು ದೊರೆತೇ ದೊರೆಯುವದೆಂದೂ ಶಾಸ್ತ್ರೀಯಪ್ರಕ್ರಿಯೆಯ ಆಧಾರದಿಂದಲೂ ಅನುಭವದ ಆಧಾರದಿಂದಲೂ ಶ್ರೀಶ್ರೀಗಳವರು ತಿಳಿಸಿರುತ್ತಾರೆ. ಶಂಕರರ ಪರಮಸಿದ್ಧಾಂತವನ್ನು ಅರಿಯಲು ಈ ಗ್ರಂಥವು ಸಹಕಾರಿಯಾಗಿದೆ.

**ಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು :- (400 ಪುಟಗಳು; 4ನೆಯ ಮುದ್ರಣ; ಬೆಲೆ ರೂ.120/-)**
ಶ್ರೀ ಶಂಕರಾಚಾರ್ಯರು ಪರಮಾರ್ಥವು ಎಂದಿಗೂ ಬಾಧಿತವಾಗತಕ್ಕದ್ದಲ್ಲ, ಅದು ಯಾವೊಂದು ದೇಶಕಾಲಕ್ಕೆ ಮೀಸಲಾಗಿರತಕ್ಕದ್ದಲ್ಲ ಎಂಬುದನ್ನು ಉಪನಿಷತ್ತುಗಳ ಆಧಾರದಿಂದ ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ನಿರೂಪಿಸಿದ್ದಾರೆ. ಎಂದಿಗೂ ಬದಲಾಗದ ತತ್ತ್ವದ ಆಧಾರದಮೇಲೆ ಅವರ ಉಪದೇಶಗಳು ನಿಂತಿರುವದರಿಂದ ಅವು ಸರ್ವಸಮ್ಮತವೆಂದು ಶ್ರೀಶ್ರೀಗಳವರು ಈ ಉಪನ್ಯಾಸಗಳಲ್ಲಿ ನಿರೂಪಿಸಿರುತ್ತಾರೆ. ಇಲ್ಲಿ ಶ್ರುತಿಯುಕ್ತ್ಯನುಭವಗಳ ಆಧಾರದಿಂದ ತತ್ತ್ವವನ್ನೂ ಸಾಧನಕ್ರಮವನ್ನೂ ವಿಂಗಡವಾಗಿ ಪ್ರತಿಪಾದಿಸಿದ್ದಾರೆ. ಭಾಷ್ಯ ವಿರುದ್ಧವಾದ ವಾದಗಳನ್ನೆಲ್ಲ ನಿರಾಕರಿಸಿ ಜಿಜ್ಞಾಸುಗಳ ಸಂದೇಹವನ್ನು ದೂರೀಕರಿಸಿದ್ದಾರೆ. ಶ್ರೀ ಶಂಕರಾಚಾರ್ಯರ ಉಪದೇಶಗಳನ್ನು ಇದ್ದದ್ದು ಇದ್ದ ಹಾಗೆಯೇ ತಿಳಿಯಬೇಕೆಂಬ ಜಿಜ್ಞಾಸುಗಳಿಗೆ ಉಪಯುಕ್ತವಾದ ಗ್ರಂಥವು.

**ಶಾಂಕರವೇದಾಂತ ಪ್ರಕ್ರಿಯೆ :- (84 ಪುಟಗಳು; 4ನೆಯ ಮುದ್ರಣ; ಬೆಲೆ ರೂ.20/-)**
ಹೊಸದಾಗಿ ವೇದಾಂತವನ್ನು ಅಭ್ಯಾಸಮಾಡವವರಿಗ ವೇದಾಂತಪ್ರಕ್ರಿಯೆಯ ರೂಪರೇಖೆಯನ್ನು ಇದರಲ್ಲಿ ವಿವರಿಸಿದೆ. ಅನುಸಂಧಾನಕ್ಕೆ ಬೇಕಾದ ಶ್ರುತಿವಾಕ್ಯಗಳನ್ನೂ ಭಾಷ್ಯವಾಕ್ಯಗಳನ್ನೂ ಅಲ್ಲಲ್ಲಿ ಕೊಟ್ಟು ವಿಷಯವನ್ನು ಸಪ್ರಮಾಣವಾಗಿ ಪ್ರತಿಪಾದಿಸಿರುತ್ತದೆ.

**ಶಂಕರವೇದಾಂತಸಾರ :- (302 ಪುಟಗಳು; 3ನೆಯ ಮುದ್ರಣ; ಬೆಲೆ ರೂ.80/-)**
ಶ್ರೀ ಶ್ರೀಗಳವರು ತಮ್ಮ ಮನನಕ್ಕಾಗಿಯೇ ಬರೆದುಕೊಂಡ ಅಮೋಘ ಗ್ರಂಥವಿದು. ಇದರಲ್ಲಿ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅಲ್ಲಲ್ಲಿ ಒಂದೇ ವಿಷಯಕ್ಕೆ ಆಚಾರ್ಯರು ಬರೆದಿರುವ ಅಭಿಪ್ರಾಯಗಳನ್ನೆಲ್ಲ ಒಂದುಗೂಡಿಸಿ ಮೂಲಭಾಷ್ಯವಾಕ್ಯಗಳ ಸಮೇತ 28 ಪಾಠಗಳಾಗಿ ವಿಂಗಡಿಸಿ ಬರೆದು, ವಿವರಣೆಯನ್ನೂ ಕೊಟ್ಟಿರುತ್ತಾರೆ. ಭಾಷ್ಯಗ್ರಂಥಗಳನ್ನು ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೂ ಉಳಿದ ಜಿಜ್ಞಾಸುಗಳಿಗೆ ಇದು ಭಾಷ್ಯರತ್ನಕೋಶದಂತಿದೆ ಎನ್ನಬಹುದು. ಕನ್ನಡದಲ್ಲಿ ಇಂಥ ಗ್ರಂಥವು ಇನ್ನೊಂದಿಲ್ಲ.

**ಶಂಕರಸಿದ್ಧಾಂತ (ಮೂಲಾವಿದ್ಯಾ ವಿಮರ್ಶೆ) :- (92 ಪುಟಗಳು; 3ನೆಯ ಮುದ್ರಣ; ಬೆಲೆ ರೂ.20/-)**
ಶಂಕರಸಿದ್ಧಾಂತವನ್ನು ಪುಷ್ಟಿಗೊಳಿಸುವ ಭರದಲ್ಲಿ ವ್ಯಾಖ್ಯಾನಕಾರರೂ ಕೆಲವು ಭಾಷ್ಯಕಾರರೂ, ಇಲ್ಲಸಲ್ಲದ ದೋಷಗಳನ್ನು ಆರೋಪಸಿದ್ದರು. 'ಸಹಸ್ರಚಿತ್ತಾರವನ್ನು ಮಸಿ ನುಂಗಿತು' ಎಂಬ ಗಾದೆಗನುಸಾರವಾಗಿ ಈಗ ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಮೂಲಾವಿದ್ಯಾವಾದನ್ನೂ, ಅತಿಸುಂದರ ಚಿತ್ರದಂತೆ ಇರುವ ಆಚಾರ್ಯರ ಭಾಷ್ಯದ ವೇದಾಂತ ಪ್ರಕ್ರಿಯೆಗೆ ಮಸಿಬಳಿಯುವಂತಿರುವ ವ್ಯಾಖ್ಯಾನಗಳನ್ನೂ ದೂರೀಕರಿಸಿ ಆಚಾರ್ಯರ ಭಾಷ್ಯವಾಕ್ಯಗಳಿಂದಲೇ ಶಂಕರಹೃದಯವನ್ನು ವಾಚಕರು ಮನಗಾಣುವಂತೆ ವಿವರಿಸುವ ವ್ಯಾಖ್ಯಾನ. ಮೂಲಾವಿದ್ಯೆಯ ವಾಸನೆಯನ್ನು ಇಟ್ಟುಕೊಳ್ಳದೆಯೇ, ಅದ್ವೈತವನ್ನು ಹೇಗೆ ನೇರಾಗಿ ಅರಿತುಕೊಳ್ಳಬಹುದೆಂಬುದಕ್ಕೆ ಇಲ್ಲಿ ಅನೇಕ ಸೂಚನೆಗಳು ದೊರೆಯುವವು. ''ಮೂಲವಿದ್ಯಾನಿರಾಸಃ ಅಥವಾ ಶಂಕರಹೃದಯಮ್'' ಎಂಬ ಶ್ರೀ ಶ್ರೀಗಳವರ ಸಂಸ್ಕೃತ ಗ್ರಂಥದಲ್ಲಿರುವ ಅತಿಮುಖ್ಯಾಂಶಗಳನ್ನು ಮಾತ್ರ ಇಲ್ಲಿ ಸಪ್ರಮಾಣವಾಗಿ ಸರಳವಾದ ಕನ್ನಡದಲ್ಲಿಟ್ಟಿರುತ್ತದೆ.

ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಅಧ್ಯಾತ್ಮ ಪ್ರಕಾಶ ಮಾಸಪತ್ರಿಕೆಯಲ್ಲಿ ಬರೆದ 'ಶಂಕರತತ್ತ್ವ'ವೆಂಬ ಹೆಸರಿನ ಲೇಖನಗಳನ್ನೆಲ್ಲ ಸೇರಿಸಿ ಈ ಪುಸ್ತಕವನ್ನು ಬೆಳಕಿಗೆ ಹಿಡಿದಿದೆ.

ಶಂಕರರ ಚರಿತ್ರೆ, ಶಂಕರರು ಉಪದೇಶಿಸಿರುವ ತತ್ತ್ವ- ಇವುಗಳನ್ನು ಕುರಿತು ವಿಚಾರ ಮಾಡುವವರಿಗೆ ಆಚಾರ್ಯರ ಚರಿತ್ರೆಯನ್ನು ಯಥಾವತ್ತಾಗಿ ತಿಳಿಸುವ ಪ್ರಾಮಾಣಿಕ ಗ್ರಂಥಗಳು ಅವಕ್ಕೆ ಬೇಕಾದ ಸರ್ವಸಮ್ಮತ ವಿಷಯಗಳು ದೊರೆಯುವಂತಿಲ್ಲ. ಆದರೆ ಅವರ ಉಪದೇಶಗಳು ನಮ್ಮ ಮುಂದೆ ಪ್ರಸ್ಥಾನತ್ರಯ ಭಾಷ್ಯಗಳ ಮೂಲಕ ದೊರೆಯುತ್ತಿವೆ. ಅವುಗಳೇ ಶಂಕರತತ್ತ್ವವು.

ಶಂಕರತತ್ತ್ವವೆಂದರೆ 1) ಮಂಗಲಕರವಾದ ತತ್ತ್ವ, 2) ಶಂಕರ ಭಗವತ್ಪಾದರ ವಿಷಯದ ತತ್ತ್ವ, 3) ಶಂಕರ ಭಗವತ್ಪಾದಾಚಾರ್ಯರು ಉಪದೇಶಿಸಿರುವ ತತ್ತ್ವ- ಇಷ್ಟನ್ನೂ ಗ್ರಹಿಸಬೇಕು. ವೇದಾಂತಗಳು ತಿಳಿಸಿಕೊಡುವ ಉಪದೇಶಗಳ ಮೂಲಕ ಆ ಜ್ಞಾನವನ್ನು ಪಡೆದುಕೊಂಡರೆ ಮತ್ತೆ ಭ್ರಾಂತನಾಗುವದಿಲ್ಲ. ಜೀವನೂ ಈಶ್ವರನೂ ಒಬ್ಬ ಆತ್ಮನೇ ಎಂಬ ತತ್ತ್ವವನ್ನು ಮುಮುಕ್ಷುವು ಕಂಡುಕೊಳ್ಳಬಹುದು. ಅಂತಹ ಉಪದೇಶಗಳು ಶಂಕರಭಾಷ್ಯಗಳಲ್ಲಿವೆ. ಅವರು ಉಪದೇಶಿಸಿರುವ ತತ್ತ್ವವೇ ಜೀವರುಗಳ ಅಮಂಗಲವಾದ ಮೋಹವನ್ನು ಕಳೆದು, ಪರಮಾರ್ಥ ತತ್ತ್ವವೇ ತಾವೆಂಬ ಮಂಗಲಕರವಾದ ತತ್ತ್ವಜ್ಞಾನವನ್ನು ತಂದುಕೊಡುತ್ತದೆ. ಆಗ ನಮಗೆ ಹೋಗಬೇಕಾಗಿರುವ ಅವಿದ್ಯೆಯಿಲ್ಲ, ಬರಬೇಕಾಗಿರುವ ವಿದ್ಯೆಯಿಲ್ಲ- ಎಂಬುದನ್ನು ತಿಳಿಸಿಕೊಡುವದೇ ವೇದಾಂತದ ಗುರಿ ಎಂಬುದೇ ಶಂಕರಭಗವತ್ಪಾದರವರು ಉಪದೇಶಿಸಿರುವ **ಶಂಕರತತ್ತ್ವ** ಎಂಬುದು ಸ್ಫುಟವಾಗುವದು.

2017 ₹ 40/-